Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

(EXTRAORDINARY)
(ವಿಶೇಷ ಸಂಚಿಕೆ)

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ.

| | | | |
|---|---|---|---|
| सं–1 | नई दिल्ली सोमवार, जनवरी 20, 1992 | पुष्य 30, 1913 (शक) | खण्ड–13 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಜನವರಿ ೨೦, ೧೯೯೨ | ಪುಷ್ಯ ೩೦, ೧೯೧೩ (ಶಕ) | ಸಂಪುಟ ೧೩ |
| No. 1 | New Delhi Monday, January 20, 1992 | Pushya 30, 1913 (Saka) | Vol. 13 |


## Ministry of Law, Justice & Company Affairs

(Legislative Department)

New Delhi, August 26, 1991.

The translations in Kannada of the following Acts, namely-(1) The Coinage Act, 1906 (2) The Water (Prevention and control of pollution) Act, 1974 (3) The Civil Defence Act, 1968 (4) The Citizenship Act, 1955 (5) The Trade Unions Act, 1926 (6) The Suits Valuation Act, 1887 (7) The Standards of Weights and Measures (Enforcement) Act, 1985 (8) The Reformatry Schools Act, 1897 (9) The Births, Deaths and Marriages Registration Act, 1886 are hereby published under the authority of the President and shall be deemed to be Authoritative Texts thereof in Kannada under Clause (a) of Section 2 of the Authoritative Texts (Central Laws) Act, 1973 (50 of 1973)

ಕೆಳಕಂಡ ಅಧಿನಿಯಮಗಳು ಎಂದರೆ— (೧) ನಾಣ್ಯ ತಯಾರಿಕೆ ಅಧಿನಿಯಮ, ೧೯೦೬ (2) ಜಲ (ಮಾಲಿನ್ಯ [illegible] ಮತ್ತು ನಿಯಂತ್ರಣ) ಅಧಿನಿಯಮ, ೧೯೭೪ (೩) ನಾಗರಿಕ ರಕ್ಷಣಾ ಅಧಿನಿಯಮ, ೧೯೬೮ (೪) ನಾಗರಿಕತ್ವ [illegible], ೧೯೫೫ (೫) ವೃತ್ತಿ ಸಂಘ ಅಧಿನಿಯಮ, ೧೯೨೬ (೬) ದಾವೆ ಮೌಲ್ಯ ನಿಗದಿ ಅಧಿನಿಯಮ, ೧೮೮೭ (೭) [illegible] ಅಳತೆ ಮಾನಕಗಳ (ಜಾರಿ) ಅಧಿನಿಯಮ, ೧೯೮೫ (೮) ಸುಧಾರಣಾ ಶಾಲೆಗಳ ಅಧಿನಿಯಮ, ೧೮೯೭ (೯) [illegible] ಮತ್ತು ವಿವಾಹ ನೋಂದಣಿ ಅಧಿನಿಯಮ, ೧೮೮೬ ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ [illegible] ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, ೧೯೭೩ ([illegible])ರ ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು [illegible].

Ministry of Law, Justice & Company Affairs

(Legislative Department)

New Delhi, November 26, 1991.

The Translations in Kannada of the following namely—(1) The Indian Red cross Society Act, 1920 (2) The Medical Termination of Pregnancy Act, 1971 (3) Police Act, 1888 (4) The Carriers Act, 1865 (5) The Interest Act, 1978 (6) The Usurious Loans Act, 1918 (7) The Wild Birds and Animals Protection Act, 1912 (8) The Indecent Representation of Women (Prohibition) Act, 1986 (9) The Unlawful Activities (Prevention) Act, 1967 (10) The Judicial Officers Protection Act, 1850 (11) The Orphanages and other Charitable Homes (Supervision and Control) Act, 1960 (12) The Insecticides Act, 1968 (13) The Indian Post Office Act, 1898 (14) The Departmental Inquiries (Enforcement of Attendance of Witnesses and Production of Documents) Act, 1972 (15) The Air (Prevention and Control of Pollution) Act, 1981 (16) The Family Courts Act, 1984 (17) The Authoritative Texts (Central Laws) Act, 1973 (18) The Prize Chits and Money Circulation Schemes (Banning) Act, 1978 (19) The Life Insurance (Emergency Provisions) Act, 1956 (20) The Poisons Act, 1919 (21) The Oaths Act, 1969 (22) The Indian Majority Act, 1875 are hereby published under the authority of the President and shall be deemed to be Authoritative Texts thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಅಧಿನಿಯಮ, 1920 (2) ವೈದ್ಯಕೀಯ ಗರ್ಭಸಮಾಪನ ಅಧಿನಿಯಮ, 1971 (3) ಪೊಲೀಸು ಅಧಿನಿಯಮ, 1888 (4) ವಾಹಕ ಅಧಿನಿಯಮ, 1865 (5) ಬಡ್ಡಿ ಅಧಿನಿಯಮ, 1978 (6) [illegible] ಸಾಲಗಳ ಅಧಿನಿಯಮ, 1918 (7) ವನ್ಯ ಪಕ್ಷಿ ಮತ್ತು ಪ್ರಾಣಿ ಸಂರಕ್ಷಣಾ ಅಧಿನಿಯಮ, 1912 (8) [illegible] ಅಸಭ್ಯ ರೂಪಣಾ (ನಿಷೇಧ) ಅಧಿನಿಯಮ, 1986 (9) ಕಾನೂನು ಬಾಹಿರ ಚಟುವಟಿಕೆ (ಪ್ರತಿಬಂಧ) ಅಧಿನಿಯಮ, 1967 (10) ನ್ಯಾಯಿಕ ಅಧಿಕಾರಿಗಳ ಸಂರಕ್ಷಣೆ ಅಧಿನಿಯಮ, 1850 (11) ಅನಾಥಾಲಯ ಮತ್ತು ಇತರ ಧರ್ಮಾರ್ಥ ಗೃಹ (ಮೇಲ್ವಿಚಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1960 (12) ಕೀಟನಾಶಕ ಅಧಿನಿಯಮ, 1968 (13) ಭಾರತ [illegible] ಕಛೇರಿ ಅಧಿನಿಯಮ, 1988 (14) ಇಲಾಖಾ ವಿಚಾರಣೆ (ಸಾಕ್ಷಿಗಳ ಹಾಜರಾತಿ ಮತ್ತು ದಸ್ತಾವೇಜುಗಳ [illegible] ಒತ್ತಾಯಪಡಿಸುವ) ಅಧಿನಿಯಮ, 1972 (15) ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1981 (16) ಕುಟುಂಬ ನ್ಯಾಯಾಲಯ ಅಧಿನಿಯಮ, 1984 (17) ಅಧಿಕೃತ ಪಾಠ (ಕೇಂದ್ರ ಕಾನೂನು) ಅಧಿನಿಯಮ, 1973 (18) ಬಹುಮಾನ ಚೀಟಿ ಮತ್ತು ಹಣ ಪರಿಚಲನ ಯೋಜನೆ (ಬಹಿಷ್ಕರಣ) ಅಧಿನಿಯಮ, 1978 (19) ಜೀವವಿಮಾ ತುರ್ತು (ಉಪಬಂಧ) ಅಧಿನಿಯಮ, 1956 (20) ವಿಷ ಅಧಿನಿಯಮ, 1919 (21) ಪ್ರಮಾಣವಚನಗಳ ಅಧಿನಿಯಮ, 1969 (22) ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

Ministry of Law, Justice & Company Affairs

(Legislative Department)

New Delhi, December 16, 1991.

The Traslations in Kannada of the following Acts namely (1) The Copyright Act, 1957 (2) The Child Marriage Restraint Act, 1929 (3) The Revenue Recovery Act, 1890 (4) The Inter State Water Disputes Act, 1956 (5) The Hindu Minority and Guardianship Act, 1956 are published under the authority of the President and shall be deemed to be Authoritative Texts thereof in Kannada under clause (a) of Section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು ಎಂದರೆ—(1) ಕೃತಿಸ್ವಾಮ್ಯ ಅಧಿನಿಯಮ, 1957 (2) ಬಾಲವಿವಾಹ ಪ್ರತಿಬಂಧಕ ಅಧಿನಿಯಮ, 1929 (3) ಕಂದಾಯ ವಸೂಲಿ ಅಧಿನಿಯಮ, 1890 (4) [illegible] ಅಧಿನಿಯಮ, 1956 (5) ಹಿಂದೂ ಅಪ್ರಾಪ್ತವಯಸ್ಕತೆ ಮತ್ತು [illegible] 1956 ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ [illegible] ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ [illegible] ಮೇರೆಗೆ ಇವುಗಳನ್ನು ಆ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸ[illegible]

# ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974

**(1974ರ ಅಧಿನಿಯಮ ಸಂಖ್ಯೆ 6)**

[23ನೇ ಮಾರ್ಚ್ 1974]

[26ನೇ ಆಗಸ್ಟ್ 1991ರಂದು ಜಾರಿಯಲ್ಲಿದ್ದಂತೆ]

ಜಲಮಾಲಿನ್ಯದ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಮತ್ತು ನೀರು ಆರೋಗ್ಯಕರವಾಗಿರುವುದನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಅಥವಾ ಆರೋಗ್ಯಕರವಾಗಿರುವಂತೆ ಪೂರ್ವಸ್ಥಿತಿಗೆ ತರುವುದಕ್ಕಾಗಿ, ಹಿಂದೆ ಹೇಳಿದ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ, ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಮಂಡಲಿಗಳನ್ನು ಸ್ಥಾಪಿಸುವುದಕ್ಕಾಗಿ, ಅದಕ್ಕೆ ಸಂಬಂಧಿಸಿದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಅಂಥ ಮಂಡಲಿಗಳಿಗೆ ಪ್ರದಾನ ಮಾಡುವುದಕ್ಕಾಗಿ ಮತ್ತು ವಹಿಸಿಕೊಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಜಲಮಾಲಿನ್ಯದ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಮತ್ತು ನೀರು ಆರೋಗ್ಯಕರವಾಗಿರುವುದನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಅಥವಾ ಆರೋಗ್ಯಕರವಾಗಿರುವಂತೆ ಪೂರ್ವ ಸ್ಥಿತಿಗೆ ತರುವುದಕ್ಕಾಗಿ, ಹಿಂದೆ ಹೇಳಿದ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ, ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಮಂಡಲಿಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಪಡುವ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಅಂಥ ಮಂಡಲಿಗಳಿಗೆ ಪ್ರದಾನ ಮಾಡುವುದಕ್ಕಾಗಿ ಮತ್ತು ವಹಿಸಿಕೊಡುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಮತ್ತು ಸಂವಿಧಾನದ 249 ಮತ್ತು 250ನೇ ಅನುಚ್ಛೇದಗಳಲ್ಲಿ ಉಪಬಂಧಿಸಿರುವಂತೆ ಹೊರತು, ಹಿಂದೆ ಹೇಳಿದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ರಾಜ್ಯಗಳಿಗಾಗಿ ಕಾನೂನುಗಳನ್ನು ರಚಿಸಲು ಸಂಸತ್ತು ಅಧಿಕಾರ ಹೊಂದಿಲ್ಲದಿರುವುದರಿಂದ ;

ಮತ್ತು ಹಿಂದೆ ಹೇಳಿದ ವಿಷಯಗಳನ್ನು ಕಾನೂನಿನ ಮೂಲಕ ಸಂಸತ್ತು ಅಸ್ಸಾಂ, ಬಿಹಾರ್, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ವಿನಿಯಮಿಸತಕ್ಕದೆಂಬುದಾಗಿ ಆ ರಾಜ್ಯಗಳ ವಿಧಾನ ಮಂಡಲಗಳ ಎಲ್ಲ ಸದನಗಳು, ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಅನುಸಾರವಾಗಿ ನಿರ್ಣಯಗಳನ್ನು ಅನುಮೋದಿಸಿರುವುದರಿಂದ;

ಇದು ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:—

## ಅಧ್ಯಾಯ-I

### ಪ್ರಾರಂಭಿಕ

**1. ಚಿಕ್ಕ ಹೆಸರು, ಅನ್ವಯ ಮತ್ತು ಪ್ರಾರಂಭ:**—(1) ಈ ಅಧಿನಿಯಮವನ್ನು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಮೊದಲಿಗೆ, ಇಡೀ ಅಸ್ಸಾಂ, ಬಿಹಾರ್, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ಮತ್ತು ಸಂಘರಾಜ್ಯ ಕ್ಷೇತ್ರಗಳಿಗೆ ಅನ್ವಯಿಸುತ್ತದೆ ಮತ್ತು ಇದು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಆ ಬಗ್ಗೆ ನಿರ್ಣಯವನ್ನು ಅನುಮೋದಿಸಿ ಈ ಅಧಿನಿಯಮವನ್ನು ಅಂಗೀಕರಿಸುವಂಥ ಇತರ ರಾಜ್ಯಗಳಿಗೆ ಅನ್ವಯವಾಗತಕ್ಕದ್ದು.

(3) ಇದು ಅಸ್ಸಾಂ, ಬಿಹಾರ್, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮತ್ತು ಸಂಘರಾಜ್ಯ ಕ್ಷೇತ್ರಗಳಲ್ಲಿ ಕೂಡಲೇ ಮತ್ತು ಸಂವಿಧಾನದ 252ನೇ ಅನುಚ್ಛೇದದ (1)ನೇ ಖಂಡದ ಮೇರೆಗೆ ಈ ಅಧಿನಿಯಮವನ್ನು ಅಂಗೀಕರಿಸುವ ಯಾವುದೇ ಇತರ ರಾಜ್ಯಗಳಲ್ಲಿ ಹಾಗೆ ಅಂಗೀಕರಿಸಿದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಯಾವುದೇ ರಾಜ್ಯ ಅಥವಾ ಸಂಘ ರಾಜ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಈ ಅಧಿನಿಯಮದ ಪ್ರಾರಂಭಕ್ಕೆ ಈ ಅಧಿನಿಯಮದಲ್ಲಿ ಮಾಡಿದ ಯಾವುದೇ ಉಲ್ಲೇಖವು, ಅಂಥ ರಾಜ್ಯ ಅಥವಾ ಸಂಘ ರಾಜ್ಯ ಕ್ಷೇತ್ರಗಳಲ್ಲಿ ಈ ಅಧಿನಿಯಮವು ಜಾರಿಗೆ ಬಂದಂಥ ದಿನಾಂಕ ಎಂದು ಅರ್ಥ.

2. ಪರಿಭಾಷೆಗಳು:— ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, —

(ಕ) "ಮಂಡಲಿ" ಎಂದರೆ ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿ ;

(ಖ) "ಕೇಂದ್ರ ಮಂಡಲಿ" ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಲಾದ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕೇಂದ್ರ ಮಂಡಲಿ ;

(ಗ) "ಸದಸ್ಯ" ಎಂದರೆ ಮಂಡಲಿಯ ಸದಸ್ಯ ಮತ್ತು ಅದರ ಅಧ್ಯಕ್ಷನನ್ನು ಒಳಗೊಳ್ಳುತ್ತದೆ ;

(ಫ) ಯಾವುದೇ ಕಾರ್ಖಾನೆ ಅಥವಾ ಆವರಣದ ಸಂಬಂಧದಲ್ಲಿ "ಅಧಿಭೋಗದಾರ" ಎಂದರೆ ಕಾರ್ಖಾನೆ ಅಥವಾ ಆವರಣಗಳ ವ್ಯವಹಾರಗಳ ಮೇಲೆ ನಿಯಂತ್ರಣ ಹೊಂದಿರುವ ವ್ಯಕ್ತಿ ಮತ್ತು ಸದರಿ ವ್ಯವಹಾರಗಳನ್ನು ವ್ಯವಸ್ಥಾಪಕ ಏಜೆಂಟನಿಗೆ ವಹಿಸಿರುವಲ್ಲಿ, ಅಂಥ ಏಜೆಂಟನನ್ನು ಕಾರ್ಖಾನೆಯ ಅಥವಾ ಆವರಣದ ಅಧಿಭೋಗದಾರನೆಂದು ಭಾವಿಸತಕ್ಕದ್ದು ;

(ಫಫ) 'ಹೊರದಾರಿ '' ಎಂಬುದು ಗ್ರಾಮಸಾರ ಅಥವಾ ಕಾರ್ಖಾನೆಯ ಕಶ್ಮಲ ಪ್ರವಾಹವನ್ನು ಅಥವಾ ಮಾಲಿನ್ಯಗೊಳಿಸುವ ಅಥವಾ ಮಾಲಿನ್ಯಗೊಳಿಸುವ ಸಂಭವವಿರುವ ಯಾವುದೇ ಇತರ ಹಿಡುವಳಿ ಜಮೀನುಗಳಿಂದ ಹರಿಯಿಸುವ ಕಶ್ಮಲವನ್ನು ಸಾಗಿಸುವ ತೆರೆದ ಅಥವಾ ಮುಚ್ಚಿರುವ ಯಾವುದೇ ಕಾಪು ಕೊಳವೆ ಅಥವಾ ಕಾಲುವೆಯನ್ನು ಒಳಗೊಳ್ಳುತ್ತದೆ;

(ಇ) "ಮಾಲಿನ್ಯ" ಎಂದರೆ ಸಾರ್ವಜನಿಕ ಆರೋಗ್ಯ ಅಥವಾ ಸಂರಕ್ಷತೆ ಅಥವಾ ಗೃಹ, ವಾಣಿಜ್ಯ, ಕೈಗಾರಿಕೆ, ಕೃಷಿ ಅಥವಾ ಇತರ ಕಾನೂನುಬದ್ಧ ಉಪಯೋಗಗಳಿಗೆ ಅಥವಾ ಪ್ರಾಣಿಗಳ ಅಥವಾ ಸಸ್ಯಗಳ ಅಥವಾ ಜಲಜೀವಿಗಳ ಜೀವಕ್ಕೆ ಮತ್ತು ಆರೋಗ್ಯಕ್ಕೆ ಉಪದ್ರವವನ್ನುಂಟು ಮಾಡಬಹುದಾದ ಅಥವಾ ಹಾನಿಯುಂಟು ಮಾಡುವ ಸಂಭವವಿರುವಂಥ ನೀರನ್ನು ಗಲೀಜು ಅಥವಾ ಕಶ್ಮಲಗೊಳಿಸಬಹುದಾದ ಅಥವಾ ಕಶ್ಮಲಗೊಳಿಸಬಹುದಾದ ಸಂಭವವಿರುವ ನೀರಿನ ಅಂಥ ಬೆರಕೆ ಅಥವಾ ನೀರಿನ ಭೌತಿಕ, ರಾಸಾಯನಿಕ ಅಥವಾ ಜೈವಿಕ ಗುಣಲಕ್ಷಣಗಳ ಬದಲಾವಣೆ ಅಥವಾ ನೀರಿಗೆ (ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ) ಯಾವುದೇ ಗ್ರಾಮಸಾರ ಅಥವಾ ಕಾರ್ಖಾನೆಯ ಕಶ್ಮಲ ಪ್ರವಾಹದ ಅಥವಾ ಯಾವುದೇ ಇತರ ದ್ರವ, ಅನಿಲ ಅಥವಾ ಘನ ವಸ್ತುಗಳ ಅಂಥ ಹರಿಸುವಿಕೆ ;

(ಚ) "ನಿಯಮಿಸಲಾದುದು" ಎಂದರೆ ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು ;

(ಛ) "ಹೊರಹರಿಯುವ ಗ್ರಾಮಸಾರ" ಎಂದರೆ ಯಾವುದೇ ಒಳಚರಂಡಿ ವ್ಯವಸ್ಥೆ ಅಥವಾ ಗ್ರಾಮಸಾರ ವಿಲೆ ಕಾಮಗಾರಿಗಳಿಂದ ಪ್ರವಹಿಸುವುದು ಮತ್ತು ಅದು ತೆರೆದ ಚರಂಡಿಗಳಿಂದ ಹರಿಯುವ ರೊಚ್ಚನ್ನು ಒಳಗೊಳ್ಳುವುದು ;

(ಛಛ) "ಗ್ರಾಮಸಾರ ಚರಂಡಿ" ಎಂದರೆ, ಗ್ರಾಮಸಾರ ಅಥವಾ ಕಾರ್ಖಾನೆಯ ಕಶ್ಮಲ ಪ್ರವಾಹವನ್ನು ಒಯ್ಯುವ ತೆರೆದ ಅಥವಾ ಮುಚ್ಚಿದ ಯಾವುದೇ ಕಾಪುಕೊಳವೆ ಅಥವಾ ಕಾಲುವೆ ;

(ಜ) "ರಾಜ್ಯ ಮಂಡಲಿ" ಎಂದರೆ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ 4ನೇ ಪ್ರಕರಣದ ಮೇರೆಗೆ ರಚಿಸಲಾದ ರಾಜ್ಯ ಮಂಡಲಿ ;

(ಝ) ಸಂಘ ರಾಜ್ಯ ಕ್ಷೇತ್ರದ ಸಂಬಂಧದಲ್ಲಿ "ರಾಜ್ಯ ಸರ್ಕಾರ '' ಎಂದರೆ ಸಂವಿಧಾನದ 239ನೇ ಅನುಚ್ಛೇದದ ಮೇರೆಗೆ ನೇಮಕಗೊಂಡ ಅದರ ಆಡಳಿತಗಾರ ;

(ಞ) "ತೊರೆ" ಎಂಬುದು —

(i) ನದಿ;

(ii) ಜಲಮಾರ್ಗ (ಹರಿಯುತ್ತಿರುವುದಾಗಲೀ ಅಥವಾ ತತ್ಕಾಲದಲ್ಲಿ ಒಣಗಿಹೋಗಿರುವುದಾಗಲೀ);

(iii) ಒಳನಾಡು ಜಲ (ನೈಸರ್ಗಿಕ ಅಥವಾ ಕೃತಕ) ;

(iv) ಅಂತರ್ಜಲ ;

(v) ಈ ಬಗ್ಗೆ ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಸರ್ಕಾರಿ ರಾಜಪತ್ರದಲ್ಲಿ ಸಂದರ್ಭಾನುಸಾರ, ಅಂಥ ವ್ಯಾಪ್ತಿ ಅಥವಾ ಅಂಥ ಬಿಂದುವಿಗೆ ನಿರ್ದಿಷ್ಟಪಡಿಸಬಹುದಾದಂಥ ಸಮುದ್ರ ಅಥವಾ ಉಬ್ಬರವಿಳಿತದ ನೀರು

—ಇವುಗಳನ್ನು ಒಳಗೊಳ್ಳುತ್ತದೆ.

(ಟ) '' ಕಾರ್ಖಾನೆ ಕಶ್ಮಲ ಪ್ರವಾಹ''ವು ಗೃಹ ಒಳಚರಂಡಿಯನ್ನು ಹೊರತುಪಡಿಸಿ, ಯಾವುದೇ ವ್ಯಾಪಾರ ಅಥವಾ ಕೈಗಾರಿಕೆಯನ್ನು ನಡೆಸುವ ಸಲುವಾಗಿ ಉಪಯೋಗಿಸುವ ಯಾವುವೇ ಆವರಣಗಳಿಂದ ಹೊರಹರಿಯುತ್ತಿರುವಂಥ ಯಾವುದೇ ದ್ರವ, ಅನಿಲ ಅಥವಾ ಘನ ಪದಾರ್ಥಗಳನ್ನು ಒಳಗೊಳ್ಳುತ್ತದೆ.

## ಅಧ್ಯಾಯ II

### ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಕೇಂದ್ರ ಮತ್ತು ರಾಜ್ಯ ಮಂಡಳಿಗಳು

3. **ಕೇಂದ್ರ ಮಂಡಳಿಯ ರಚನೆ:**—(1) ಕೇಂದ್ರ ಸರ್ಕಾರವು,(ಅಸ್ಸಾಂ, ಬಿಹಾರ, ಗುಜರಾತ್, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ಕೇರಳ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಮತ್ತು ಸಂಘ ರಾಜ್ಯ ಕ್ಷೇತ್ರಗಳಲ್ಲಿ ಈ ಅಧಿನಿಯಮವು ಪ್ರಾರಂಭದಿಂದ ಆರು ತಿಂಗಳುಗಳನ್ನು ಮೀರದಂಥ ದಿನಾಂಕವಾಗಿರುವ) ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಗೊತ್ತುಪಡಿಸಬಹುದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಮೇರೆಗೆ, ಆ ಮಂಡಳಿಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಲಾದ ಪ್ರಕಾರ್ಯಗಳನ್ನು ನಿರ್ವಹಿಸಲು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಕೇಂದ್ರ ಮಂಡಲಿಯೆಂದು ಕರೆಯಲಾಗುವ ಕೇಂದ್ರ ಮಂಡಲಿಯನ್ನು ರಚಿಸತಕ್ಕದ್ದು.

(2) ಕೇಂದ್ರ ಮಂಡಳಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:—

(ಕ) ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯದ ಬಗ್ಗೆ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಹೊಂದಿರುವ ಅಥವಾ ಹಿಂದೆ ಹೇಳಿದ ವಿಷಯಗಳೊಂದಿಗೆ ವ್ಯವಹರಿಸುವ ಸಂಸ್ಥೆಗಳ ಆಡಳಿತ ನಡೆಸುವಲ್ಲಿ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರುವ ಒಬ್ಬ ಪೂರ್ಣಕಾಲಿಕ ಅಧ್ಯಕ್ಷ;

(ಖ) ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಲು ಆ ಸರ್ಕಾರವು ನಾಮನಿರ್ದೇಶಿಸಬೇಕಾದ ಐವರನ್ನು ಮೀರದ ಸಂಖ್ಯೆಯ ಅಧಿಕಾರೇತರರು;

(ಗ) ರಾಜ್ಯ ಮಂಡಳಿಗಳ ಸದಸ್ಯರಿಂದ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಐವರಿಗೆ ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು, ಅವರ ಪೈಕಿ 4ನೇ ಪ್ರಕರಣದ (2)ನೇ ಉಪಪ್ರಕರಣದ (ಗ) ಖಂಡದಲ್ಲಿ ಉಲ್ಲೇಖಿಸಿರುವವರೊಳಗಿಂದ ಇಬ್ಬರಿಗೆ ಮೀರದಷ್ಟು ವ್ಯಕ್ತಿಗಳು ಇರತಕ್ಕದ್ದು;

(ಘ) ಕೃಷಿ, ಮೀನುಗಾರಿಕೆ ಅಥವಾ ಉದ್ಯಮ ಅಥವಾ ವ್ಯಾಪಾರದ ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಪ್ರತಿನಿಧಿಸತಕ್ಕದ್ದೆಂಬಂಥ ಯಾವುದೇ ಇತರ ಹಿತಾಸಕ್ತಿಯನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಮೂವರನ್ನು ಮೀರದಂಥ ಅಧಿಕಾರೇತರರು;

(ಙ) ಕೇಂದ್ರ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ಕೇಂದ್ರ ಸರ್ಕಾರದ ವ್ಯವಸ್ಥಾಪನೆಯಲ್ಲಿರುವ ಕಂಪನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಆ ಸರ್ಕಾರವು ನಾಮನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳು

(ಚ) ಜನಾರೋಗ್ಯ ಇಂಜಿನಿಯರಿಂಗ್‌ನಲ್ಲಿ ಅರ್ಹತೆ ಹೊಂದಿರುವ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯವಹಾರಿಕ ಅನುಭವವನ್ನು ಹೊಂದಿರುವ, ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಪೂರ್ಣಕಾಲಿಕ ಒಬ್ಬ ಸದಸ್ಯ ಕಾರ್ಯದರ್ಶಿ;

(3) ಕೇಂದ್ರ ಮಂಡಳಿಯು ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿ, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸ್ವತ್ತನ್ನು ಅರ್ಜನೆ ಮಾಡಲು, ಧಾರಣ ಮಾಡಲು, ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿದ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಹಿಂದೆ ಹೇಳಿದ ಹೆಸರಿನಿಂದ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

**4. ರಾಜ್ಯ ಮಂಡಲಿಗಳ ರಚನೆ:**–(1) ರಾಜ್ಯಸರ್ಕಾರವು, ಈ ಅಧಿನಿಯಮದ ಮೇರೆಗೆ ಮಂಡಲಿಗೆ ಪ್ರದಾನ ಮಾಡಿರುವ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸಲು, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹೆಸರಿನಲ್ಲಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ನೀಡುವ ಮೂಲಕ ಗೊತ್ತುಪಡಿಸಿದಂಥ ದಿನಾಂಕದಿಂದ ಜಾರಿಗೆ ಬರುವಂತೆ, ಒಂದು ರಾಜ್ಯ ಮಂಡಲಿಯನ್ನು ರಚಿಸತಕ್ಕದ್ದು.

(2) ರಾಜ್ಯ ಮಂಡಳಿಯು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಕ) ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ, ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯದ ಬಗ್ಗೆ ವಿಶೇಷ ಜ್ಞಾನ ಅಥವಾ ವ್ಯಾವಹಾರಿಕ ಅನುಭವವನ್ನು ಹೊಂದಿರುವ ಅಥವಾ ಹಿಂದೆ ಹೇಳಿದ ವಿಷಯಗಳೊಂದಿಗೆ ವ್ಯವಹರಿಸುವ ಸಂಸ್ಥೆಗಳ ಆಡಳಿತ ನಿರ್ವಹಿಸುವಲ್ಲಿ ಜ್ಞಾನ ಮತ್ತು ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರುವ ಅಧ್ಯಕ್ಷ:

ಪರಂತು, ಅಧ್ಯಕ್ಷನು ರಾಜ್ಯ ಸರ್ಕಾರವು ಸೂಕ್ತವೆಂದು ಯೋಚಿಸಬಹುದಾದಂತೆ ಪೂರ್ಣಕಾಲಿಕ ಅಥವಾ ಅಂಶಕಾಲಿಕ ಅಧ್ಯಕ್ಷನಾಗಿರಬಹುದು.

(ಖ) ರಾಜ್ಯ ಸರ್ಕಾರವನ್ನು ಪ್ರತಿನಿಧಿಸಲು ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಐವರನ್ನು ಮೀರದಷ್ಟು ಸಂಖ್ಯೆಯ ಅಧಿಕಾರಿಗಳು;

(ಗ) ರಾಜ್ಯದೊಳಗೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಪ್ರಾಧಿಕಾರಿಗಳ ಸದಸ್ಯರೊಳಗಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬೇಕಾದ ಐವರನ್ನು ಮೀರದಷ್ಟು ಸಂಖ್ಯೆಯ ವ್ಯಕ್ತಿಗಳು;

(ಘ) ಕೃಷಿ, ಮೀನುಗಾರಿಕೆ ಅಥವಾ ಉದ್ಯಮ ಅಥವಾ ವ್ಯಾಪಾರ ಅಥವಾ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಪ್ರತಿನಿಧಿಸತಕ್ಕದ್ದೆಂಬಂಥ ಯಾವುದೇ ಇತರ ಹಿತಾಸಕ್ತಿಯನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಮೂವರನ್ನು ಮೀರದಷ್ಟು ಸಂಖ್ಯೆಯ ಅಧಿಕಾರೇತರರು·

(ಙ) ರಾಜ್ಯ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ರಾಜ್ಯ ಸರ್ಕಾರದ ವ್ಯವಸ್ಥಾಪನೆಯಲ್ಲಿರುವ ಕಂಪನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಆ ಸರ್ಕಾರವು ನಾಮನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳು;

(ಚ) ಜನಾರೋಗ್ಯ ಇಂಜಿನಿಯರಿಂಗ್‌ನಲ್ಲಿ ಅರ್ಹತೆ ಹೊಂದಿರುವ, ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ವ್ಯಾವಹಾರಿಕ ಅನುಭವವನ್ನು ಹೊಂದಿರುವ, ರಾಜ್ಯ ಸರ್ಕಾರವು ನಾಮನಿರ್ದೇಶಿಸಬೇಕಾದ ಪೂರ್ಣಕಾಲಿಕ ಒಬ್ಬ ಸದಸ್ಯ ಕಾರ್ಯದರ್ಶಿ.

(3) ಪ್ರತಿಯೊಂದು ರಾಜ್ಯ ಮಂಡಲಿಯು ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸ್ವತ್ತನ್ನು ಅರ್ಜನೆ ಮಾಡಲು, ಧಾರಣ ಮಾಡಲು ಮತ್ತು ವಿಲೆಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಹಿಂದೆ ಹೇಳಿದ ಹೆಸರಿನಿಂದ ದಾವೆ ಹೂಡಬಹುದು ಅಥವಾ ದಾವೆಗೆ ಗುರಿಯಾಗಬಹುದು.

(4) ಈ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಂಘರಾಜ್ಯ ಕ್ಷೇತ್ರಕ್ಕಾಗಿ ಯಾವುದೇ ರಾಜ್ಯ ಮಂಡಲಿಯನ್ನು ರಚಿಸತಕ್ಕದ್ದಲ್ಲ ಮತ್ತು ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೇಂದ್ರ ಮಂಡಲಿಯು ಆ ಸಂಘ ರಾಜ್ಯ ಕ್ಷೇತ್ರಕ್ಕಾಗಿ ರಾಜ್ಯ ಮಂಡಲಿಯ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು:

ಪರಂತು, ಯಾವುದೇ ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಕೇಂದ್ರ ಮಂಡಲಿಯು, ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಈ ಉಪಪ್ರಕರಣದ ಮೇರೆಗೆ ಅದರ ಎಲ್ಲ ಅಥವಾ ಯಾವುವೇ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಪ್ರತಿಯೋಜಿಸಬಹುದು.

5. **ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು:**—(1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿರುವಂತೆ ಹೊರತು, ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ ಮಂಡಲಿಯ ಇತರ ಸದಸ್ಯನು, ಅವನ ನಾಮನಿರ್ದೇಶನ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ಸದಸ್ಯನು, ಅವನ ಅವಧಿಯು ಮುಕ್ತಾಯವಾಗಿದ್ದಾಗ್ಯೂ, ಅವನ ಉತ್ತರಾಧಿಕಾರಿಯು ಪದವನ್ನು ವಹಿಸಿಕೊಳ್ಳುವವರೆಗೆ ಪದಧಾರಣ ಮಾಡುವುದು ಮುಂದುವರೆಯತಕ್ಕದು.

(2) 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಖ) ಖಂಡ ಅಥವಾ (ಙ) ಖಂಡದ ಮೇರೆಗೆ ಅಥವಾ 4ನೇ ಪ್ರಕರಣದ 2ನೇ ಉಪ-ಪ್ರಕರಣದ(ಖ) ಖಂಡ ಅಥವಾ (ಙ) ಖಂಡದ ಮೇರೆಗೆ ನಾಮನಿರ್ದೇಶಿತನಾದ ಮಂಡಲಿಯ ಸದಸ್ಯನ ಪದಾವಧಿಯು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿನ ಕಂಪನಿ ಅಥವಾ ನಿಗಮದ ಅಧೀನದಲ್ಲಿನ ಯಾವ ಪದವನ್ನು ಧಾರಣ ಮಾಡಿದ್ದ ಕಾರಣದಿಂದಾಗಿ ಅವನನ್ನು ನಾಮನಿರ್ದೇಶನ ಮಾಡಲಾಗಿತ್ತೋ ಆ ಪದವನ್ನು ಅವನು ಧಾರಣ ಮಾಡುವುದು ನಿಂತು ಹೋದ ಕೂಡಲೇ ಕೊನೆಗೊಳ್ಳತಕ್ಕದು.

(3) ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು, ಅದು ಸೂಕ್ತವೆಂದು ಯೋಚಿಸಿದರೆ ಮಂಡಲಿಯ ಯಾವನೇ ಸದಸ್ಯನನ್ನು ಅವನ ಪದಾವಧಿಯು ಮುಗಿಯುವುದಕ್ಕೆ ಮುಂಚೆ, ಅವನಿಗೆ ಅದರ ವಿರುದ್ಧ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ತೆಗೆದುಹಾಕಬಹುದು.

(4) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಮಂಡಲಿಯ ಇತರ ಸದಸ್ಯನು, ಯಾವುದೇ ಕಾಲದಲ್ಲಿ ಅವನು ರುಜು ಮಾಡಿದ ಬರಹದ ಮೂಲಕ,—

(ಕ) ಅಧ್ಯಕ್ಷನ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ; ಮತ್ತು

(ಖ) ಯಾವುದೇ ಇತರ ಸಂದರ್ಭದಲ್ಲಿ, ಮಂಡಲಿಯ ಅಧ್ಯಕ್ಷನಿಗೆ

—ಸಂಬೋಧಿಸಿ ಅವನ ಪದಕ್ಕೆ ರಾಜೀನಾಮೆ ಕೊಡಬಹುದು ಮತ್ತು ಅಧ್ಯಕ್ಷನ ಅಥವಾ ಅಂಥ ಇತರ ಸದಸ್ಯನ ಸ್ಥಾನವು ಆ ತರುವಾಯ ಖಾಲಿಯಾಗತಕ್ಕದು.

(5) ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ, ಮಂಡಲಿಯ ಇತರ ಸದಸ್ಯನು, ಒಂದಾದ ಮೇಲೊಂದರಂತೆ ಬರುವ ಮಂಡಲಿಯ ಮೂರು ಸಭೆಗಳಿಗೆ, ಮಂಡಲಿಯ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ ಗೈರುಹಾಜರಾದರೆ ಅಥವಾ 3ನೇ ಪ್ರಕರಣದ (2)ನೇ ಉಪ-ಪ್ರಕರಣದ (ಗ) ಖಂಡ ಅಥವಾ (ಙ) ಖಂಡದ ಮೇರೆಗೆ ಅಥವಾ 4ನೇ ಪ್ರಕರಣದ 2ನೇ ಉಪಪ್ರಕರಣದ (ಗ) ಖಂಡದ ಅಥವಾ (ಙ) ಖಂಡದ ಮೇರೆಗೆ ಅವನನ್ನು ನಾಮನಿರ್ದೇಶನ ಮಾಡಿರುವಲ್ಲಿ, ಅವನು ರಾಜ್ಯ ಮಂಡಲಿಯ ಅಥವಾ ಸ್ಥಳೀಯ ಪ್ರಾಧಿಕಾರದ ಅಥವಾ ಸಂದರ್ಭಾನುಸಾರ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನ, ಅದರ ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಕಂಪನಿ ಅಥವಾ ನಿಗಮದ ಸದಸ್ಯನಾಗಿರುವುದು ನಿಂತು ಹೋದರೆ, ಅವನು ಅವನ ಸ್ಥಾನವನ್ನು ಖಾಲಿ ಮಾಡಿರುವುದಾಗಿ ಭಾವಿಸತಕ್ಕದ್ದು, ಮತ್ತು ಅಂಥ ಸ್ಥಾನವು ಖಾಲಿ ಯಾಗುವುದು ಎರಡೂ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಸರ್ಕಾರಿ ರಾಜಪತ್ರ ದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗತಕ್ಕದು.

(6) ಮಂಡಲಿಯಲ್ಲಿನ ಆಕಸ್ಮಿಕ ಖಾಲಿಸ್ಥಾನವನ್ನು ಹೊಸ ನಾಮನಿರ್ದೇಶನದ ಮೂಲಕ ಭರ್ತಿಮಾಡತಕ್ಕದು ಮತ್ತು ಆ ಖಾಲಿಸ್ಥಾನವನ್ನು ಭರ್ತಿಮಾಡಲು ನಾಮನಿರ್ದೇಶಿತನಾದ ವ್ಯಕ್ತಿಯು, ಅವನನ್ನು ಯಾರ ಸ್ಥಾನದಲ್ಲಿ ನಾಮ ನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನ ಉಳಿದಿರುವ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದು.

(7) ಮಂಡಲಿಯ ಸದಸ್ಯನು ಎರಡು ಅವಧಿಗಳಿಗಿಂತ ಹೆಚ್ಚಿನ ಅವಧಿಗಳಿಗಾಗಿ ಪುನರ್ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದಲ್ಲ.

(8) ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ ಮಂಡಲಿಯ ಇತರ ಸದಸ್ಯನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು, ನಿಯಮಿಸಬಹುದಾದಂಥವು ಆಗಿರತಕ್ಕದು.

(9) ಅಧ್ಯಕ್ಷನ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂಥವು ಆಗಿರತಕ್ಕದು.

**6. ಅನರ್ಹತೆಗಳು:—**

(1) (ಕ) ದಿವಾಳಿಯಾಗಿರುವ ಅಥವಾ ಯಾವುದೇ ಕಾಲದಲ್ಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾದ ಅಥವಾ ಅವನ ಋಣಗಳ ಸಂದಾಯವನ್ನು ನಿಲಂಬನಗೊಳಿಸಿರುವ ಅಥವಾ ಅವನ ಸಾಲಕೊಟ್ಟವರೊಂದಿಗೆ ರಾಜಿ ಮಾಡಿಕೊಂಡಿರುವ; ಅಥವಾ

(ಖ) ಅಸ್ವಸ್ಥಚಿತ್ತನಾಗಿರುವ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿರುವ; ಅಥವಾ

(ಗ) ಕೇಂದ್ರಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಪತನವನ್ನೊಳ ಗೊಂಡ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ ಅಥವಾ ನಿರ್ಣೀತನಾಗಿದ್ದ; ಅಥವಾ

(ಘ) ಈ ಅಧಿನಿಯಮದ ಮೇರೆಗಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿರುವ, ಅಥವಾ ಯಾವುದೇ ಕಾಲದಲ್ಲಿ ನಿರ್ಣೀತನಾಗಿದ್ದ; ಅಥವಾ

(ಙ) ತಾನಾಗಿಯೇ ಅಥವಾ ಯಾವನೇ ಪಾಲುಗಾರನ ಮೂಲಕ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಗ್ರಾಮ ಸಾರ ಅಥವಾ ಕಾರ್ಖಾನೆಯ ಕಶ್ಮಲ ಪ್ರವಾಹದ ಸಂಸ್ಕರಣೆಗಾಗಿ ಯಂತ್ರ ಸಾಮಗ್ರಿ, ಸ್ಥಿರಯಂತ್ರ, ಸಾಧನ ಸಾಮಗ್ರಿ, ಸಲಕರಣೆ ಅಥವಾ ಜೋಡಣೆಗಳ ತಯಾರಿಕೆ, ಮಾರಾಟ ಅಥವಾ ಬಾಡಿಗೆಯ ವ್ಯವಹಾರವನ್ನು ನಡೆಸುತ್ತಿರುವ ಯಾವುದೇ ಫರ್ಮ್ ಅಥವಾ ಕಂಪನಿಯಲ್ಲಿ ಯಾವುದೇ ಷೇರು ಅಥವಾ ಹಿತಾಸಕ್ತಿಯನ್ನು ಹೊಂದಿರುವ; ಅಥವಾ

(ಚ) ಮಂಡಲಿಯೊಂದಿಗೆ ಅಥವಾ ಮಂಡಲಿಯನ್ನು ರಚಿಸಿದ ಸರ್ಕಾರದೊಂದಿಗೆ ಅಥವಾ ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರದೊಂದಿಗೆ ಅಥವಾ ಸರ್ಕಾರದ ಒಡೆತನ, ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿನ ಕಂಪನಿ ಅಥವಾ ನಿಗಮ ದೊಂದಿಗೆ ಗ್ರಾಮಸಾರ ಚರಂಡಿ ಯೋಜನೆಗಳನ್ನು ಈಡೇರಿಸುವುದಕ್ಕಾಗಿ ಅಥವಾ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಸಂಸ್ಕರಣೆಗಾಗಿನ ಸ್ಥಿರಯಂತ್ರಗಳ ಸ್ಥಾಪನೆಗಾಗಿ ಯಾವುದೇ ಕರಾರನ್ನು ಹೊಂದಿರುವ ಯಾವುದೇ ಕಂಪನಿ ಅಥವಾ ಫರ್ಮಿನ ನಿರ್ದೇಶಕ ಅಥವಾ ಕಾರ್ಯದರ್ಶಿ, ವ್ಯವಸ್ಥಾಪಕ ಅಥವಾ ಇತರ ವೇತನ ಪಡೆಯುವ ಅಧಿಕಾರಿ ಅಥವಾ ನಿಯೋಜಿತ ನಾಗಿರುವ; ಅಥವಾ

(ಛ) ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಮಂಡಲಿಯಲ್ಲಿ ಅವನ ಮುಂದುವರಿಕೆಯು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟು ಮಾಡುವ ಹಾಗೆ ಸದಸ್ಯನಾಗಿ ಅವನ ಪದವನ್ನು ದುರುಪಯೋಗ ಮಾಡಿಕೊಂಡಿರುವ

— ಯಾವನೇ ವ್ಯಕ್ತಿಯು ಮಂಡಲಿಯ ಸದಸ್ಯನಾಗಿರತಕ್ಕುದಲ್ಲ.

(2) ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು, ಈ ಅಧಿನಿಯಮದ ಮೇರೆಗೆ, ತೆಗೆದು ಹಾಕುವ ಯಾವುದೇ ಆದೇಶವನ್ನು ಸಂಬಂಧಪಟ್ಟ ಸದಸ್ಯನಿಗೆ, ಅದರ ವಿರುದ್ಧ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡಲಾಗಿದ್ದ ಹೊರತು, ಮಾಡತಕ್ಕುದಲ್ಲ,

(3) 5ನೇ ಪ್ರಕರಣದ (1) ನೇ ಮತ್ತು (7)ನೇ ಉಪ-ಪ್ರಕರಣಗಳಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಪ್ರಕರಣದ ಮೇರೆಗೆ ತೆಗೆದುಹಾಕಲಾಗಿರುವ ಸದಸ್ಯನು, ಸದಸ್ಯನಾಗಿ ಪುನರ್ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕುದಲ್ಲ.

7. **ಸದಸ್ಯರು ಸ್ಥಾನಗಳನ್ನು ಖಾಲಿ ಮಾಡುವುದು:**— ಮಂಡಲಿಯ ಸದಸ್ಯನು 6ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗೆ ಒಳಗಾದರೆ ಅವನ ಸ್ಥಾನವು ಖಾಲಿಯಾಗತಕ್ಕುದು.

8. **ಮಂಡಲಿಯ ಸಭೆಗಳು:**— ಮಂಡಲಿಯು, ಪ್ರತಿ ಮೂರು ತಿಂಗಳಿಗೆ ಕನಿಷ್ಠ ಪಕ್ಷ ಒಂದು ಬಾರಿ ಸಭೆ ಸೇರತಕ್ಕುದು ಮತ್ತು ಅದರ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ನಿಯಮಿಸಬಹುದಾದಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕುದು:

ಪರಂತು, ಅಧ್ಯಕ್ಷನ ಅಭಿಪ್ರಾಯದಲ್ಲಿ, ತುರ್ತು ಸ್ವರೂಪದ ಯಾವುದೇ ವ್ಯವಹಾರವನ್ನು ನಡೆಸಬೇಕಾಗಿದ್ದರೆ, ಅವನು ಹಿಂದೆ ಹೇಳಿದ ಉದ್ದೇಶಕ್ಕಾಗಿ ಸೂಕ್ತವೆಂದು ಯೋಚಿಸುವಂಥ ಕಾಲದಲ್ಲಿ ಮಂಡಲಿಯ ಸಭೆಯನ್ನು ಕರೆಯಬಹುದು.

9. **ಸಮಿತಿಗಳ ರಚನೆ:**—(1) ಮಂಡಲಿಯು, ಅದು ಸೂಕ್ತವೆಂದು ಯೋಚಿಸಬಹುದಾದಂಥ ಉದ್ದೇಶಗಳಿಗಾಗಿ ಸದಸ್ಯರನ್ನೇ ಪೂರ್ಣವಾಗಿ ಅಥವಾ ಇತರ ವ್ಯಕ್ತಿಗಳನ್ನೇ ಪೂರ್ಣವಾಗಿ ಅಥವಾ ಭಾಗಶಃ ಸದಸ್ಯರನ್ನು ಮತ್ತು ಭಾಗಶಃ ಇತರ ವ್ಯಕ್ತಿಗಳನ್ನು ಒಳಗೊಂಡ ಮತ್ತು ಅದು ಸೂಕ್ತವೆಂದು ಯೋಚಿಸಬಹುದಾದಷ್ಟು ಸಮಿತಿಗಳನ್ನು ರಚಿಸಬಹುದು.

(2) ಈ ಪ್ರಕರಣದ ಮೇರೆಗೆ ರಚಿತವಾದ ಸಮಿತಿಯು, ನಿಯಮಿಸಬಹುದಾದಂಥ ಕಾಲದಲ್ಲಿ ಮತ್ತು ಅಂಥ ಸ್ಥಳದಲ್ಲಿ ಸಭೆ ಸೇರತಕ್ಕುದು, ಮತ್ತು ಅದರ ಸಭೆಗಳಲ್ಲಿ ವ್ಯವಹಾರವನ್ನು ನಡೆಸುವ ಬಗ್ಗೆ ಅಂಥ ಪ್ರಕ್ರಿಯಾ ನಿಯಮಗಳನ್ನು ಪಾಲಿಸತಕ್ಕುದು.

(3) ಸಮಿತಿಯ ಸದಸ್ಯರಿಗೆ (ಮಂಡಲಿಯ ಸದಸ್ಯರನ್ನು ಹೊರತುಪಡಿಸಿ) ಅದರ ಸಭೆಗಳಿಗೆ ಹಾಜರಾಗಿದ್ದಕ್ಕಾಗಿ ಮತ್ತು ಮಂಡಲಿಯ ಯಾವುದೇ ಇತರ ಕೆಲಸವನ್ನು ನಿರ್ವಹಿಸುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕುದು.

10. **ನಿರ್ದಿಷ್ಟ ಉದ್ದೇಶಗಳಿಗಾಗಿ ಮಂಡಲಿಯೊಂದಿಗೆ ವ್ಯಕ್ತಿಗಳ ತಾತ್ಕಾಲಿಕ ಸಹವರ್ತನೆ:**—(1) ಮಂಡಲಿಯು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ಅದರ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಯಾವ ವ್ಯಕ್ತಿಯ ಸಹಾಯ ಅಥವಾ ಸಲಹೆಯನ್ನು ಪಡೆದುಕೊಳ್ಳಲು ಇಚ್ಛಿಸಬಹುದೋ ಆ ಯಾವನೇ ವ್ಯಕ್ತಿಯನ್ನು ತನ್ನೊಂದಿಗೆ ಸಹವರ್ತಿಸಿಕೊಳ್ಳಬಹುದು.

(2) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹವರ್ತಿಯಾದ ವ್ಯಕ್ತಿಯು ಆ ಉದ್ದೇಶಕ್ಕೆ ಸಂಗತವಾದ ಮಂಡಲಿಯ ಚರ್ಚೆಗಳಲ್ಲಿ ಭಾಗವಹಿಸಲು ಹಕ್ಕನ್ನು ಹೊಂದಿರತಕ್ಕುದು, ಆದರೆ ಮಂಡಲಿಯ ಸಭೆಯಲ್ಲಿ ಮತ ಚಲಾಯಿಸಲು ಹಕ್ಕನ್ನು ಹೊಂದಿರತಕ್ಕುದಲ್ಲ ಮತ್ತು ಯಾವುದೇ ಇತರ ಉದ್ದೇಶಕ್ಕಾಗಿ ಸದಸ್ಯನಾಗಿರತಕ್ಕುದಲ್ಲ.

(3) ಯಾವುದೇ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಮಂಡಲಿಯೊಂದಿಗೆ ಸಹವರ್ತಿಯಾದ ವ್ಯಕ್ತಿಗೆ ಅದರ ಸಭೆಗಳಿಗೆ ಹಾಜರಾದುದಕ್ಕಾಗಿ ಮತ್ತು ಮಂಡಲಿಯ ಯಾವುದೇ ಇತರ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ನಿಯಮಿಸಬಹುದಾದಂಥ ಫೀಜುಗಳು ಮತ್ತು ಭತ್ಯೆಗಳನ್ನು ಸಂದಾಯ ಮಾಡತಕ್ಕುದು.

11. **ಮಂಡಲಿಯಲ್ಲಿನ ಖಾಲಿ ಸ್ಥಾನವು ಕಾರ್ಯಗಳನ್ನು ಅಥವಾ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕುದಲ್ಲ:**— ಮಂಡಲಿಯ ಅಥವಾ ಅದರ ಯಾವುದೇ ಸಮಿತಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು, ಸಂದರ್ಭಾನುಸಾರ ಮಂಡಲಿ ಅಥವಾ ಸಮಿತಿಯಲ್ಲಿ ಯಾವುದೇ ಖಾಲಿ ಸ್ಥಾನ ಇರುವುದರಿಂದ ಅಥವಾ ಮಂಡಲಿಯ ರಚನೆಯಲ್ಲಿ ಯಾವುದೇ ದೋಷ ಇರುವ ಕಾರಣ ಮಾತ್ರದಿಂದಲೇ ಪ್ರಶ್ನಿಸತಕ್ಕುದಲ್ಲ.

11ಕ. **ಅಧ್ಯಕ್ಷನಿಗೆ ಅಧಿಕಾರಗಳ ಪ್ರತ್ಯಾಯೋಜನೆ:**—ಮಂಡಲಿಯ ಅಧ್ಯಕ್ಷನು, ನಿಯಮಿಸಬಹುದಾದಂಥ ಅಥವಾ ಮಂಡಲಿಯು ಕಾಲಕಾಲಕ್ಕೆ ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

12. **ಮಂಡಲಿಯ ಸದಸ್ಯ ಕಾರ್ಯದರ್ಶಿ ಮತ್ತು ಅಧಿಕಾರಿಗಳು ಮತ್ತು ಇತರ ನಿಯೋಜಿತರು:**—(1) ಸದಸ್ಯ ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತಹವು ಆಗಿರತಕ್ಕುದು.

(2) ಸದಸ್ಯ ಕಾರ್ಯದರ್ಶಿಯು, ನಿಯಮಿಸಬಹುದಾದಂಥ ಅಥವಾ ಕಾಲಕಾಲಕ್ಕೆ ಮಂಡಲಿ ಅಥವಾ ಅದರ ಅಧ್ಯಕ್ಷನು ಅವನಿಗೆ ಪ್ರತ್ಯಾಯೋಜಿಸಿರಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕುದು.

(3) ಕೇಂದ್ರ ಸರ್ಕಾರವು ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರವು ಈ ಬಗ್ಗೆ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಮಂಡಲಿಯು, ಅದರ ಪ್ರಕಾರ್ಯಗಳ ಸಮರ್ಥ ನಿರ್ವಹಣೆಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸುವಂಥ ಅಧಿಕಾರಿಗಳು ಮತ್ತು ನಿಯೋಜಿತರನ್ನು ನೇಮಕ ಮಾಡಬಹುದು.

(3ಕ) ಕೇಂದ್ರ ಮಂಡಲಿಯ ಅಥವಾ ರಾಜ್ಯ ಮಂಡಲಿಯ ಅಧಿಕಾರಿಗಳ (ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ) ಮತ್ತು ಇತರ ನಿಯೋಜಿತರ ನೌಕರಿ ಭರ್ತಿ ವಿಧಾನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು (ವೇತನದ ಶ್ರೇಣಿಗಳನ್ನು ಒಳಗೊಂಡು) ಕೇಂದ್ರ ಮಂಡಲಿಯು ಅಥವಾ ಸಂದರ್ಭಾನುಸಾರ ರಾಜ್ಯ ಮಂಡಲಿಯು ರಚಿಸಿದ ವಿನಿಯಮಗಳ ಮೂಲಕ ನಿರ್ಧರಿಸಬಹುದಾದಂತಹವು ಆಗಿರತಕ್ಕದು:

ಪರಂತು, ಈ ಉಪ-ಪ್ರಕರಣದ ಮೇರೆಗೆ ರಚಿಸಿದ ಯಾವುದೇ ವಿನಿಯಮವು,—

(ಕ) ಕೇಂದ್ರ ಮಂಡಲಿಯು ರಚಿಸಿದ ವಿನಿಯಮದ ಸಂದರ್ಭದಲ್ಲಿ, ಕೇಂದ್ರ ಸರ್ಕಾರವು ಅದನ್ನು ಅನುಮೋದಿಸಿದ ಹೊರತು; ಮತ್ತು

(ಖ) ರಾಜ್ಯ ಮಂಡಲಿಯು ರಚಿಸಿದ ವಿನಿಯಮದ ಸಂದರ್ಭದಲ್ಲಿ, ರಾಜ್ಯ ಸರ್ಕಾರವು ಅದನ್ನು ಅನುಮೋದಿಸಿದ ಹೊರತು

—ಜಾರಿಗೆ ಬರತಕ್ಕದಲ್ಲ.

(4) ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಮಂಡಲಿಯು ಕಾಲಕಾಲಕ್ಕೆ ಯಾವನೇ ಅರ್ಹತೆ ಪಡೆದ ವ್ಯಕ್ತಿಯನ್ನು ಮಂಡಲಿಯ ಸಮಾಲೋಚನಾ ಇಂಜಿನಿಯರ್ ಆಗಿರಲು ನೇಮಕ ಮಾಡಬಹುದು ಮತ್ತು ಅದು ಸೂಕ್ತವೆಂದು ಯೋಚಿಸುವಂಥ ವೇತನಗಳು ಮತ್ತು ಭತ್ಯೆಗಳನ್ನು ಅವನಿಗೆ ಸಂದಾಯ ಮಾಡತಕ್ಕದು ಮತ್ತು ಅಂಥ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅವನನ್ನು ಒಳಪಡಿಸಬಹುದು.

## ಅಧ್ಯಾಯ—III

## ಜಂಟಿ ಮಂಡಲಿಗಳು

**13. ಜಂಟಿ ಮಂಡಲಿಗಳ ರಚನೆ:**—(1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ—

(ಕ) ಎರಡು ಅಥವಾ ಹೆಚ್ಚು ಹೊಂದಿಕೊಂಡಿರುವ ರಾಜ್ಯಗಳ ಸರ್ಕಾರಗಳು, ಅಥವಾ

(ಖ) ಕೇಂದ್ರ ಸರ್ಕಾರ (ಒಂದು ಅಥವಾ ಹೆಚ್ಚು ಸಂಘ ರಾಜ್ಯ ಕ್ಷೇತ್ರಗಳಿಗೆ ಸಂಬಂಧಿಸಿದಂತೆ) ಮತ್ತು ಅಂಥ ಸಂಘ ರಾಜ್ಯ ಕ್ಷೇತ್ರ ಅಥವಾ ಸಂಘ ರಾಜ್ಯ ಕ್ಷೇತ್ರಗಳಿಗೆ ಹೊಂದಿಕೊಂಡಿರುವ ರಾಜ್ಯಗಳ ಒಂದು ಅಥವಾ ಹೆಚ್ಚು ರಾಜ್ಯಗಳ ಸರ್ಕಾರಗಳು ಒಂದು ಒಪ್ಪಂದವನ್ನು ಮಾಡಿಕೊಳ್ಳಬಹುದು, ಅದು—

(i) (ಕ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ಎಲ್ಲ ರಾಜ್ಯಗಳಿಗಾಗಿ, ಮತ್ತು

(ii) (ಖ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ಸಂಘ ರಾಜ್ಯ ಕ್ಷೇತ್ರ ಅಥವಾ ಸಂಘರಾಜ್ಯ ಕ್ಷೇತ್ರಗಳು ಮತ್ತು ರಾಜ್ಯ ಅಥವಾ ರಾಜ್ಯಗಳಿಗಾಗಿ

—ಒಂದು ಜಂಟಿ ಮಂಡಲಿಯ ರಚನೆಗಾಗಿ ಉಪಬಂಧಿಸಲು ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಗಾಗಿ ಜಾರಿಯಲ್ಲಿರಲಿ ಮತ್ತು ಇನ್ನು ಹೆಚ್ಚಿನ ಅವಧಿ ಯಾವುದಾದರೂ ಇದ್ದರೆ, ಆ ಅವಧಿಯು ನವೀಕರಣಕ್ಕೆ ಒಳಪಟ್ಟಿರತಕ್ಕದು.

(2) ಈ ಪ್ರಕರಣದ ಮೇರೆಗಿನ ಒಪ್ಪಂದವು,—

(ಕ) ಜಂಟಿ ಮಂಡಲಿಗೆ ಸಂಬಂಧಿಸಿದ ವೆಚ್ಚಗಳನ್ನು, (1) ನೇ ಉಪಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ರಾಜ್ಯಗಳ ನಡುವೆ ಹಂಚಿಕೆಗಾಗಿ ಮತ್ತು ಆ ಉಪ ಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಕೇಂದ್ರ ಸರ್ಕಾರ ಮತ್ತು ಪಾಲ್ಗೊಳ್ಳುವ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ನಡುವೆ ಹಂಚಿಕೆಗಾಗಿ ಉಪಬಂಧಿಸಬಹುದು:

(ಖ) (1)ನೇ ಉಪಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ರಾಜ್ಯ ಸರ್ಕಾರಗಳಲ್ಲಿ ಯಾವ ರಾಜ್ಯ ಸರ್ಕಾರವು ಮತ್ತು ಆ ಉಪಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರವೆ ಅಥವಾ ಪಾಲ್ಗೊಳ್ಳುವ ರಾಜ್ಯ ಸರ್ಕಾರವೇ (ಒಂದಕ್ಕಿಂತ ಹೆಚ್ಚು ಪಾಲ್ಗೊಳ್ಳುವ ರಾಜ್ಯಗಳಿದ್ದರೆ ಅವುಗಳಲ್ಲಿ ಪಾಲ್ಗೊಳ್ಳುವ ರಾಜ್ಯ ಸರ್ಕಾರಗಳ ಪೈಕಿ ಯಾವುದು ಎಂಬುದು ಸಹಾ) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದ ಹಲವಾರು ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಚಲಾಯಿಸತಕ್ಕದು ಮತ್ತು ನೆರವೇರಿಸತಕ್ಕದು ಎಂಬುದನ್ನು ನಿರ್ಧರಿಸಬಹುದು ಮತ್ತು ಈ ಅಧಿನಿಯಮದಲ್ಲಿ ರಾಜ ಸರ್ಕಾರಕ್ಕೆ ಮಾಡಿದ ಉಲ್ಲೇಖಗಳನ್ನು ತದನುಸಾರವಾಗಿ ಅರ್ಥೈಸತಕ್ಕದು;

(ಗ) (1) ನೇ ಉಪಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ರಾಜ್ಯ ಸರ್ಕಾರಗಳ ನಡುವೆ ಮತ್ತು ಆ ಉಪಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಮತ್ತು ಪಾಲ್ಗೊಳ್ಳುವ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರಗಳ ನಡುವೆ ಸಾಮಾನ್ಯವಾಗಿ ಆಗಲಿ ಅಥವಾ ಈ ಅಧಿನಿಯಮದ ಮೇರೆಗೆ ಉದ್ಭವಿಸಿದ ವಿಷಯಗಳ ಸಂಬಂಧದಲ್ಲಾಗಲೀ ಸಮಾಲೋಚನೆಗಾಗಿ ಉಪಬಂಧಿಸಬಹುದು;

(ಘ) ಒಪ್ಪಂದವನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯ ಅಥವಾ ವಿಹಿತವೆಂದು ಭಾವಿಸಬಹುದಾದಂತೆ ಈ ಅಧಿನಿಯಮಕ್ಕೆ ಅಸಂಗತವಲ್ಲದಂಥ ಪ್ರಾಸಂಗಿಕ ಮತ್ತು ಅನುಷಂಗಿಕ ಉಪಬಂಧಗಳನ್ನು ರಚಿಸಬಹುದು;

(3) ಈ ಪ್ರಕರಣದ ಮೇರೆಗಿನ ಒಪ್ಪಂದವನ್ನು (1)ನೇ ಉಪಪ್ರಕರಣದ (ಕ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ರಾಜ್ಯಗಳ ಸರ್ಕಾರಿ ರಾಜಪತ್ರದಲ್ಲಿ ಮತ್ತು ಆ ಉಪಪ್ರಕರಣದ (ಖ) ಖಂಡದಲ್ಲಿ ಉಲ್ಲೇಖಿಸಿದ ಸಂದರ್ಭದಲ್ಲಿ, ಪಾಲ್ಗೊಳ್ಳುವ ಸಂಘ ರಾಜ್ಯಕ್ಷೇತ್ರ ಅಥವಾ ಸಂಘ ರಾಜ್ಯ ಕ್ಷೇತ್ರಗಳ ಮತ್ತು ಪಾಲ್ಗೊಳ್ಳುವ ರಾಜ್ಯ ಅಥವಾ ರಾಜ್ಯಗಳ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸತಕ್ಕುದು.

**14.** ಜಂಟಿ ಮಂಡಲಿಗಳ ರಚನೆ:—(1) 13ನೇ ಪ್ರಕರಣದ (1) ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ಮಾಡಿಕೊಂಡ ಒಪ್ಪಂದದ ಅನುಸರಣೆಯಲ್ಲಿ ರಚಿಸಿದ ಜಂಟಿ ಮಂಡಲಿಯು, ಈ ಕೆಳಕಂಡ ಸದಸ್ಯರುಗಳನ್ನು ಹೊಂದಿರ ತಕ್ಕುದು, ಎಂದರೆ :—

(ಕ) ಪರಿಸರ ಸಂರಕ್ಷಣೆಯ ಬಗೆಗಿನ ವಿಷಯಗಳಿಗೆ ಸಂಬಂಧಿಸಿದಂತೆ ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರುವ ಅಥವಾ ಹಿಂದೆ ಹೇಳಿದ ವಿಷಯಗಳಲ್ಲಿ ಜ್ಞಾನವನ್ನು ಹೊಂದಿರುವ ಮತ್ತು ಆ ವಿಷಯಗಳೊಡನೆ ವ್ಯವಹರಿಸುವ ಸಂಸ್ಥೆಗಳನ್ನು ನಡೆಸುವಲ್ಲಿ ಅನುಭವವನ್ನು ಹೊಂದಿರುವ, ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ವ್ಯಕ್ತಿಯಾಗಿರುವ ಪೂರ್ಣಕಾಲಿಕ ಅಧ್ಯಕ್ಷ :

(ಖ) ಪಾಲ್ಗೊಳ್ಳುವ ಪ್ರತಿಯೊಂದು ರಾಜ್ಯದ, ಆ ಸಂಬಂಧಪಟ್ಟ ರಾಜ್ಯ ಸರ್ಕಾರವು ಆ ರಾಜ್ಯ ಸರ್ಕಾರವನ್ನು ಪ್ರತಿನಿಧಿಸಲು ನಾಮನಿರ್ದೇಶಿಸಬೇಕಾದ ಇಬ್ಬರು ಅಧಿಕಾರಿಗಳು;

(ಗ) ಪಾಲ್ಗೊಳ್ಳುವ ಪ್ರತಿಯೊಂದು ರಾಜ್ಯ ಸರ್ಕಾರವು ಸಂಬಂಧಪಟ್ಟ ರಾಜ್ಯದೊಳಗೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಪ್ರಾಧಿಕಾರಗಳ ಸದಸ್ಯರ ಪೈಕಿ ನಾಮ ನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿ ;

(ಘ) ಪಾಲ್ಗೊಳ್ಳುವ ಪ್ರತಿಯೊಂದು ರಾಜ್ಯ ಸರ್ಕಾರವು ಸಂಬಂಧಪಟ್ಟ ರಾಜ್ಯದಲ್ಲಿನ ಕೃಷಿ ಮೀನುಗಾರಿಕೆ ಅಥವಾ ಉದ್ಯಮ ಅಥವಾ ವ್ಯಾಪಾರದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಅಥವಾ ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ಯಾವ ಹಿತಾಸಕ್ತಿಯನ್ನು ಪ್ರತಿನಿಧಿಸಬೇಕಾಗಿದೆಯೋ ಆ ಯಾವುದೇ ಇತರ ಹಿತಾಸಕ್ತಿಯನ್ನು ಪ್ರತಿನಿಧಿಸಲು, ನಾಮನಿರ್ದೇಶಿಸಬೇಕಾದ ಒಬ್ಬ ಅಧಿಕಾರೇತರನು ;

(ಙ) ಪಾಲ್ಗೊಳ್ಳುವ ರಾಜ್ಯ ಸರ್ಕಾರಗಳ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಕಂಪನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳು ;

(ಚ) ಜನಾರೋಗ್ಯ ಇಂಜಿನಿಯರಿಂಗ್‌ನಲ್ಲಿ ಅರ್ಹತೆಯುಳ್ಳ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಪಟ್ಟ ವಿಷಯಗಳ ಸಂಬಂಧದಲ್ಲಿ ಆಡಳಿತಾತ್ಮಕ ಅನುಭವ ಹೊಂದಿರುವ, ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಪೂರ್ಣಕಾಲಿಕ ಸದಸ್ಯ ಕಾರ್ಯದರ್ಶಿ.

(2) 13ನೇ ಪ್ರಕರಣದ (1)ನೇ ಉಪ–ಪ್ರಕರಣದ (ಖ) ಖಂಡದ ಮೇರೆಗೆ ಮಾಡಿಕೊಂಡ ಒಪ್ಪಂದದ ಅನುಸರಣೆಯಲ್ಲಿ ರಚಿತವಾದ ಜಂಟಿಮಂಡಲಿಯು, ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರತಕ್ಕುದು, ಎಂದರೆ :—

(ಕ) ಪರಿಸರ ಮಾಲಿನ್ಯದ ಬಗೆಗಿನ ವಿಷಯಗಳಿಗೆ ಸಂಬಂಧಿಸಿದಂತೆ, ವಿಶೇಷ ಜ್ಞಾನ ಅಥವಾ ವ್ಯವಹಾರಿಕ ಅನುಭವವನ್ನು ಹೊಂದಿರುವ ವ್ಯಕ್ತಿಯಾಗಿರುವ ಅಥವಾ ಹಿಂದೆ ಹೇಳಿದ ವಿಷಯಗಳಲ್ಲಿ ಜ್ಞಾನವನ್ನು ಹೊಂದಿರುವ ಮತ್ತು ಆ ವಿಷಯಗಳೊಡನೆ ವ್ಯವಹರಿಸುವ ಸಂಸ್ಥೆಗಳನ್ನು ನಡೆಸುವಲ್ಲಿ ಅನುಭವವನ್ನು ಹೊಂದಿರುವ, ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ವ್ಯಕ್ತಿಯಾಗಿರುವ ಪೂರ್ಣ ಕಾಲಿಕ ಅಧ್ಯಕ್ಷ :

(ಖ) ಸಂದರ್ಭಾನುಸಾರ, ಪಾಲ್ಗೊಳ್ಳುವ ಸಂಘ ರಾಜ್ಯ ಕ್ಷೇತ್ರ ಅಥವಾ ಪಾಲ್ಗೊಳ್ಳುವ ಪ್ರತಿಯೊಂದು ಸಂಘ ರಾಜ್ಯ ಕ್ಷೇತ್ರದಿಂದ ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ಇಬ್ಬರು ಅಧಿಕಾರಿಗಳು ಮತ್ತು ಸಂದರ್ಭಾನುಸಾರ ಪಾಲ್ಗೊಳ್ಳುವ ರಾಜ್ಯ ಅಥವಾ ಪಾಲ್ಗೊಳ್ಳುವ ಪ್ರತಿಯೊಂದು ರಾಜ್ಯದಿಂದ ಸಂಬಂಧಪಟ್ಟ ಪಾಲ್ಗೊಳ್ಳುವ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ ಇಬ್ಬರು ಅಧಿಕಾರಿಗಳು;

(ಗ) ಸಂದರ್ಭಾನುಸಾರ, ಪಾಲ್ಗೊಳ್ಳುವ ಸಂಘ ರಾಜ್ಯ ಕ್ಷೇತ್ರ ಅಥವಾ ಪಾಲ್ಗೊಳ್ಳುವ ಪ್ರತಿಯೊಂದು ಸಂಘ ರಾಜ್ಯ ಕ್ಷೇತ್ರದೊಳಗೆ ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ಪ್ರಾಧಿಕಾರಗಳ ಸದಸ್ಯರ ಪೈಕಿ, ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ಒಬ್ಬ ವ್ಯಕ್ತಿ ಮತ್ತು ಸಂದರ್ಭಾನುಸಾರ ಪಾಲ್ಗೊಳ್ಳುವ ರಾಜ್ಯ ಅಥವಾ ಪಾಲ್ಗೊಳ್ಳುವ ಪ್ರತಿಯೊಂದು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ಪ್ರಾಧಿಕಾರಗಳ ಸದಸ್ಯರ ಪೈಕಿ ಸಂಬಂಧಪಟ್ಟ ಪಾಲ್ಗೊಳ್ಳುವ ರಾಜ್ಯ ಸರ್ಕಾರವು ನಾಮ ನಿರ್ದೇಶಿಸಬೇಕಾದ ಒಬ್ಬ ವ್ಯಕ್ತಿ ;

(ಘ) ಸಂಘ ರಾಜ್ಯ ಕ್ಷೇತ್ರದಲ್ಲಿನ ಅಥವಾ ಪ್ರತಿಯೊಂದು ಸಂಘ ರಾಜ್ಯ ಕ್ಷೇತ್ರದಲ್ಲಿನ ಅಥವಾ ಸಂದರ್ಭಾನುಸಾರ ರಾಜ್ಯ ಅಥವಾ ಪ್ರತಿಯೊಂದು ರಾಜ್ಯದಲ್ಲಿನ ಕೃಷಿ, ಮೀನುಗಾರಿಕೆ ಅಥವಾ ಉದ್ಯಮ ಅಥವಾ ವ್ಯಾಪಾರದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಯಾವ ಹಿತಾಸಕ್ತಿಯನ್ನು ಪ್ರತಿನಿಧಿಸಬೇಕಾಗಿದೆಯೋ ಆ ಯಾವುದೇ ಇತರ ಹಿತಾಸಕ್ತಿಯನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಒಬ್ಬ ಅಧಿಕಾರೇತರನು ಮತ್ತು ಪಾಲ್ಗೊಳ್ಳುವ ರಾಜ್ಯ ಸರ್ಕಾರ ಅಥವಾ ರಾಜ್ಯ ಸರ್ಕಾರಗಳು ನಾಮನಿರ್ದೇಶಿಸಬೇಕಾದ ಒಬ್ಬ ವ್ಯಕ್ತಿ;

(ಙ) ಕೇಂದ್ರ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಮತ್ತು ಪಾಲ್ಗೊಳ್ಳುವ ಸಂಘ ರಾಜ್ಯ ಕ್ಷೇತ್ರ ಅಥವಾ ಕ್ಷೇತ್ರಗಳಲ್ಲಿರುವ ಕಂಪನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮ ನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳು ಮತ್ತು ಪಾಲ್ಗೊಳ್ಳುವ ರಾಜ್ಯ ಸರ್ಕಾರಗಳ ಒಡೆತನ, ನಿಯಂತ್ರಣ ಅಥವಾ ವ್ಯವಸ್ಥಾಪನೆಯಲ್ಲಿರುವ ಕಂಪನಿಗಳು ಅಥವಾ ನಿಗಮಗಳನ್ನು ಪ್ರತಿನಿಧಿಸಲು ಕೇಂದ್ರ ಸರ್ಕಾರವು ನಾಮನಿರ್ದೇಶಿಸಬೇಕಾದ ಇಬ್ಬರು ವ್ಯಕ್ತಿಗಳು.

(ಜ) ಜನಾರೋಗ್ಯ ಇಂಜಿನಿಯರಿಂಗ್‌ನಲ್ಲಿ ಅರ್ಹತೆಯುಳ್ಳ ಮತ್ತು ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವಿಷಯಗಳಲ್ಲಿ ವ್ಯಾವಹಾರಿಕ ಅನುಭವ ಹೊಂದಿರುವ, ಕೇಂದ್ರ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ಪೂರ್ಣಕಾಲಿಕ ಸದಸ್ಯ ಕಾರ್ಯದರ್ಶಿ.

(3) 13ನೇ ಪ್ರಕರಣದ (1)ನೇ ಉಪಪ್ರಕರಣದ (ಖ) ಖಂಡದ ಮೇರೆಗಿನ ಒಪ್ಪಂದದ ಅನುಸಾರವಾಗಿ ಜಂಟಿ ಮಂಡಲಿಯನ್ನು ರಚಿಸಿದಾಗ, 4ನೇ ಪ್ರಕರಣದ (4)ನೇ ಉಪ-ಪ್ರಕರಣದ ಉಪಬಂಧಗಳು ಜಂಟಿ ಮಂಡಲಿಯನ್ನು ಯಾವ ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ರಚಿಸಲಾಗಿದೆಯೋ ಆ ಸಂಘ ರಾಜ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಅನ್ವಯಿಸುವುದು ನಿಂತು ಹೋಗತಕ್ಕದ್ದು.

(4) (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, 4ನೇ ಪ್ರಕರಣದ (3)ನೇ ಉಪ-ಪ್ರಕರಣ ಮತ್ತು 5 ರಿಂದ 12ನೇ (ಅದೂ ಸೇರಿದಂತೆ) ಪ್ರಕರಣಗಳ ಉಪಬಂಧಗಳು, ರಾಜ್ಯ ಮಂಡಳಿ ಮತ್ತು ಅದರ ಸದಸ್ಯ ಕಾರ್ಯದರ್ಶಿಯ ಸಂಬಂಧದಲ್ಲಿ ಅವು ಅನ್ವಯವಾಗುವಂತೆ ಜಂಟಿ ಮಂಡಲಿ ಮತ್ತು ಅದರ ಸದಸ್ಯ ಕಾರ್ಯದರ್ಶಿಗೆ ಸಂಬಂಧಿಸಿದಂತೆ ಅನ್ವಯಿಸತಕ್ಕದ್ದು.

(5) ರಾಜ್ಯ ಮಂಡಲಿಗೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವು, ಸಂದರ್ಭವು ಅನ್ಯಥಾ ಅಗತ್ಯಪಡಿಸದ ಹೊರತು ಜಂಟಿ ಮಂಡಲಿಯನ್ನು ಒಳಗೊಳ್ಳುವುದಾಗಿ ಅರ್ಥೈಸತಕ್ಕದ್ದು.

**15.** ನಿರ್ದೇಶನಗಳನ್ನು ಕೊಡುವುದಕ್ಕೆ ಸಂಬಂಧಪಡುವ ವಿಶೇಷ ಉಪಬಂಧ:—ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, 13ನೇ ಪ್ರಕರಣದ ಮೇರೆಗೆ ಯಾವುದೇ ಜಂಟಿ ಮಂಡಲಿಯನ್ನು ರಚಿಸಿರುವಲ್ಲಿ,—

(ಕ) ಜಂಟಿ ಮಂಡಲಿಯನ್ನು ಯಾವ ರಾಜ್ಯಕ್ಕೆ ಸಂಬಂಧಿಸಿದಂತೆ ರಚಿಸಲಾಗಿದೆಯೋ ಆ ರಾಜ್ಯ ಸರ್ಕಾರವು, ಅಂಥ ನಿರ್ದೇಶನಗಳು ರಾಜ್ಯದ ಅನನ್ಯ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿನ ವಿಷಯಕ್ಕೆ ಸಂಬಂಧಪಡುವಂಥ ಸಂದರ್ಭಗಳಲ್ಲಿ ಮಾತ್ರ ಈ ಅಧಿನಿಯಮದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡಲು ಸಕ್ಷಮವಾಗಿರತಕ್ಕದ್ದು ;

(ಖ) ಅಂಥ ನಿರ್ದೇಶನವು, ಎರಡು ಅಥವಾ ಹೆಚ್ಚು ರಾಜ್ಯಗಳ ಅಥವಾ ಸಂಘ ರಾಜ್ಯ ಕ್ಷೇತ್ರಕ್ಕೆ ಸೇರಿರುವ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯೊಳಗಿನ ವಿಷಯಕ್ಕೆ ಸಂಬಂಧಿಸಿರುವಲ್ಲಿ ಈ ಅಧಿನಿಯಮದ ಮೇರೆಗೆ ಯಾವುದೇ ನಿರ್ದೇಶನವನ್ನು ನೀಡಲು ಕೇಂದ್ರ ಸರ್ಕಾರ ಮಾತ್ರವೇ ಸಕ್ಷಮವಾಗಿರತಕ್ಕದ್ದು.

## ಅಧ್ಯಾಯ—IV

### ಮಂಡಲಿಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು

**16.** **ಕೇಂದ್ರ ಮಂಡಲಿಯ ಪ್ರಕಾರ್ಯಗಳು** :—(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕೇಂದ್ರ ಮಂಡಳಿಯ ಮುಖ್ಯ ಪ್ರಕಾರ್ಯವು, ರಾಜ್ಯದ ವಿವಿಧ ಪ್ರದೇಶಗಳಲ್ಲಿರುವ ತೊರೆಗಳು ಮತ್ತು ಬಾವಿಗಳ ಸ್ವಚ್ಛತೆಯನ್ನು ವೃದ್ಧಿಪಡಿಸುವುದಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಪ್ರಕಾರ್ಯದ ಸಾಮಾನ್ಯತ್ವಕ್ಕೆ ಬಾಧಕವಾಗದಂತೆ, ಕೇಂದ್ರ ಮಂಡಳಿಯು, ಈ ಕೆಳಕಂಡ ಎಲ್ಲ ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಬಹುದು. ಎಂದರೆ,—

(ಕ) ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣಕ್ಕೆ ಸಂಬಂಧಪಡುವ ಯಾವುದೇ ವಿಷಯದ ಬಗ್ಗೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡುವುದು;

(ಖ) ರಾಜ್ಯ ಮಂಡಲಿಗಳ ಕಾರ್ಯಚಟುವಟಿಕೆಗಳನ್ನು ಸಮನ್ವಯಗೊಳಿಸುವುದು ಮತ್ತು ಅವುಗಳ ನಡುವೆ ಇರುವ ವಿವಾದಗಳನ್ನು ಬಗೆಹರಿಸುವುದು;

(ಗ) ರಾಜ್ಯ ಮಂಡಳಿಗಳಿಗೆ ತಾಂತ್ರಿಕ ನೆರವು ಮತ್ತು ಮಾರ್ಗದರ್ಶನವನ್ನು ಒದಗಿಸುವುದು, ಜಲಮಾಲಿನ್ಯ ಸಮಸ್ಯೆಗಳು ಮತ್ತು ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಡುವ ತನಿಖೆಗಳನ್ನು ಮತ್ತು ಸಂಶೋಧನೆಯನ್ನು ಪ್ರಾರಂಭಿಸುವುದು; ಮತ್ತು

(ಘ) ಕೇಂದ್ರಮಂಡಳಿಯು ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ಕಾರ್ಯಕ್ರಮಗಳನ್ನು ಯೋಜಿಸುವುದು ಮತ್ತು ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಥವಾ ತೊಡಗುವಂತಹ ವ್ಯಕ್ತಿಗಳಿಗೆ ತರಬೇತಿಯನ್ನು ವ್ಯವಸ್ಥೆಗೊಳಿಸುವುದು ;

(ಙ) ಜಲ ಮಾಲಿನ್ಯದ ನಿವಾರಣೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಸಮೂಹ ಮಾಧ್ಯಮದ ಮುಖಾಂತರ ವ್ಯಾಪಕ ಕಾರ್ಯಕ್ರಮವನ್ನು ಏರ್ಪಡಿಸುವುದು ;

(ಚ) ಜಲಮಾಲಿನ್ಯ ಮತ್ತು ಅದರ ಪರಿಣಾಮಕಾರಿ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಯೋಚಿಸಿರುವ ಕ್ರಮಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಮತ್ತು ಅಂಕಿ ಅಂಶಗಳ ಮಾಹಿತಿಗಳನ್ನು ಸಂಗ್ರಹಿಸುವುದು, ಸಂಕಲಿಸುವುದು ಮತ್ತು ಪ್ರಕಟಿಸುವುದು ಮತ್ತು ಗ್ರಾಮಸಾರ ಮತ್ತು ಕಾರ್ಖಾನೆಯ ಕಶ್ಮಲ ಪ್ರವಾಹಗಳ ಸಂಸ್ಕರಣಕ್ಕೆ ಮತ್ತು ವಿಲೆಗೆ ಸಂಬಂಧಪಟ್ಟ ಕೈಪಿಡಿಗಳು, ಸಂಹಿತೆಗಳು ಅಥವಾ ಮಾರ್ಗದರ್ಶಿಕೆಗಳನ್ನು ಸಿದ್ಧಪಡಿಸುವುದು ಮತ್ತು ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಪ್ರಸಾರ ಮಾಡುವುದು;

(ಛ) ಸಂಬಂಧಪಟ್ಟ ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ತೊರೆ ಅಥವಾ ಬಾವಿಗಾಗಿ ಗುಣಮಟ್ಟಗಳನ್ನು ವಿಧಿಸುವುದು, ಮಾರ್ಪಾಡು ಮಾಡುವುದು ಅಥವಾ ರದ್ದು ಮಾಡುವುದು ;

ಪರಂತು, ತೊರೆಯ ಅಥವಾ ಬಾವಿಯ ನೀರಿನ ಗುಣವನ್ನು, ಪ್ರವಾಹ ವೈಲಕ್ಷಣಗಳನ್ನು ಅಂಥ ತೊರೆ ಅಥವಾ ಬಾವಿ ಅಥವಾ ತೊರೆಗಳು ಅಥವಾ ಬಾವಿಗಳಲ್ಲಿ ನೀರಿನ ಬಳಕೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಅದೇ ತೊರೆ ಅಥವಾ ಬಾವಿ ಅಥವಾ ವಿವಿಧ ತೊರೆಗಳು ಅಥವಾ ಬಾವಿಗಳಿಗಾಗಿ ವಿವಿಧ ಗುಣಮಟ್ಟಗಳನ್ನು ವಿಧಿಸಬಹುದು;

(ಜ) ಜಲಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ರಾಷ್ಟ್ರವ್ಯಾಪಿ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ಅದನ್ನು ಜಾರಿಗೊಳಿಸುವಂತೆ ಮಾಡುವುದು;

(ಝ) ನಿಯಮಿಸಬಹುದಾದ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

(3) ಮಂಡಲಿಯು, ಯಾವುದೇ ತೊರೆ ಅಥವಾ ಬಾವಿಯ ನೀರಿನ ಮಾದರಿಗಳ ಅಥವಾ ಗ್ರಾಮಸಾರ ಅಥವಾ ಕಾರ್ಖಾನೆಯ ಕಶ್ಮಲ ಪ್ರವಾಹದ ಮಾದರಿಗಳ ವಿಶ್ಲೇಷಣೆಯು ಸೇರಿದಂತೆ, ಈ ಪ್ರಕರಣದ ಮೇರೆಗಿನ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನೆರವೇರಿಸಲು ಮಂಡಲಿಗೆ ಅನುಕೂಲವಾಗುವಂತೆ ಪ್ರಯೋಗ ಶಾಲೆ ಅಥವಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬಹುದು ಅಥವಾ ಅವುಗಳಿಗೆ ಮನ್ನಣೆ ಕೊಡಬಹುದು.

**17. ರಾಜ್ಯ ಮಂಡಳಿಯ ಪ್ರಕಾರ್ಯಗಳು:**—(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು—

(ಕ) ರಾಜ್ಯದಲ್ಲಿರುವ ತೊರೆಗಳು ಮತ್ತು ಬಾವಿಗಳ ಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕಾಗಿ ವ್ಯಾಪಕ ಕಾರ್ಯಕ್ರಮವನ್ನು ಯೋಜಿಸುವುದು ಮತ್ತು ಅದು ಕಾರ್ಯಗತವಾಗುವುದನ್ನು ಸುನಿಶ್ಚಿತಗೊಳಿಸುವುದು;

(ಖ) ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಡುವ ಯಾವುದೇ ವಿಷಯದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು;

(ಗ) ಜಲಮಾಲಿನ್ಯ ಮತ್ತು ಅದರ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪ್ರಸಾರ ಮಾಡುವುದು ;

(ಘ) ಜಲಮಾಲಿನ್ಯ ಸಮಸ್ಯೆಗಳು ಮತ್ತು ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಟ್ಟ ತನಿಖೆಗಳು ಮತ್ತು ಸಂಶೋಧನೆಗಳಿಗೆ ಪ್ರೋತ್ಸಾಹ ನೀಡುವುದು, ಅವುಗಳನ್ನು ನಡೆಸುವುದು ಮತ್ತು ಭಾಗವಹಿಸುವುದು;

(ಙ) ಜಲಮಾಲಿನ್ಯ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಪಡುವ ಕಾರ್ಯಕ್ರಮಗಳಲ್ಲಿ ತೊಡಗಿರುವ ಅಥವಾ ತೊಡಗಬೇಕಾಗಿರುವ ವ್ಯಕ್ತಿಗಳ ತರಬೇತಿಯನ್ನು ಏರ್ಪಡಿಸುವುದರಲ್ಲಿ ಕೇಂದ್ರ ಮಂಡಲಿಯೊಂದಿಗೆ ಸಹಯೋಗಿಸುವುದು ಮತ್ತು ಅದಕ್ಕೆ ಸಂಬಂಧಪಟ್ಟ ಸಮೂಹ ಶಿಕ್ಷಣ ಕಾರ್ಯಕ್ರಮಗಳನ್ನು ಸಂಘಟಿಸುವುದು;

(ಚ) ಗ್ರಾಮಸಾರ ಮತ್ತು ಕಾರ್ಖಾನೆಯ ಕಶ್ಮಲ ಪ್ರವಾಹಗಳ ಸಂಸ್ಕರಣೆಗಾಗಿನ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲಪ್ರವಾಹಗಳು, ಕಾಮಗಾರಿಗಳು ಮತ್ತು ಸ್ಥಿರ ಯಂತ್ರಗಳನ್ನು ಪರಿಶೀಲಿಸುವುದು, ಮತ್ತು ನೀರಿನ ಸಂಸ್ಕರಣಗಾಗಿ ಅದರ ಶುದ್ಧೀಕರಣಕ್ಕಾಗಿನ ಕಾಮಗಾರಿಗಳು ಮತ್ತು ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ವಿಲೆಗಾಗಿನ ವ್ಯವಸ್ಥೆ, ಸ್ಥಾಪಿಸಿದ ಸ್ಥಿರ ಯಂತ್ರಗಳಿಗೆ ಸಂಬಂಧಪಟ್ಟಂತೆ ಯೋಜನೆಗಳು, ತಪಶೀಲುಗಳು ಅಥವಾ ಇತರ ಅಂಕಿ–ಅಂಶಗಳನ್ನು ಅಥವಾ ಈ ಅಧಿನಿಯಮದಿಂದ ಅಗತ್ಯಪಡಿಸಿರುವಂತೆ ಯಾವುದೇ ಸಮ್ಮತಿಯನ್ನು ಕೊಡುವುದಕ್ಕೆ ಸಂಬಂಧಿಸಿದಂತೆ ಪುನರವಲೋಕಿಸುವುದು ;

(ಛ) ಗ್ರಾಮಸಾರ ಮತ್ತು ಕಾರ್ಖಾನೆಯ ಕಶ್ಮಲ ಪ್ರವಾಹಗಳಿಗಾಗಿ ಕಶ್ಮಲ ಪ್ರವಾಹ ಗುಣಮಟ್ಟಗಳನ್ನು ವಿಧಿಸುವುದು, ಮಾರ್ಪಾಟು ಮಾಡುವುದು ಅಥವಾ ರದ್ದುಪಡಿಸುವುದು ಮತ್ತು ಕಶ್ಮಲ ಪ್ರವಾಹಗಳನ್ನು ಹೊರಹಾಕುವುದರಿಂದ ಉದ್ಭವಿಸುವ ನೀರು ಸ್ವೀಕರಣ ಗುಣಮಟ್ಟಕ್ಕಾಗಿ (ಅಂತರ್‌ರಾಜ್ಯ ತೊರೆಯಲ್ಲಿನ ನೀರು ಆಗಿರದ) ಮತ್ತು ರಾಜ್ಯದ ನೀರನ್ನು ವರ್ಗೀಕರಿಸುವುದು;

(ಜ) ಬೇರೆ ಬೇರೆ ಪ್ರದೇಶಗಳ ಮಣ್ಣಿನ ಹವಾಮಾನ ಮತ್ತು ಜಲ ಸಂಪನ್ಮೂಲಗಳ ವಿಶಿಷ್ಟ ಪರಿಸ್ಥಿತಿಗಳನ್ನು ಮತ್ತು ಕನಿಷ್ಠ ಪ್ರಮಾಣದ ಸಾರಗುಂದಿಸುವಿಕೆಯನ್ನು ಕೂಡಾ ಪಡೆಯಲು ಅಸಾಧ್ಯವನ್ನಾಗಿಸುವಂಥ ತೊರೆಗಳು ಮತ್ತು ಬಾವಿಗಳಲ್ಲಿ ಹೆಚ್ಚು ವಿಶೇಷವಾಗಿ ಇರುವ ಪ್ರವಾಹ ವೈಲಕ್ಷಣಗಳನ್ನು ಗಮನದಲ್ಲಿರಿಸಿ ಗ್ರಾಮಸಾರ ಮತ್ತು ಕಾರ್ಖಾನೆ ಕಶ್ಮಲ ಪ್ರವಾಹಗಳ ಸಂಸ್ಕರಣೆಯ ಮಿತವ್ಯಯಕಾರಿ ಮತ್ತು ವಿಶ್ವಾಸನೀಯ ವಿಧಾನಗಳನ್ನು ರೂಢಿಸುವುದು;

(ಝ) ಕೃಷಿಯಲ್ಲಿ ಗ್ರಾಮಸಾರ ಮತ್ತು ಸೂಕ್ತ ಕಾರ್ಖಾನೆ ಕಶ್ಮಲ ಪ್ರವಾಹಗಳ ಬಳಕೆಯ ವಿಧಾನಗಳನ್ನು ರೂಪಿಸುವುದು;

(ಞ) ಕನಿಷ್ಠ ಪ್ರಮಾಣದ ಸಾರಗುಂದಿಸುವಿಕೆಯನ್ನು ವರ್ಷದ ಹೆಚ್ಚಿನ ಭಾಗಕ್ಕೆ ಒದಗಿಸಲಾಗದ ತೊರೆಯ ಕಡಿಮೆಯಾದ ಪ್ರವಾಹದ ಮುಖ್ಯ ಪರಿಸ್ಥಿತಿಗಳ ಕಾರಣದಿಂದ ಅವಶ್ಯವಾಗುವಂತೆ, ಗ್ರಾಮಸಾರ ಮತ್ತು ಕಾರ್ಖಾನೆ ಕಶ್ಮಲ ಪ್ರವಾಹವನ್ನು ಭೂಮಿ ಮೇಲೆ ಹರಿಸಲು, ಸಮರ್ಥ ವಿಧಾನಗಳನ್ನು ರೂಢಿಸುವುದು ;

(ಟ) ತೊರೆಯಲ್ಲಿ ದೊರೆಯಬಹುದಾದ ಕನಿಷ್ಠ ಒಳ್ಳೆಯ ಹವೆಯ ಸತ್ವವನ್ನು ಕುಗ್ಗಿಸುವ ಮತ್ತು ಅಂಥ ಕಶ್ಮಲ ಪ್ರವಾಹವನ್ನು ಹೊರಹಾಕಿ ತರುವಾಯ ತೊರೆಯ ನೀರಿನಲ್ಲಿ ಅನುಮತಿಸಬಹುದಾದ ಮಾಲಿನ್ಯದ ಪರಿಮಿತಿಯನ್ನು ಗಣನೆಗೆ ತೆಗೆದುಕೊಂಡು ಯಾವುದೇ ವಿಶಿಷ್ಟ ತೊರೆಯೊಳಕ್ಕೆ ಬಿಡಬಹುದಾದ ಗ್ರಾಮಸಾರ ಮತ್ತು ಕಾರ್ಖಾನೆ ಕಶ್ಮಲ ಪ್ರವಾಹಗಳ ಸಂಸ್ಕರಣೆಯ ಗುಣಮಟ್ಟಗಳನ್ನು ವಿಧಿಸುವುದು ;

(ಠ) (i) ತೊರೆಗಳು ಅಥವಾ ಬಾವಿಗಳೊಳಕ್ಕೆ ನಿರುಪಯುಕ್ತ ವಸ್ತುವನ್ನು ಬಿಡುವುದನ್ನು ತಡೆಗಟ್ಟುವುದಕ್ಕಾಗಿ, ನಿಯಂತ್ರಿಸುವುದಕ್ಕಾಗಿ ಅಥವಾ ಉಪಶಮನಗೊಳಿಸುವುದಕ್ಕಾಗಿ;

(ii) ಗ್ರಾಮಸಾರ ಮತ್ತು ಕಾರ್ಖಾನೆ ಕಶ್ಮಲ ಪ್ರವಾಹವನ್ನು ವಿಲೆಮಾಡಲು, ಹೊಸ ವ್ಯವಸ್ಥೆಗಳನ್ನು ನಿರ್ಮಿಸಲು ಅಥವಾ ಯಾವುದೇ ಅಂಥ ಅಸ್ತಿತ್ವದಲ್ಲಿರುವ ವ್ಯವಸ್ಥೆಯನ್ನು ಮಾರ್ಪಾಡು ಮಾಡಲು, ಬದಲಾವಣೆ ಮಾಡಲು ಅಥವಾ ವಿಸ್ತರಿಸಲು ಅಥವಾ ಜಲ ಮಾಲಿನ್ಯವನ್ನು ನಿವಾರಿಸಲು, ನಿಯಂತ್ರಿಸಲು ಅಥವಾ ಉಪಶಮನಗೊಳಿಸಲು ಅವಶ್ಯವಾಗಿರುವಂಥ

ಪರಿಹಾರ ಕ್ರಮಗಳನ್ನು ಅಳವಡಿಸಲು ಸಂಬಂಧಪಟ್ಟ ಯಾವನೇ ವ್ಯಕ್ತಿಯನ್ನು ಅಗತ್ಯಪಡಿಸುವ ಯಾವುದೇ ಆದೇಶವನ್ನು ಮಾಡುವುದು, ವ್ಯತ್ಯಸ್ತಗೊಳಿಸುವುದು ಅಥವಾ ರದ್ದು ಪಡಿಸುವುದು;

(ಡ) ಗ್ರಾಮುಸಾರ ಅಥವಾ ಕಶ್ಮಲವನ್ನು ಅಥವಾ ಎರಡನ್ನೂ ಹೊರಹಾಕುವಂತೆ ಮಾಡುವಾಗ ವ್ಯಕ್ತಿಗಳು ಪಾಲಿಸಬೇಕಾದ ಕಶ್ಮಲ ಪ್ರವಾಹದ ಗುಣಮಟ್ಟಗಳನ್ನು ವಿಧಿಸುವುದು ಮತ್ತು ಗ್ರಾಮುಸಾರ ಮತ್ತು ಕಾರ್ಖಾನೆ ಕಶ್ಮಲ ಪ್ರವಾಹಗಳಿಗಾಗಿ ಕಶ್ಮಲ ಪ್ರವಾಹಗುಣಮಟ್ಟಗಳನ್ನು ವಿಧಿಸುವುದು, ಮಾರ್ಪಡಿಸುವುದು ಅಥವಾ ರದ್ದುಪಡಿಸುವುದು;

(ಢ) ಯಾವ ಕೈಗಾರಿಕೆಯನ್ನು ನಡೆಸುವುದರಿಂದ ತೊರೆ ಅಥವಾ ಬಾವಿಯು ಮಾಲಿನ್ಯಗೊಳ್ಳುವ ಸಂಭವವಿದೆಯೋ ಆ ಯಾವುದೇ ಕೈಗಾರಿಕೆಯ ಸ್ಥಳದ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುವುದು :

(ಣ) ನಿಯಮಿಸಬಹುದಾದಂಥ ಅಥವಾ ಕಾಲಕಾಲಕ್ಕೆ ಕೇಂದ್ರ ಮಂಡಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು

—ಇವು ರಾಜ್ಯ ಮಂಡಲಿಯ ಪ್ರಕಾರ್ಯಗಳಾಗಿರತಕ್ಕದ್ದು.

(2) ಮಂಡಲಿಯು, ಯಾವುದೇ ತೊರೆ ಅಥವಾ ಬಾವಿಯ ನೀರಿನ ಮಾದರಿಗಳ ಅಥವಾ ಗ್ರಾಮುಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳ ವಿಶ್ಲೇಷಣೆಯೂ ಒಳಗೊಂಡು, ಈ ಪ್ರಕರಣದ ಮೇರೆಗಿನ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಮಂಡಲಿಗೆ ಸಾಧ್ಯವಾಗುವಂತೆ ಮಾಡಲು ಪ್ರಯೋಗ ಶಾಲೆ ಅಥವಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬಹುದು ಅಥವಾ ಅವುಗಳಿಗೆ ಮನ್ನಣೆ ನೀಡಬಹುದು.

**18. ನಿರ್ದೇಶನಗಳನ್ನು ಕೊಡಲು ಅಧಿಕಾರಗಳು:**— ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ—

(ಕ) ಕೇಂದ್ರ ಮಂಡಲಿಯು ಕೇಂದ್ರ ಸರ್ಕಾರವು, ಅದಕ್ಕೆ ಬರಹದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು ; ಮತ್ತು

(ಖ) ಪ್ರತಿಯೊಂದು ರಾಜ್ಯ ಮಂಡಲಿಯು, ಹಾಗೆ ಕೇಂದ್ರ ಮಂಡಲಿ ಅಥವಾ ರಾಜ್ಯ ಸರ್ಕಾರವು ಅದಕ್ಕೆ ಬರಹದಲ್ಲಿ ಕೊಡಬಹುದಾದಂಥ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು :

ಪರಂತು, ರಾಜ್ಯ ಸರ್ಕಾರವು ಕೊಟ್ಟ ನಿರ್ದೇಶನವು ಕೇಂದ್ರ ಮಂಡಲಿಯು ಕೊಟ್ಟ ನಿರ್ದೇಶನಕ್ಕೆ ಅಸಂಗತವಾಗಿರುವಲ್ಲಿ, ಆ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ಅದರ ತೀರ್ಮಾನಕ್ಕಾಗಿ ಒಪ್ಪಿಸತಕ್ಕದ್ದು.

## ಅಧ್ಯಾಯ—V

## ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ

**19. ಕೆಲವು ಪ್ರದೇಶಗಳಿಗೆ ಅಧಿನಿಯಮದ ಅನ್ವಯವನ್ನು ನಿರ್ಬಂಧಿಸಲು ರಾಜ್ಯ ಸರ್ಕಾರದ ಅಧಿಕಾರ :**— (1) ಈ ಅಧಿನಿಯಮದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ, ಅಥವಾ ರಾಜ್ಯ ಮಂಡಲಿಯ ಶಿಫಾರಸಿನ ಮೇರೆಗೆ, ಈ ಅಧಿನಿಯಮದ ಉಪಬಂಧಗಳನ್ನು ಇಡೀ ರಾಜ್ಯಕ್ಕೆ ಅನ್ವಯಿಸುವುದು ಅವಶ್ಯವಿಲ್ಲವೆಂದು ಅಭಿಪ್ರಾಯಪಟ್ಟರೆ, ಅದು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶ ಅಥವಾ ಪ್ರದೇಶಗಳೆಂದು ಘೋಷಿಸಬಹುದಾದಂಥ ಪ್ರದೇಶ ಅಥವಾ ಪ್ರದೇಶಗಳಿಗೆ ಈ ಅಧಿನಿಯಮದ ಅನ್ವಯವನ್ನು ನಿರ್ಬಂಧಿಸಬಹುದು ಮತ್ತು ಆ ತರುವಾಯ ಈ ಅಧಿನಿಯಮದ ಉಪಬಂಧಗಳು ಅಂಥ ಪ್ರದೇಶ ಅಥವಾ ಪ್ರದೇಶಗಳಿಗೆ ಮಾತ್ರ ಅನ್ವಯವಾಗತಕ್ಕದ್ದು.

(2) ಪ್ರತಿ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶವನ್ನು, ನಕಾಶೆಯ ಅಥವಾ ಯಾವುದೇ ಜಲ ವಿಭಾಜಕ ರೇಖೆಗೆ ಅಥವಾ ಯಾವುದೇ ಜಿಲ್ಲೆಯ ಗಡಿ ರೇಖೆಗೆ ಉಲ್ಲೇಖಿಸುವ ಮೂಲಕವಾಗಲಿ ಅಥವಾ ಭಾಗಶಃ ಒಂದು ವಿಧಾನದ ಮೂಲಕ ಮತ್ತು ಭಾಗಶಃ ಇನ್ನೊಂದು ವಿಧಾನದ ಮೂಲಕ ನಿರ್ದಿಷ್ಟಪಡಿಸಬಹುದು.

(3) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ವಿಸ್ತರಿಸುವ ಅಥವಾ ಕಡಿಮೆ ಮಾಡುವ ಮೂಲಕ ಯಾವುದೇ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶವನ್ನು ಬದಲಾಯಿಸಬಹುದು : ಅಥವಾ

(ಖ) ಯಾವ ಹೊಸ ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶದಲ್ಲಿ ಒಂದು ಅಥವಾ ಹೆಚ್ಚು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶಗಳು ಅಥವಾ ಅವುಗಳ ಯಾವುದೇ ಭಾಗ ಅಥವಾ ಭಾಗಗಳನ್ನು ವಿಲೀನಗೊಳಿಸಬಹುದೋ ಆ ಹೊಸ ಜಲಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಪ್ರದೇಶವನ್ನು ನಿಗದಿ ಪಡಿಸಬಹುದು.

**20. ಮಾಹಿತಿಯನ್ನು ಪಡೆಯಲು ಅಧಿಕಾರ:**— (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೂಲಕ ತನಗೆ ಪ್ರದತ್ತವಾದ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಮಂಡಲಿಯನ್ನು ಶಕ್ತಗೊಳಿಸುವ ಉದ್ದೇಶಕ್ಕಾಗಿ, ರಾಜ್ಯ ಮಂಡಲಿ ಅಥವಾ ಆ ಬಗ್ಗೆ ಅದು ಶಕ್ತಗೊಳಿಸಿದ ಯಾವನೇ ಅಧಿಕಾರಿಯು, ಯಾವುದೇ ಪ್ರದೇಶವನ್ನು ಸಮೀಕ್ಷೆ ಮಾಡಬಹುದು ಮತ್ತು ಅಂಥ ಪ್ರದೇಶದಲ್ಲಿರುವ ಯಾವುದೇ ತೊರೆ ಅಥವಾ ಬಾವಿಯ ಹರಿವು ಅಥವಾ ಪ್ರಮಾಣ ಮತ್ತು ಇತರ ವೈಲಕ್ಷಣ್ಯಗಳನ್ನು ಅಳತೆ ಮಾಡಬಹುದು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳಬಹುದು ಮತ್ತು ಅಂಥ ಪ್ರದೇಶ ಅಥವಾ ಅದರ ಯಾವುದೇ ಭಾಗದಲ್ಲಿ ಬೀಳುವ ಮಳೆಯನ್ನು ಅಳೆಯಲು ಮತ್ತು ದಾಖಲು ಮಾಡಿಕೊಳ್ಳಲು ಮತ್ತು ಆ ಉದ್ದೇಶಗಳಿಗಾಗಿ ಮಾಪಕಗಳು ಅಥವಾ ಇತರ ಸಲಕರಣೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕಾಮಗಾರಿಗಳ ಸ್ಥಾಪನೆ ಮತ್ತು ನಿರ್ವಹಣೆಗಾಗಿ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಬೇರೆ ಯಾವುದೇ ಅಗತ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬಹುದು ಮತ್ತು ಹಿಂದೆ

ಹೇಳಿದ ಉದ್ದೇಶಗಳಿಗೆ ಅಗತ್ಯವಿರುವ ಯಾವುದೇ ಮಾಹಿತಿಯನ್ನು ಪಡೆಯುವ ಸಲುವಾಗಿ ಅವಶ್ಯವಾಗಬಹುದಾದಂಥ ಇತರ ಕ್ರಮಗಳನ್ನು ಕೈಗೊಳ್ಳಬಹುದು.

(2) ರಾಜ್ಯ ಮಂಡಲಿಯು, ತೊರೆ ಅಥವಾ ಬಾವಿಯು ಹರಿಯುವ ಅಥವಾ ಗಾತ್ರಕ್ಕೆ ಸಂಬಂಧಪಟ್ಟಂತೆ ಗಣನೀಯವಾಗಿರುವಂಥ ಪ್ರಮಾಣಗಳಲ್ಲಿ ಆ ಪ್ರದೇಶದಲ್ಲಿ ಯಾವುದೇ ಅಂಥ ತೊರೆ ಅಥವಾ ಬಾವಿಯಿಂದ ಯಾವನೇ ವ್ಯಕ್ತಿಯು ನೀರನ್ನು ತೆಗೆಯುತ್ತಿರುವನೆಂದು ಅಥವಾ ಅಂಥ ಯಾವುದೇ ತೊರೆ ಅಥವಾ ಬಾವಿಗೆ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹವನ್ನು ಹರಿಸುತ್ತಿರುವನೆಂದು ಅಭಿಪ್ರಾಯಪಟ್ಟಂತೆ ಅವನನ್ನು ನಿರ್ದೇಶನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ನಮೂನೆಯಲ್ಲಿ ತೆಗೆಯುವಿಕೆ ಅಥವಾ ಹರಿಸುವಿಕೆಯ ಬಗ್ಗೆ ಅಂಥ ಮಾಹಿತಿಯನ್ನು ಕೊಡಲು ಅಗತ್ಯಪಡಿಸಿ, ನಿರ್ದೇಶನಗಳನ್ನು ಕೊಡಬಹುದು.

(3) (2)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ರಾಜ್ಯ ಮಂಡಲಿಯು ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣದ ದೃಷ್ಟಿಯಿಂದ, ಯಾವುದೇ ಕೈಗಾರಿಕೆ ಅಥವಾ ವ್ಯಾಪಾರವನ್ನು ನಡೆಸುತ್ತಿರುವ ಯಾವುದೇ ವ್ಯವಸ್ಥಾಪನೆಯ ಪ್ರಭಾರದಲ್ಲಿರುವ ಯಾವನೇ ವ್ಯಕ್ತಿಯನ್ನು, ಅಂಥ ವ್ಯವಸ್ಥಾಪನೆಯ ನಿರ್ಮಾಣ, ಸ್ಥಾಪನೆ ಅಥವಾ ಕಾರ್ಯಾಚರಣೆಗೆ ಅಥವಾ ಅಂಥ ವ್ಯವಸ್ಥಾಪನೆಯಲ್ಲಿನ ಅದರ ಯಾವುದೇ ವಿಲೆ ವ್ಯವಸ್ಥೆ ಅಥವಾ ಅದರ ಯಾವುದೇ ವಿಸ್ತರಣೆ ಅಥವಾ ಸೇರಿಸುವಿಕೆಗೆ ಸಂಬಂಧಪಟ್ಟ ಮಾಹಿತಿಯನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ತನಗೆ ಒದಗಿಸಲು ಅಗತ್ಯಪಡಿಸಿ ನಿರ್ದೇಶನಗಳನ್ನು ಕೊಡಬಹುದು.

**21. ಕಶ್ಮಲ ಪ್ರವಾಹಗಳ ಮಾದರಿಗಳನ್ನು ತೆಗೆದುಕೊಳ್ಳಲು ಅಧಿಕಾರ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಪ್ರಕ್ರಿಯೆ** :— ರಾಜ್ಯ ಮಂಡಲಿ ಅಥವಾ ಈ ಬಗ್ಗೆ ಅದು ಶಕ್ತಗೊಳಿಸಿದ ಯಾವನೇ ಅಧಿಕಾರಿಯು, ವಿಶ್ಲೇಷಣೆಯ ಉದ್ದೇಶಕ್ಕಾಗಿ, ಯಾವುದೇ ತೊರೆ ಅಥವಾ ಬಾವಿಯಿಂದ ನೀರಿನ ಮಾದರಿಗಳನ್ನು ಅಥವಾ ಯಾವುದೇ ಸ್ಥಾವರ ಅಥವಾ ನೌಕೆಯೊಂದಿಗೆ ಅಂಥ ತೊರೆ ಅಥವಾ ಬಾವಿಯೊಳಕ್ಕೆ ಯಾವುದೇ ಸ್ಥಳದಿಂದ ಅಥವಾ ಅದರ ಮೇಲೆ ಹರಿಯುತ್ತಿರುವಂಥ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಗಳನ್ನು ತೆಗೆದುಕೊಳ್ಳಲು ಅಧಿಕಾರವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ತೆಗೆದುಕೊಂಡ ಯಾವುದೇ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಯ ಯಾವುದೇ ವಿಶ್ಲೇಷಣೆಯ ಫಲಿತಾಂಶವು ಯಾವುದೇ ಕಾನೂನು ವ್ಯವಹರಣೆಯಲ್ಲಿ (3), (4) ಮತ್ತು (5)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸಿದ ಹೊರತು, ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಾಗತಕ್ಕುದಲ್ಲ.

(3) (4) ಮತ್ತು (5)ನೇ ಉಪ-ಪ್ರಕರಣಗಳ ಉಪಬಂಧಗಳಿಗೊಳಪಟ್ಟು (1)ನೇ ಉಪ-ಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ ಯಾವುದೇ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಯನ್ನು (ಮಿಶ್ರ ಅಥವಾ ಉಪಯೋಗಿಸಿದ ಸಾಧನದ ಮೂಲಕ ಅನ್ಯಥಾ ಸಮರ್ಥಿಸಬಹುದಾದ) ತೆಗೆದುಕೊಂಡಾಗ ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು—

(ಕ) ಆ ಸ್ಥಾವರ ಅಥವಾ ನೌಕೆಯ ಪ್ರಭಾರದಲ್ಲಿರುವ ಅಥವಾ ಅದರ ಮೇಲೆ ನಿಯಂತ್ರಣವನ್ನು ಹೊಂದಿರುವ ಅಥವಾ ಆಸ್ಥಳದ ಅಧಿಭೋಗದಲ್ಲಿರುವ ವ್ಯಕ್ತಿಯು (ಆ ವ್ಯಕ್ತಿಯನ್ನು ಇಲ್ಲಿ ಇನ್ನು ಮುಂದೆ ಅಧಿಭೋಗದಾರನೆಂದು ಉಲ್ಲೇಖಿಸಲಾಗಿದೆ) ಅಥವಾ ಅಂಥ ಅಧಿಭೋಗದಾರನ ಯಾವುದೇ ಏಜೆಂಟ್‌ನ ಮೇಲೆ ಅದನ್ನು ಹಾಗೆ ವಿಶ್ಲೇಷಿಸಿ ಕೊಳ್ಳುವ ಅವನ ಉದ್ದೇಶದ ನೋಟೀಸನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಆ ಕೂಡಲೇ ಜಾರಿ ಮಾಡತಕ್ಕುದು ;

(ಖ) ಆ ಅಧಿಭೋಗದಾರ ಅಥವಾ ಅವನ ಏಜೆಂಟ್‌ನ ಸಮಕ್ಷಮದಲ್ಲಿ ಆ ಮಾದರಿಯನ್ನು ಎರಡು ಭಾಗಗಳಲ್ಲಿ ವಿಭಾಗಿಸತಕ್ಕುದು ;

(ಗ) ಪ್ರತಿಯೊಂದು ಭಾಗವನ್ನು ಒಂದು ಸಂಪುಟದಲ್ಲಿ ಇಡುವಂತೆ ಮಾಡತಕ್ಕುದು, ಅದಕ್ಕೆ ಗುರುತು ಮತ್ತು ಮೊಹರನ್ನು ಹಾಕತಕ್ಕುದು ಮತ್ತು ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿ ಮತ್ತು ಅಧಿಭೋಗದಾರ ಅಥವಾ ಅವನ ಏಜೆಂಟ್ ಇಬ್ಬರು ಅವಕ್ಕೆ ರುಜು ಸಹ ಮಾಡತಕ್ಕುದು;

(ಘ) (i) ಅಂಥ ಸಂಘ ರಾಜ್ಯ ಕ್ಷೇತ್ರದಲ್ಲಿರುವ ಯಾವುದೇ ಪ್ರದೇಶದಿಂದ ಅಂಥ ಮಾದರಿಯನ್ನು ತೆಗೆದುಕೊಂಡಿರುವ ಸಂದರ್ಭದಲ್ಲಿ 16 ನೇ ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯು ಸ್ಥಾಪಿಸಿದ ಅಥವಾ ಅದು ಮನ್ನಣೆ ಮಾಡಿದ ಪ್ರಯೋಗ ಶಾಲೆಗೆ ; ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ, 17 ನೇ ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಸ್ಥಾಪಿಸಿದ ಅಥವಾ ಅದು ಮನ್ನಣೆ ಮಾಡಿದ ಪ್ರಯೋಗ ಶಾಲೆಗೆ ತಕ್ಷಣವೇ. ಒಂದು ಸಂಪುಟವನ್ನು ಕಳುಹಿಸತಕ್ಕುದು;

(ಙ) ಅಧಿಭೋಗದಾರ ಅಥವಾ ಅವನ ಏಜೆಂಟನ ಕೋರಿಕೆಯ ಮೇಲೆ. ಎರಡನೇ ಸಂಪುಟವನ್ನು,—

(i) ಸಂಘ ರಾಜ್ಯ ಕ್ಷೇತ್ರದಲ್ಲಿರುವ ಯಾವುದೇ ಪ್ರದೇಶದಿಂದ ಅಂಥ ಮಾದರಿಯನ್ನು ತೆಗೆದುಕೊಂಡಿರುವ ಸಂದರ್ಭದಲ್ಲಿ, 51ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಪ್ರಯೋಗ ಶಾಲೆಗೆ ; ಮತ್ತು

(ii) ಯಾವುದೇ ಇತರ ಸಂದರ್ಭದಲ್ಲಿ, 52ನೇ ಪ್ರಕರಣದ (1) ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಪ್ರಯೋಗ ಶಾಲೆಗೆ

—ಕಳುಹಿಸತಕ್ಕುದು.

(4) (1)ನೇ ಉಪಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ ಯಾವುದೇ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಯನ್ನು ತೆಗೆದುಕೊಂಡಾಗ ಮತ್ತು ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು, (3) ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ನೋಟೀಸನ್ನು ಅಧಿಭೋಗದಾರ ಅಥವಾ ಅವನ ಏಜೆಂಟನ ಮೇಲೆ ಜಾರಿ ಮಾಡಿದಾಗ ಮತ್ತು ಆ ಅಧಿಭೋಗದಾರ ಅಥವಾ ಅವನ ಏಜೆಂಟನು ಬುದ್ಧಿಪೂರ್ವಕವಾಗಿ ಗೈರುಹಾಜರಾದರೆ, ಆಗ—

(ಕ) ಹಾಗೆ ತೆಗೆದುಕೊಳ್ಳಲಾದ ಮಾದರಿಯನ್ನು ಒಂದು ಸಂಪುಟದಲ್ಲಿ ಇಡತಕ್ಕುದು ಅದಕ್ಕೆ ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು ಗುರುತು ಮತ್ತು ಮೊಹರನ್ನು ಹಾಕತಕ್ಕುದು ಮತ್ತು ರುಜುವನ್ನು ಸಹ ಮಾಡತಕ್ಕುದು ಮತ್ತು ಅಂಥ ವ್ಯಕ್ತಿಯು ಸಂದರ್ಭಾನುಸಾರ (3)ನೇ ಉಪ-ಪ್ರಕರಣದ (ಙ) ಖಂಡದ (i)ನೇ ಉಪ-ಖಂಡ ಅಥವಾ (ii)ನೇ

ಉಪಖಂಡದಲ್ಲಿ ಉಲ್ಲೇಖಿಸಿದ ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ತಕ್ಷಣವೇ ಅದನ್ನು ಕಳುಹಿಸತಕ್ಕದ್ದು ಮತ್ತು ಸಂದರ್ಭಾನುಸಾರ (53)ನೇ ಪ್ರಕರಣದ (1)ನೇ ಉಪ ಪ್ರಕರಣ ಅಥವಾ (2)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಸರ್ಕಾರಿ ವಿಶ್ಲೇಷಕನಿಗೆ ಆ ಅಧಿಭೋಗದಾರ ಅಥವಾ ಅವನ ಏಜೆಂಟನ ಬುದ್ಧಿ ಪೂರ್ವಕ ಗೈರುಹಾಜರಿಯ ಬಗ್ಗೆ ಬರಹದಲ್ಲಿ ತಿಳಿಸತಕ್ಕದ್ದು;

(ಖ) ಅಂಥ ಮಾದರಿಯನ್ನು ವಿಶ್ಲೇಷಣೆ ಮಾಡಿಸುವುದಕ್ಕಾಗಿ ವಹಿಸಿದ ಖರ್ಚನ್ನು ಅಧಿಭೋಗದಾರನು ಅಥವಾ ಅವನ ಏಜೆಂಟನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯವನ್ನು ಮಾಡಲು ತಪ್ಪುವ ಸಂದರ್ಭದಲ್ಲಿ ಅದು ಅಧಿಭೋಗದಾರನಿಂದ ಅಥವಾ ಸಂದರ್ಭಾನುಸಾರ ಅವನ ಏಜೆಂಟನಿಂದ ಭೂಕಂದಾಯದ ಅಥವಾ ಸರ್ಕಾರಿ ತಗಾದೆಯ ಬಾಕಿಯಂತೆ ವಸೂಲೀಯವಾಗತಕ್ಕದ್ದು:

ಪರಂತು, ಅಂಥ ಯಾವುದೇ ವಸೂಲಿಯನ್ನು, ಅಧಿಭೋಗದಾರನಿಗೆ ಅಥವಾ ಸಂದರ್ಭಾನುಸಾರ ಅವನ ಏಜೆಂಟನಿಗೆ ಆ ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟಿದ್ದ ಹೊರತು, ಮಾಡತಕ್ಕದ್ದಲ್ಲ.

(5) (1)ನೇ ಉಪಪ್ರಕರಣದ ಮೇರೆಗೆ ವಿಶ್ಲೇಷಣೆಗಾಗಿ ಯಾವುದೇ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಯನ್ನು ತೆಗೆದುಕೊಂಡಾಗ ಮತ್ತು ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು, (3) ನೇ ಉಪ-ಪ್ರಕರಣದ (ಕ) ಖಂಡದ ಮೇರೆಗೆ ಅಧಿಭೋಗದಾರನಿಗೆ ಅಥವಾ ಅವನ ಏಜೆಂಟನಿಗೆ ನೋಟೀಸನ್ನು ಜಾರಿ ಮಾಡಿದಾಗ ಮತ್ತು ಆ ಮಾದರಿಯನ್ನು ತೆಗೆದುಕೊಳ್ಳುವ ಕಾಲದಲ್ಲಿ ಹಾಜರಿರುವ ಆ ಅಧಿಭೋಗದಾರ ಅಥವಾ ಅವನ ಏಜೆಂಟನು (3) ನೇ ಉಪ-ಪ್ರಕರಣದ (ಖ) ಖಂಡದಲ್ಲಿ ಉಪಬಂಧಿಸಿರುವಂತೆ ಆ ಮಾದರಿಯನ್ನು ಎರಡು ಭಾಗಗಳಾಗಿ ವಿಭಾಗಿಸುವುದಕ್ಕಾಗಿ ಕೋರಿಕೆಯನ್ನು ಮಾಡಿಕೊಳ್ಳದಿದ್ದರೆ, ಆಗ ಹಾಗೆ ತೆಗೆದುಕೊಂಡ ಆ ಮಾದರಿಯನ್ನು, ಒಂದು ಸಂಪುಟದಲ್ಲಿ ಇಡತಕ್ಕದ್ದು, ಆ ಮಾದರಿಯನ್ನು ತೆಗೆದುಕೊಳ್ಳುವ ವ್ಯಕ್ತಿಯು ಅದಕ್ಕೆ ಗುರುತು ಮತ್ತು ಮೊಹರನ್ನು ಹಾಕತಕ್ಕದ್ದು ಮತ್ತು ರುಜುವನ್ನು ಸಹ ಮಾಡತಕ್ಕದ್ದು ಮತ್ತು ಅದನ್ನು ಅಂಥ ವ್ಯಕ್ತಿಯು ತಕ್ಷಣವೇ ಸಂದರ್ಭಾನುಸಾರ (3) ನೇ ಉಪ-ಪ್ರಕರಣದ (ಘ) ಖಂಡದ (i) ನೇ ಉಪಖಂಡ ಅಥವಾ (ii)ನೇ ಉಪಖಂಡದಲ್ಲಿ ಉಲ್ಲೇಖಿಸಿದ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸತಕ್ಕದ್ದು

22. **21ನೇ ಪ್ರಕರಣದ ಮೇರೆಗೆ ತೆಗೆದುಕೊಂಡ ಮಾದರಿಗಳ ವಿಶ್ಲೇಷಣೆಯ ಫಲಿತಾಂಶದ ಬಗ್ಗೆ ವರದಿಗಳು:—** (1) ಯಾವುದೇ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಮಾದರಿಯನ್ನು ಕೇಂದ್ರ ಮಂಡಲಿ ಅಥವಾ ಸಂದರ್ಭಾನುಸಾರ ರಾಜ್ಯ ಮಂಡಲಿಯು ಸ್ಥಾಪಿಸಿದ ಅಥವಾ ಮನ್ನಣೆ ಮಾಡಿದ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿರುವಲ್ಲಿ, 53 ನೇ ಪ್ರಕರಣದ (3) ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಸಂಬಂಧಪಟ್ಟ ಮಂಡಲಿಯ ವಿಶ್ಲೇಷಕನು ಆ ಮಾದರಿಯನ್ನು ವಿಶ್ಲೇಷಿಸತಕ್ಕದ್ದು ಮತ್ತು ನಿಯಮಿಸಿದ ನಮೂನೆಯಲ್ಲಿ ಅಂಥ ವಿಶ್ಲೇಷಣೆಯ ಫಲಿತಾಂಶದ ಬಗ್ಗೆ ವರದಿಯನ್ನು ತ್ರಿಪ್ರತಿಯಲ್ಲಿ ಸಂದರ್ಭಾನುಸಾರ ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿಗೆ ಒಪ್ಪಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಆ ವರದಿಯನ್ನು ಸ್ವೀಕರಿಸಿದ ಮೇಲೆ ಆ ವರದಿಯ ಒಂದು ಪ್ರತಿಯನ್ನು, ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ರಾಜ್ಯಮಂಡಲಿಯು 21ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಆ ಅಧಿಭೋಗದಾರ ಅಥವಾ ಅವನ ಏಜೆಂಟನಿಗೆ ಕಳುಹಿಸತಕ್ಕದ್ದು, ಇನ್ನೊಂದು ಪ್ರತಿಯನ್ನು ಅವನ ವಿರುದ್ಧ ಯಾವುದೇ ಕಾನೂನು ವ್ಯವಹರಣೆಗಳನ್ನು ತೆಗೆದುಕೊಂಡ ಸಂದರ್ಭದಲ್ಲಿ ಆ ನ್ಯಾಯಾಲಯದ ಮುಂದೆ ಹಾಜರುಪಡಿಸುವುದಕ್ಕಾಗಿ ಪರಿರಕ್ಷಿಸತಕ್ಕದ್ದು ಮತ್ತು ಆ ಇನ್ನೊಂದು ಪ್ರತಿಯನ್ನು ಸಂಬಂಧಪಟ್ಟ ಮಂಡಲಿಯು ಇಟ್ಟುಕೊಂಡಿರತಕ್ಕದ್ದು.

(3) 21ನೇ ಪ್ರಕರಣದ (3)ನೇ ಉಪಪ್ರಕರಣದ (ಙ)ಖಂಡ ಅಥವಾ (4)ನೇ ಉಪ-ಪ್ರಕರಣದ (ಙ)ಖಂಡದ ಮೇರೆಗೆ ವಿಶ್ಲೇಷಣೆಗಾಗಿ ಮಾದರಿಯನ್ನು, ಅದರಲ್ಲಿ ನಮೂದಿಸಿದ ಯಾವುದೇ ಪ್ರಯೋಗಶಾಲೆಗೆ ಕಳುಹಿಸಿರುವಲ್ಲಿ ಆ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಸರ್ಕಾರಿ ವಿಶ್ಲೇಷಕನು ಆ ಮಾದರಿಯನ್ನು ವಿಶ್ಲೇಷಿಸತಕ್ಕದ್ದು ಮತ್ತು ಆ ವಿಶ್ಲೇಷಣೆಯ ಫಲಿತಾಂಶದ ಬಗ್ಗೆ ನಿಯಮಿಸಿದ ನಮೂನೆಯಲ್ಲಿ ವರದಿಯನ್ನು ತ್ರಿಪ್ರತಿಯಲ್ಲಿ ಕೇಂದ್ರ ಮಂಡಲಿಗೆ ಅಥವಾ ಸಂದರ್ಭಾನುಸಾರ ರಾಜ್ಯ ಮಂಡಲಿಗೆ ಒಪ್ಪಿಸತಕ್ಕದ್ದು. ಅದು (2)ನೇ ಉಪಪ್ರಕರಣದ ಉಪಬಂಧಗಳನ್ನು ಪಾಲಿಸತಕ್ಕದ್ದು.

(4) ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ರಾಜ್ಯ ಮಂಡಲಿಯು ಸ್ಥಾಪಿಸಿದ ಅಥವಾ ಮನ್ನಣೆ ಮಾಡಿದ ಪ್ರಯೋಗ ಶಾಲೆ ಮತ್ತು ಸಂದರ್ಭಾನುಸಾರ 51ನೇ ಪ್ರಕರಣ ಅಥವಾ 52ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಪ್ರಯೋಗಶಾಲೆಯು ನಡೆಸಿದ ವಿಶ್ಲೇಷಣೆಯ ಫಲಿತಾಂಶಗಳಲ್ಲಿ ಅವುಗಳ ನಡುವೆ ಯಾವುದೇ ಅಸಂಗತತೆ ಅಥವಾ ವ್ಯತ್ಯಾಸ ಅಥವಾ ಭಿನ್ನತೆ ಇದ್ದರೆ, ತರುವಾಯದ ವರದಿಯು ಊರ್ಜಿತವಾಗಿರತಕ್ಕದ್ದು.

(5) ಆ ಅಧಿಭೋಗದಾರ ಅಥವಾ ಅವನ ಏಜೆಂಟನ ಕೋರಿಕೆಯ ಮೇಲೆ ಯಾವುದೇ ಮಾದರಿಯನ್ನು ವಿಶ್ಲೇಷಿಸುವಲ್ಲಿ ವಹಿಸಿದ ಯಾವುದೇ ಖರ್ಚನ್ನು, ಅಂಥ ಅಧಿಭೋಗದಾರ ಅಥವಾ ಅವನ ಏಜೆಂಟನು ಸಂದಾಯ ಮಾಡತಕ್ಕದ್ದು ಮತ್ತು ಅದಕ್ಕೆ ತಪ್ಪಿದ ಸಂದರ್ಭದಲ್ಲಿ, ಅವನಿಂದ ಅದನ್ನು ಭೂಕಂದಾಯದ ಅಥವಾ ಸರ್ಕಾರಿ ತಗಾದೆಯ ಬಾಕಿಗಳಂತೆ ಅದು ವಸೂಲೀಯವಾಗತಕ್ಕದ್ದು.

23. **ಪ್ರವೇಶ ಮತ್ತು ಪರಿಶೀಲನೆಯ ಅಧಿಕಾರ :—** 1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಬಗ್ಗೆ ರಾಜ್ಯ ಮಂಡಲಿಯು ಶಕ್ತಗೊಳಿಸಿದ ಯಾವನೇ ವ್ಯಕ್ತಿಯು, ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ನೆರವಿನೊಂದಿಗೆ ಯಾವುದೇ ಸ್ಥಳವನ್ನು ಯಾವುದೇ ಕಾಲದಲ್ಲಿ,—

(ಕ) ಅವನಿಗೆ ವಹಿಸಿಕೊಡಲಾದ ಮಂಡಲಿಯ ಯಾವುದೇ ಪ್ರಕಾರ್ಯವನ್ನು ನೆರವೇರಿಸುವ ಉದ್ದೇಶಕ್ಕಾಗಿ;

(ಖ) ಅಂಥ ಯಾವುವೇ ಪ್ರಕಾರ್ಯಗಳನ್ನು ನೆರವೇರಿಸಬೇಕೋ ಹೇಗೆ ಮತ್ತು ಹಾಗಿದ್ದರೆ, ಯಾವ ರೀತಿಯಲ್ಲಿ ಎಂಬುದನ್ನು ಅಥವಾ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಉಪಬಂಧಗಳು ಅಥವಾ ಈ ಅಧಿನಿಯಮದ ಮೇರೆಗೆ ಜಾರಿ ಮಾಡಿದ, ಕೊಟ್ಟ ಅಥವಾ ಮಂಜೂರ್ಮಾಡಿದ ಯಾವುದೇ ನೋಟೀಸು, ಆದೇಶ, ನಿರ್ದೇಶನ

...ವಾ ಅಧಿಕೃತಗೊಳಿಸುವಿಕೆಯನ್ನು ಪಾಲಿಸಲಾಗುತ್ತಿದೆಯೇ ಅಥವಾ ಪಾಲಿಸಲಾಗಿದೆಯೇ ಹೇಗೆ ಎಂಬುದನ್ನು ನಿರ್ಧರಿಸುವ ಉದ್ದೇಶಕ್ಕಾಗಿ;

(ಗ) ಯಾವುದೇ ಸ್ಥಾವರ, ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಯಾವುದೇ ಇತರ ಭೌತಿಕ ವಸ್ತುವನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗಿನ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಅಥವಾ ಮಾಡಲಿರುವುದಾಗಿ ನಂಬಲು ಅವನು ಕಾರಣ ಹೊಂದಿರುವ ಯಾವುದೇ ಸ್ಥಳದ ಶೋಧನೆ ನಡೆಸುವುದಕ್ಕಾಗಿ ಮತ್ತು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ದಂಡನೀಯವಾದ ಅಪರಾಧ ಮಾಡಿರುವುದರ ಬಗ್ಗೆ ಅದು ಸಾಕ್ಷ್ಯವನ್ನು ಒದಗಿಸಬಹುದೆಂದು ನಂಬಲು ಅವನಿಗೆ ಕಾರಣವಿದ್ದರೆ, ಯಾವುದೇ ಅಂಥ ಸ್ಥಾವರ, ದಾಖಲೆ, ರಿಜಿಸ್ಟರು, ದಸ್ತಾವೇಜು ಅಥವಾ ಇತರ ಭೌತಿಕ ವಸ್ತುವನ್ನು ಅಭಿಗ್ರಹಿಸುವುದಕ್ಕಾಗಿ

—ಯಾವುದೇ ಸ್ಥಳವನ್ನು ಪ್ರವೇಶಿಸಲು ಹಕ್ಕನ್ನು ಹೊಂದಿರತಕ್ಕದ್ದು:

ಪರಂತು, ಬಾವಿಯು ಪರಿಶೀಲನೆಗಾಗಿ ಈ ಉಪಪ್ರಕರಣದ ಮೇರೆಗೆ ಪ್ರವೇಶಿಸುವ ಹಕ್ಕನ್ನು ಅಂಥ ಬಾವಿಯು ನಿವಾಸದ ಉದ್ದೇಶಗಳಿಗಾಗಿ ಬಳಸುವ ಯಾವುದೇ ಆವರಣಗಳಲ್ಲಿರುವ ಮತ್ತು ಅದರ ನೀರನ್ನು ಗೃಹಕೃತ್ಯದ ಉದ್ದೇಶಗಳಿಗಾಗಿ ಅನನ್ಯವಾಗಿ ಉಪಯೋಗಿಸುವಂಥ ಸಂದರ್ಭದಲ್ಲಿ, ಯುಕ್ತಕಾಲಗಳಲ್ಲಿ ಮಾತ್ರ ಚಲಾಯಿಸತಕ್ಕದ್ದು.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳನ್ನು ಅಥವಾ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂಬಂಧದಲ್ಲಿ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿನ ಉಪಬಂಧಗಳನ್ನು, ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಅಥವಾ ಸಂದರ್ಭಾನುಸಾರ ಸದರಿ ಕಾನೂನಿನ ಸಂವಾದಿ ಉಪಬಂಧಗಳ ಮೇರೆಗೆ ಹೊರಡಿಸಿರುವ ವಾರೆಂಟಿನ ಅಧಿಕಾರದ ಮೇರೆಗೆ ಮಾಡಿರುವ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅವು ಅನ್ವಯಿಸುವಂತೆ ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಸಾಧ್ಯವಾದಷ್ಟು ಅನ್ವಯಿಸತಕ್ಕದ್ದು.

ವಿವರಣೆ:— ಈ ಪ್ರಕರಣದ ಉದ್ದೇಶಗಳಿಗಾಗಿ "ಸ್ಥಳ" ಎಂಬುದು ನೌಕೆಯನ್ನು ಒಳಗೊಳ್ಳುವುದು.

**24. ಮಲಿನಗೊಳಿಸುವ ವಸ್ತುವನ್ನು ವಿಲೆ ಮಾಡಲು ತೊರೆ ಅಥವಾ ಬಾವಿಯನ್ನು ಉಪಯೋಗಿಸುವುದರ ಮೇಲೆ ನಿಷೇಧ ಇತ್ಯಾದಿ** :—(1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು,—

(ಕ) ಯಾವನೇ ವ್ಯಕ್ತಿಯು, ರಾಜ್ಯ ಮಂಡಲಿಯು ವಿಧಿಸಬಹುದಾದಂಥ ಗುಣಮಟ್ಟಗಳಿಗನುಸಾರವಾಗಿ ನಿರ್ಧರಿಸಿದ ಯಾವುದೇ ವಿಷಪೂರಿತ, ಹಾನಿಕರ ಅಥವಾ ಮಲಿನಗೊಳಿಸುವ ವಸ್ತುವನ್ನು ಯಾವುದೇ ತೊರೆ ಅಥವಾ ಬಾವಿಯೊಳಕ್ಕೆ (ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ) ಪ್ರವೇಶಿಸುವಂತೆ ಮಾಡತಕ್ಕದ್ದಲ್ಲ ಅಥವಾ ಅನುಮತಿಸತಕ್ಕದ್ದಲ್ಲ; ಅಥವಾ

(ಖ) ಯಾವನೇ ವ್ಯಕ್ತಿಯು ಪ್ರತ್ಯಕ್ಷವಾಗಿಯಾಗಲಿ ಅಥವಾ ಅಂಥವೇ ವಸ್ತುಗಳೊಂದಿಗೆ ಕೂಡಿಯಾಗಲಿ ಇತರ ಕಾರಣಗಳಿಗಾಗಿ ಮಾಲಿನ್ಯದ ಗಣನಾರ್ಹ ತೀವ್ರತೆ ಅಥವಾ ಅದರ ಪರಿಣಾಮಗಳಿಗೆ ಎಡೆಗೊಡುವ ಸಂಭವವಿರುವ ರೀತಿಯಲ್ಲಿ ಆ ತೊರೆಯ ನೀರಿನ ಸರಿಯಾದ ಹರವಿಗೆ ಅಡ್ಡಿಯನ್ನುಂಟು ಮಾಡಬಹುದಾದಂಥ ಯಾವುದೇ ಇತರ ವಸ್ತುವನ್ನು ಯಾವುದೇ ತೊರೆಯೊಳಗೆ ತಿಳಿದೂ ಪ್ರವೇಶಿಸುವಂತೆ ಮಾಡತಕ್ಕದ್ದಲ್ಲ ಅಥವಾ ಅದಕ್ಕೆ ಅನುಮತಿಸತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು, ಈ ಕೆಳಕಂಡ ಯಾವುದೇ ಕೃತ್ಯಗಳನ್ನು ಎಸಗಿರುವ ಅಥವಾ ಮಾಡುವಂತೆ ಮಾಡಿರುವ ಕಾರಣ ಮಾತ್ರದಿಂದಲೇ (1)ನೇ ಉಪಪ್ರಕರಣದ ಮೇರೆಗೆ ಅಪರಾಧದ ಬಗ್ಗೆ ತಪ್ಪಿತಸ್ಥನಾಗತಕ್ಕದ್ದಲ್ಲ, ಎಂದರೆ,—

(ಕ) ಯಾವುದೇ ತೊರೆಯಲ್ಲಿ ಅಥವಾ ಅಡ್ಡಲಾಗಿ ಅಥವಾ ಅದರ ದಂಡೆಯ ಅಥವಾ ಪಾತ್ರದ ಮೇಲೆ ಅವನು ನಿರ್ಮಿಸಲು, ಮೇಲ್ಪಾಟು ಮಾಡಲು ಅಥವಾ ಇಟ್ಟುಕೊಂಡು ಬರಲು ಹಕ್ಕನ್ನುಳ್ಳಂಥ ಯಾವುದೇ ಕಟ್ಟಡ, ಸೇತುವೆ, ಕೋಡಿ, ಒಡ್ಡು, ತೂಬು, ಹಡಗುಕಟ್ಟೆ, ಸೇತುವೆಯ ತಂಗು ಚರಂಡಿ ಅಥವಾ ಗ್ರಾಮಸಾರ ಚರಂಡಿ ಅಥವಾ ಇತರ ಕಾಯಂ ಕಾಮಗಾರಿಗಳನ್ನು ನಿರ್ಮಿಸುವುದು, ಮೇಲ್ಪಾಟು ಮಾಡುವುದು ಅಥವಾ ಇಟ್ಟುಕೊಂಡು ಬರುವುದು;

(ಖ) ಭೂಮಿಯನ್ನು ಮರಳಿ ಪಡೆಯುವ ಉದ್ದೇಶಕ್ಕಾಗಿ ಅಥವಾ ತೊರೆಯ ದಂಡೆ ಅಥವಾ ಪಾತ್ರಕ್ಕೆ ಆಸರೆ ಕೊಡುವುದು, ದುರಸ್ತಿ ಮಾಡುವುದು ಅಥವಾ ಪರೀಕ್ಷಿಸುವುದಕ್ಕಾಗಿ ಯಾವುದೇ ಅಂಥ ತೊರೆಯ ದಂಡೆಯ ಮೇಲೆ ಅಥವಾ ಪಾತ್ರದಲ್ಲಿ ಯಾವುವೇ ಸಾಮಗ್ರಿಗಳನ್ನು ಶೇಖರಿಸಿಡುವುದು :

ಪರಂತು, ಅಂಥ ಸಾಮಗ್ರಿಗಳು ಅಂಥ ತೊರೆಯನ್ನು ಮಾಲಿನ್ಯಗೊಳಿಸುವ ಸಾಮರ್ಥ್ಯವುಳ್ಳವಾಗಿರಕೂಡದು ;

(ಗ) ಅಂಥ ತೊರೆಯ ಪ್ರವಾಹದಿಂದ ಹರಿದು ಬಂದ ಅಥವಾ ಶೇಖರಗೊಂಡಿರುವ ಯಾವುದೇ ಮರಳು, ತಂತುರು ಅಥವಾ ಇತರ ನೈಸರ್ಗಿಕ ನಿಕ್ಷೇಪವನ್ನು ಯಾವುದೇ ತೊರೆಯೊಳಕ್ಕೆ ಹಾಕುವುದು ;

(ಘ) ರಾಜ್ಯ ಮಂಡಲಿಯ ಸಮ್ಮತಿ ಪಡೆದು ಯಾವುದೇ ತೊರೆ, ಬಾವಿ, ಕೊಳವೆ, ಅಥವಾ ಜಲಾಶಯದಲ್ಲಿ ಶೇಖರಣೆಯಾದ ನಿಕ್ಷೇಪವನ್ನು ಯಾವುದೇ ತೊರೆಯೊಳಕ್ಕೆ ಪ್ರವೇಶಿಸುವಂತೆ ಮಾಡುವುದು ಅಥವಾ ಅದಕ್ಕೆ ಅನುಮತಿಸುವುದು;

(3) ರಾಜ್ಯ ಸರ್ಕಾರವು, ಆ ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ ಅಥವಾ ಅದರ ಶಿಫಾರಸ್ಸಿನ ಮೇಲೆ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳು ಯಾವುದಾದರೂ ಇದ್ದರೆ, ಅವುಗಳಿಗೆ ಒಳಪಟ್ಟು, ಯಾವನೇ ವ್ಯಕ್ತಿಯನ್ನು (1)ನೇ ಉಪಪ್ರಕರಣದ ಪ್ರವರ್ತನೆಯಿಂದ ವಿನಾಯ್ತಿಗೊಳಿಸಬಹುದು ಮತ್ತು ಹಾಗೆ ನಿರ್ದಿಷ್ಟಪಡಿಸಿದ ಯಾವುದೇ ಷರತ್ತನ್ನು ಅಂಥದೇ ಅಧಿಸೂಚನೆಯ ಮೂಲಕ ಬದಲಾಯಿಸಬಹುದು, ವ್ಯತ್ಯಸ್ತಗೊಳಿಸಬಹುದು ಅಥವಾ ತಿದ್ದುಪಡಿ ಮಾಡಬಹುದು.

**25. ಹೊಸ ಹೊರದಾರಿಗಳು ಮತ್ತು ಹೊಸ ಹರಿಸುವಿಕೆಗಳ ಮೇಲೆ ಪ್ರತಿಬಂಧಗಳು.**—

(1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾವನೇ ವ್ಯಕ್ತಿಯು, ರಾಜ್ಯ ಮಂಡಲಿಯ ಪೂರ್ವ ಸಮ್ಮತಿಯಿಲ್ಲದೆ ತೊರೆ ಅಥವಾ ಬಾವಿ ಅಥವಾ ಗ್ರಾಮಸಾರ ಚರಂಡಿಯೊಳಗೆ ಅಥವಾ ಭೂಮಿಯ ಮೇಲೆ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹವನ್ನು ಹರಿಸುವುದಕ್ಕಾಗಿ ಯಾವುದೇ ಹೊಸ ಅಥವಾ ಬದಲಾಯಿಸಿದ ಹೊರದಾರಿಯನ್ನು

ಉಪಯೋಗಿಸತಕ್ಕದಲ್ಲ ಅಥವಾ ಯಾವುದೇ ತೊರೆ, ಬಾವಿ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಭೂಮಿಯ ಮೇಲೆ ಗ್ರಾಮಸಾರ ಅಥವಾ ಕೈಗಾರಿಕಾ ಕಶ್ಮಲ ಪ್ರವಾಹದ ಯಾವುದೇ ಹೊಸ ಹರಿಸುವಿಕೆಯನ್ನು ಪ್ರಾರಂಭಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಸಮ್ಮತಿಗಾಗಿನ ಅರ್ಜಿಯು ನಿಯಮಿಸಬಹುದಾದಂಥ ಫೀಜಿನೊಂದಿಗೆ ಇರತಕ್ಕದ್ದು ಮತ್ತು ಅದನ್ನು ನಿಯಮಿಸಿದ ನಮೂನೆಯಲ್ಲಿ ಮಾಡಿಕೊಳ್ಳತಕ್ಕದ್ದು ಮತ್ತು ಅದು ಕೈಗಾರಿಕಾ ಅಥವಾ ವಾಣಿಜ್ಯ ಕಾರ್ಯ ಸಂಸ್ಥೆಯ ಪ್ರಸ್ತಾವಿತ ನಿರ್ಮಾಣ, ಸ್ಥಾಪನೆ ಅಥವಾ ಕಾರ್ಯಾಚರಣೆ ಅಥವಾ ಯಾವುದೇ ಸಂಸ್ಕರಣ ಮತ್ತು ವಿಲೇ ವ್ಯವಸ್ಥೆ ಅಥವಾ ಅದರ ಯಾವುದೇ ವಿಸ್ತರಣೆ ಅಥವಾ ಸೇರ್ಪಡೆ ಬಗ್ಗೆ ವಿವರಗಳನ್ನು ಮತ್ತು ನಿಯಮಿಸಬಹುದಾದಂಥ ಇತರ ವಿವರಗಳನ್ನು ಒಳಗೊಂಡಿರತಕ್ಕದ್ದು.

(3) ರಾಜ್ಯ ಮಂಡಲಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸಮ್ಮತಿಗಾಗಿನ ಅರ್ಜಿಗೆ ಸಂಬಂಧಿಸಿದಂತೆ ಅದು ಯೋಗ್ಯವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ಮಾಡಬಹುದು ಮತ್ತು ಅಂಥ ಯಾವುದೇ ವಿಚಾರಣೆಯನ್ನು ಮಾಡುವಲ್ಲಿ ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(4) ರಾಜ್ಯ ಮಂಡಲಿಯು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ತನ್ನ ಸಮ್ಮತಿಯನ್ನು—

(ಕ) ಹೊಸ ಅಥವಾ ಬದಲಾಯಿಸಿದ್ದ ಹೊರದಾರಿಯ ಸಂದರ್ಭದಲ್ಲಿ, ತೊರೆ ಅಥವಾ ಬಾವಿ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಭೂಮಿಯ ಮೇಲೆ ಹರಿಸುವ ಹಂತ ಅಥವಾ ಆ ಹೊರದಾರಿಯ ನಿರ್ಮಾಣದ ಬಗ್ಗೆ ಅಥವಾ ಆ ಹೊರದಾರಿಯ ಉಪಯೋಗದ ಬಗ್ಗೆ ಅಥವಾ ಆ ಹೊರದಾರಿಯ ಅಥವಾ ಅದೇ ಭೂಮಿ ಅಥವಾ ಆವರಣದಿಂದ ಗ್ರಾಮಸಾರ, ಅಥವಾ ಕೈಗಾರಿಕಾ ಕಶ್ಮಲಕ್ಕಾಗಿನ ಯಾವುದೇ ಇತರ ಹೊರದಾರಿಯ ಉಪಯೋಗದ ಬಗ್ಗೆ ಷರತ್ತುಗಳಾಗಿರುವ ;

(ಖ) ಹೊಸ ಹರಿಸುವಿಕೆ ಸಂದರ್ಭದಲ್ಲಿ, ಹೊಸ ಹರಿಸುವಿಕೆಯನ್ನು ಬಿಡಬೇಕಾದಂಥ ಭೂಮಿ ಅಥವಾ ಆವರಣಗಳಿಂದ ಕಶ್ಮಲ ಪ್ರವಾಹವನ್ನು ಹರಿಸುವುದರ ಸ್ವರೂಪ, ಮಿಶ್ರಣ, ಉಷ್ಣಾಂಶ, ಪರಿಮಾಣ ಅಥವಾ ಪ್ರಮಾಣದ ಬಗ್ಗೆ ಷರತ್ತುಗಳಾಗಿರುವ,

ತಾನು ವಿಧಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಕೊಡಬಹುದು ಮತ್ತು ವಿಧಿಸಲಾದ ಯಾವುವೇ ಅಂಥ ಷರತ್ತುಗಳು ಆ ಹೊರದಾರಿಯನ್ನು ಉಪಯೋಗಿಸುವ ಅಥವಾ ಹಿಂದೆ ಹೇಳಿದ ಭೂಮಿ ಅಥವಾ ಆವರಣದಿಂದ ಕಶ್ಮಲ ಪ್ರವಾಹವನ್ನು ಹೊರಹಾಕುತ್ತಿರುವ ಯಾವನೇ ವ್ಯಕ್ತಿಯ ಮೇಲೆ ಬಂಧನಕಾರಿಯಾಗಿರತಕ್ಕದ್ದಲ್ಲ.

(5) ರಾಜ್ಯ ಮಂಡಲಿಯ ಸಮ್ಮತಿಯಿಲ್ಲದೆ, ತೊರೆ ಅಥವಾ ಬಾವಿ ಅಥವಾ ಗ್ರಾಮಸಾರ ಚರಂಡಿಯೊಳಕ್ಕೆ ಅಥವಾ ಭೂಮಿಯ ಮೇಲೆ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಹರಿಸುವಿಕೆಗಾಗಿ ಹೊಸ ಅಥವಾ ಬದಲಾಯಿಸಿದ ಹೊರದಾರಿಯನ್ನು ಉಪಯೋಗಕ್ಕೆ ತಂದಿರುವಲ್ಲಿ ಅಥವಾ ಹೊಸ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಹೊಸ ಹರಿಸುವಿಕೆಯನ್ನು ಮಾಡಿರುವಲ್ಲಿ, ರಾಜ್ಯ ಮಂಡಲಿಯು, ಸಂದರ್ಭಾನುಸಾರ, ಆ ಹೊರದಾರಿಯನ್ನು ಉಪಯೋಗಿಸುತ್ತಿರುವ ಅಥವಾ ಹರಿಸುವಿಕೆಯನ್ನು ಮಾಡುತ್ತಿರುವ ವ್ಯಕ್ತಿಗೆ ಅಂಥ ಹೊರದಾರಿ ಅಥವಾ ಹರಿಸುವಿಕೆಗೆ ಸಂಬಂಧಿಸಿದಂತೆ ಅದರ ಸಮ್ಮತಿಗಾಗಿನ ಅರ್ಜಿಯ ಮೇಲೆ ಅದು ವಿಧಿಸಬಹುದಾಗಿದ್ದಂಥ ಯಾವುವೇ ಷರತ್ತುಗಳನ್ನು ವಿಧಿಸಿ ನೋಟೀಸನ್ನು ಜಾರಿ ಮಾಡಬಹುದು.

(6) ಪ್ರತಿಯೊಂದು ರಾಜ್ಯ ಮಂಡಲಿಯು, ಅದರ ಅಧಿಕಾರ ವ್ಯಾಪ್ತಿಯಲ್ಲಿನ ಹೊರದಾರಿಗಳಿಗೆ ಸಂಬಂಧಪಟ್ಟಂತೆ ಅಥವಾ ಭೂಮಿ ಅಥವಾ ಆವರಣಗಳಿಂದ ಬರುವ ಕಶ್ಮಲ ಪ್ರವಾಹಕ್ಕೆ ಸಂಬಂಧಪಟ್ಟಂತೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವಂತೆ (ಹೊರದಾರಿಯನ್ನು ಉಪಯೋಗಿಸುವ ಅಥವಾ ಹೊಸ ಹರಿಸುವಿಕೆಯನ್ನು ಮಾಡುವುದಕ್ಕೆ ಮುಂಚೆ ಪೂರೈಸಬೇಕಾದ ಷರತ್ತುಗಳನ್ನು ಹೊರತುಪಡಿಸಿ) ಈ ಅಧಿನಿಯಮದ ಮೇರೆಗೆ ವಿಧಿಸಿದಂಥ ಷರತ್ತುಗಳ ವಿವರಗಳನ್ನು ಒಳಗೊಂಡ ರಿಜಿಸ್ಟರನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಯಾವುದೇ ಹೊರದಾರಿ ಅಥವಾ ಅಂಥ ಭೂಮಿ ಅಥವಾ ಆವರಣಗಳಿಂದ ಬರುವ ಯಾವುದೇ ಕಶ್ಮಲ ಪ್ರವಾಹಕ್ಕೆ ಸಂಬಂಧಪಡುವ ರಿಜಿಸ್ಟರಿನ ಆ ಭಾಗವು, ಎಲ್ಲ ಯುಕ್ತ ಕಾಲಗಳಲ್ಲಿ ಆ ಹೊರದಾರಿ ಅಥವಾ ಸಂದರ್ಭಾನುಸಾರ ಆ ಭೂಮಿ ಅಥವಾ ಆವರಣದಲ್ಲಿ ಹಿತಾಸಕ್ತಿಯನ್ನು ಹೊಂದಿದ ಅಥವಾ ಅವುಗಳಿಂದ ಬಾಧಿತನಾದ ವ್ಯಕ್ತಿಯು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು ಪರಿಶೀಲಿಸಲು ಮುಕ್ತವಾಗಿರತಕ್ಕದ್ದು ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಅಂಥ ರಿಜಿಸ್ಟರಿನಲ್ಲಿ ಹಾಗೆ ಒಳಗೊಂಡಿರುವ ಷರತ್ತುಗಳು, ಆ ಸಮ್ಮತಿಯನ್ನು ಕೊಟ್ಟಿರುವುದರ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

(7) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಸಮ್ಮತಿಯನ್ನು ಮುಂಚಿತವಾಗಿ ಕೊಟ್ಟಿದ್ದ ಅಥವಾ ತಿರಸ್ಕರಿಸಿದ್ದ ಹೊರತು, ಈ ಬಗ್ಗೆ ರಾಜ್ಯ ಮಂಡಲಿಗೆ ಎಲ್ಲ ವಿಧದಲ್ಲಿ ಪೂರ್ಣವಾದ ಅರ್ಜಿಯನ್ನು ಮಾಡಿಕೊಂಡ ನಾಲ್ಕು ತಿಂಗಳುಗಳ ಅವಧಿಯು ಮುಕ್ತಾಯವಾದ ಮೇಲೆ ಬೇಷರತ್ತಾಗಿ ಅದನ್ನು ಕೊಟ್ಟಿರುವುದಾಗಿ ಭಾವಿಸತಕ್ಕದ್ದು.

(8) ಈ ಪ್ರಕರಣ ಮತ್ತು 27ನೇ ಮತ್ತು 30ನೇ ಪ್ರಕರಣಗಳ ಉದ್ದೇಶಕ್ಕಾಗಿ,—

(ಕ) "ಹೊಸ ಅಥವಾ ಬದಲಾಯಿಸಿದ ಹೊರದಾರಿ" ಎಂಬ ಪದಾವಳಿಗೆ, ಈ ಅಧಿನಿಯಮವು ಪ್ರಾರಂಭವಾದಂದು ಅಥವಾ ಆ ತರುವಾಯ ಸಂಪೂರ್ಣವಾಗಿ ಅಥವಾ ಭಾಗಶಃ ನಿರ್ಮಿಸಿದಂಥ ಅಥವಾ ಅಂಥ ಪ್ರಾರಂಭದ ತರುವಾಯ ಗಮನಾರ್ಹವಾಗಿ ಬದಲಾಯಿಸಿದಂಥ (ಹಾಗೆ ನಿರ್ಮಿಸಿರಲಿ ಅಥವಾ ಇಲ್ಲದಿರಲಿ) ಯಾವುದೇ ಹೊರದಾರಿ ಎಂದು ಅರ್ಥ ;

(ಖ) "ಹೊಸ ಹರಿಸುವಿಕೆ" ಎಂಬ ಪದಾವಳಿಗೆ ಕಶ್ಮಲ ಪ್ರವಾಹದ ಹರಿಸುವಿಕೆಯು ಸ್ವರೂಪ ಮತ್ತು ಮಿಶ್ರಣ, ಉಷ್ಣಾಂಶ, ಪರಿಮಾಣ ಮತ್ತು ಪ್ರಮಾಣದ ಬಗ್ಗೆ ಹಿಂದಿನ ಹನ್ನೆರಡು ತಿಂಗಳುಗಳೊಳಗೆ ಮಾಡಿದ ಹರಿಸುವಿಕೆಯು (ಅದೇ ಅಥವಾ ಬೇರೆ ಹೊರದಾರಿಯ ಮೂಲಕವಾಗಿಯಾಗಲೀ) ಗಣನಾರ್ಹ ಮುಂದುವರಿಕೆಯಲ್ಲದಂಥ ಹರಿಸುವಿಕೆ ಎಂದು ಅರ್ಥ. ಆದಾಗ್ಯೂ, ಹರಿಸುವಿಕೆಯು, ಹಿಂದೆ ಹೇಳಿದಂತೆ ಮಾಡಿದ ಹಿಂದಿನ ಹರಿಸುವಿಕೆಯ ಮುಂದುವರಿಕೆಯಾಗಿರುವಲ್ಲಿ ಅದನ್ನು ಹಿಂದಿನ ಹರಿಸುವಿಕೆಯೊಡನೆ ಹೋಲಿಸಿದರೆ, ಆ ಕಶ್ಮಲ ಪ್ರವಾಹದ ಉಷ್ಣಾಂಶ ಅಥವಾ ಪರಿಮಾಣ ಅಥವಾ ಪ್ರಮಾಣದ ಯಾವುದೇ ಕಡಿತದ ಕಾರಣದಿಂದಾಗಿ ಹೊಸ ಹರಿಸುವಿಕೆ ಎಂಬುದಾಗಿ ಭಾವಿಸತಕ್ಕದ್ದಲ್ಲ.

**26. ಗ್ರಾಮಸಾರ ಚರಂಡಿ ಅಥವಾ ಕಾರ್ಖಾನೆ ಕಶ್ಮಲದ ಅಸ್ತಿತ್ವದಲ್ಲಿರುವ ಹರಿಸುವಿಕೆಗೆ ಸಂಬಂಧಿಸಿದಂತೆ ಉಪಬಂಧ :—** ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ನಿಕಟಪೂರ್ವದಲ್ಲಿ, ಯಾವನೇ ವ್ಯಕ್ತಿಯು, ತೊರೆ ಅಥವಾ ಬಾವಿ ಅಥವಾ ಗ್ರಾಮಸಾರ ಚರಂಡಿ ಒಳಕ್ಕೆ ಅಥವಾ ಭೂಮಿಯ ಮೇಲೆ ಯಾವುದೇ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲವನ್ನು ಹರಿಸುತ್ತಿದ್ದಲ್ಲಿ, 25ನೇ ಪ್ರಕರಣದ ಉಪಬಂಧಗಳು, ಆ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಮ್ಮತಿಗಾಗಿ ಸಲ್ಲಿಸಬೇಕಾದ ಅರ್ಜಿಯನ್ನು, ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಈ ಬಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಅಥವಾ ದಿನಾಂಕಕ್ಕೆ ಮುಂಚೆ ಸಲ್ಲಿಸತಕ್ಕದೆಂಬ ಮಾರ್ಪಾಡಿಗೊಳಪಟ್ಟು, ಆ ಪ್ರಕರಣದಲ್ಲಿ ಉಲ್ಲೇಖಿಸಿರುವ ವ್ಯಕ್ತಿಗೆ ಸಂಬಂಧಿಸಿದಂತೆ ಅವು ಅನ್ವಯವಾಗುವ ಹಾಗೆ ಅಂಥ ವ್ಯಕ್ತಿಗೆ ಸಂಬಾಧ ಪಟ್ಟಂತೆ ಸಾಧ್ಯವಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದು.

**27. ರಾಜ್ಯ ಮಂಡಲಿಯು ಸಮ್ಮತಿಯನ್ನು ನಿರಾಕರಿಸುವುದು ಅಥವಾ ಹಿಂತೆಗೆದುಕೊಳ್ಳುವುದು:**–(1) ರಾಜ್ಯ ಮಂಡಲಿಯು, ಹೊಸ ಅಥವಾ ಮಾರ್ಪಾಡು ಮಾಡಿರುವ ಹೊರದಾರಿಯನ್ನು ಉಪಯೋಗಿಸಲು, ಆ ಕಶ್ಮಲ ಪ್ರವಾಹದ ಮಾದರಿಗಳನ್ನು ತೆಗೆದುಕೊಳ್ಳುವ ತನ್ನ ಹಕ್ಕನ್ನು ಚಲಾಯಿಸಲು ಮಂಡಲಿಯನ್ನು ಸಮರ್ಥಗೊಳಿಸಲು ಮಂಡಲಿಯು ವಿಧಿಸಿರುವ ಯಾವುದೇ ಷರತ್ತುಗಳನ್ನು ಪಾಲಿಸುವ ಹಾಗೆ ಆ ಹೊರದಾರಿಯನ್ನು ನಿರ್ಮಿಸಿದ್ದ ಹೊರತು, ಅದರ ಸಮ್ಮತಿಯನ್ನು ಮಂಜೂರ್ಮಾಡತಕ್ಕದಲ್ಲ.

(2) ರಾಜ್ಯ ಮಂಡಲಿಯು ಕಾಲಕಾಲಕ್ಕೆ,–

(ಕ) 25ನೇ ಪ್ರಕರಣದ ಮೇರೆಗೆ (ಹೊರದಾರಿಯನ್ನು ಉಪಯೋಗಿಸುವುದಕ್ಕಾಗಿ ಅಥವಾ ಹೊಸ ಹರಿಸುವಿಕೆಯನ್ನು ಮಾಡುವುದಕ್ಕೆ ಮುಂಚೆ ಪೂರೈಸಬೇಕಾದ ಷರತ್ತನ್ನು ಹೊರತು ಪಡಿಸಿ) ಅಥವಾ 26ನೇ ಪ್ರಕರಣದ ಮೇರೆಗೆ ವಿಧಿಸಿದ ಯಾವುದೇ ಷರತ್ತನ್ನು ಪುನರವಲೋಕಿಸಬಹುದು ಮತ್ತು ಸಂದರ್ಭಾನುಸಾರ ಆ ಹೊರದಾರಿಯನ್ನು ಉಪಯೋಗಿಸುವ ಅಥವಾ ಆ ಹರಿಸುವಿಕೆಯನ್ನು ಮಾಡುವ ವ್ಯಕ್ತಿಗೆ ಯಾವುದೇ ಅಂಥ ಷರತ್ತನ್ನು ಯಾವುದೇ ಯುಕ್ತ ಬದಲಾವಣೆಯನ್ನು ಮಾಡಿ ಅಥವಾ ರದ್ದುಪಡಿಸಿ ನೋಟೀಸನ್ನು ಜಾರಿ ಮಾಡಬಹುದು;

(ಖ) 25ನೇ ಪ್ರಕರಣದ ಅಥವಾ 26ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಯಾವುದೇ ಸಮ್ಮತಿಯ ನಿರಾಕರಣೆಯನ್ನು ಅಥವಾ ಯಾವುದೇ ಷರತ್ತಿಲ್ಲದೆ ಅಂಥ ಸಮ್ಮತಿ ಕೊಡುವುದನ್ನು ಪುನರವಲೋಕಿಸಬಹುದು ಮತ್ತು ಅದು ಯೋಗ್ಯವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

(3) 25ನೇ ಪ್ರಕರಣ ಅಥವಾ 26ನೇ ಪ್ರಕರಣದ ಮೇರೆಗೆ ವಿಧಿಸಿರುವ ಯಾವುದೇ ಷರತ್ತು, (2)ನೇ ಉಪಪ್ರಕರಣದ ಮೇರೆಗೆ ಮಾಡಿರುವ ಯಾವುದೇ ವ್ಯತ್ಯಾಸಕ್ಕೆ ಒಳಪಟ್ಟಿರತಕ್ಕದು ಮತ್ತು ಆ ಉಪಪ್ರಕರಣದ ಮೇರೆಗೆ ರದ್ದುಪಡಿಸುವವರೆಗೆ ಜಾರಿಯಲ್ಲಿರುವುದು ಮುಂದುವರೆಯತಕ್ಕದು.

**28 ಅಪೀಲುಗಳು:**—(1) 25ನೇ ಪ್ರಕರಣ, 26ನೇ ಪ್ರಕರಣ ಅಥವಾ 27ನೇ ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಮಾಡಿರುವ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಆತನಿಗೆ ಆದೇಶವನ್ನು ತಿಳಿಸಿದಂಥ ದಿನಾಂಕದಿಂದ ಮೂವತ್ತು ದಿವಸಗಳೊಳಗೆ ರಾಜ್ಯ ಸರ್ಕಾರವು ರಚಿಸಲು ಯೋಗ್ಯವೆಂದು ಯೋಚಿಸುವಂಥ ಪ್ರಾಧಿಕಾರಕ್ಕೆ (ಇಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರವೆಂದು ಉಲ್ಲೇಖಿಸಲಾಗಿದೆ) ಅಪೀಲನ್ನು ಹೂಡಬಹುದು:

ಪರಂತು, ಅಪೀಲು ಪ್ರಾಧಿಕಾರಕ್ಕೆ, ಸಾಕಷ್ಟು ಕಾರಣಗಳಿಂದ ಅಪೀಲುದಾರನಿಗೆ ಅಪೀಲನ್ನು ದಾಖಲ್ಮಾಡಲು ಅಡ್ಡಿಯುಂಟಾಗಿದ್ದಿತೆಂದು ಮನದಟ್ಟಾದರೆ, ಅದು ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನು ಪುರಸ್ಕರಿಸಬಹುದು.

(2) ಅಪೀಲು ಪ್ರಾಧಿಕಾರವು, ರಾಜ್ಯ ಸರ್ಕಾರವು ಯೋಗ್ಯವೆಂದು ಭಾವಿಸಬಹುದಾದಂತೆ, ಆ ಸರ್ಕಾರವು ನೇಮಕ ಮಾಡಬೇಕಾದ ಒಬ್ಬ ವ್ಯಕ್ತಿ ಅಥವಾ ಮೂರು ವ್ಯಕ್ತಿಗಳನ್ನು ಒಳಗೊಂಡಿರತಕ್ಕದು.

(3) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಹೂಡಬಹುದಾದಂಥ ನಮೂನೆ ಮತ್ತು ರೀತಿ ಅಂಥ ಅಪೀಲಿಗಾಗಿ ಸಂದಾಯ ಮಾಡಬೇಕಾದ ಫೀಜು ಮತ್ತು ಅಪೀಲು ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ, ನಿಯಮಿಸಬಹುದಾದಂಥವುಗಳಾಗಿರತಕ್ಕದು.

(4) (1)ನೇ ಉಪಪ್ರಕರಣದ ಮೇರೆಗೆ ಹೂಡಿದ ಅಪೀಲನ್ನು ಸ್ವೀಕರಿಸಿದ ನಂತರ, ಅಪೀಲುಪ್ರಾಧಿಕಾರವು, ಅಪೀಲುದಾರ ಮತ್ತು ರಾಜ್ಯ ಮಂಡಲಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಅವಕಾಶಕೊಟ್ಟ ನಂತರ, ಅಪೀಲನ್ನು ಸಾಧ್ಯವಾದಷ್ಟು ಬೇಗನೆ ವಿಲೆಮಾಡತಕ್ಕದು.

(5) ಅಪೀಲು ಪ್ರಾಧಿಕಾರವು, ಸಂದರ್ಭಾನುಸಾರ, ವಿಧಿಸಿರುವ ಯಾವುದೇ ಷರತ್ತು ಅಥವಾ ಯಾವುದೇ ಷರತ್ತಿನ ವ್ಯತ್ಯಾಸವು, ಅಯುಕ್ತವೆಂದು ನಿರ್ಧರಿಸಿದರೆ, ಆಗ,—

(ಕ) ಅಪೀಲು, ವಿಧಿಸಿದ ಯಾವುದೇ ಷರತ್ತಿನ ಅಯುಕ್ತತೆಗೆ ಸಂಬಂಧಿಸಿರುವಲ್ಲಿ ಅಂಥ ಪ್ರಾಧಿಕಾರವು, ಆ ಷರತ್ತನ್ನು ರದ್ದುಗೊಳಿಸಿರುವುದಾಗಿ ಪರಿಗಣಿಸತಕ್ಕದು ಅಥವಾ ಅದಕ್ಕೆ ಬದಲಾಗಿ ಅದಕ್ಕೆ ಯುಕ್ತವೆಂದು ಕಂಡು ಬರುವಂಥ ಷರತ್ತನ್ನು ಪ್ರತಿಯೋಜಿಸತಕ್ಕದೆಂದು ನಿರ್ದೇಶಿಸಬಹುದು ;

(ಖ) ಅಪೀಲು, ಷರತ್ತಿನ ಯಾವುದೇ ವ್ಯತ್ಯಾಸದ ಅಯುಕ್ತತೆಗೆ ಸಂಬಂಧಿಸಿರುವಲ್ಲಿ ಅಂಥ ಪ್ರಾಧಿಕಾರವು ಆ ಷರತ್ತು, ವ್ಯತ್ಯಾಸವಿಲ್ಲದೆ ಜಾರಿಯಲ್ಲಿರುವುದು ಮುಂದುವರೆಯುತ್ತಿರುವುದಾಗಿ ಪರಿಗಣಿಸತಕ್ಕದೆಂದಾಗಲೀ ಅಥವಾ ಅದಕ್ಕೆ ಯುಕ್ತವೆಂದು ಕಂಡು ಬರುವ ರೀತಿಯಲ್ಲಿ ಅದನ್ನು ವ್ಯತ್ಯಾಸಗೊಳಿಸತಕ್ಕದೆಂದಾಗಲಿ, ನಿರ್ದೇಶಿಸಬಹುದು.

**29 ಪರಿಷ್ಕರಣೆ:**–(1) ರಾಜ್ಯ ಸರ್ಕಾರವು, ಯಾವುದೇ ಕಾಲದಲ್ಲಿ, ಸ್ವಪ್ರೇರಣೆಯಿಂದಾಗಲೀ ಅಥವಾ ಈ ಬಗ್ಗೆ ಅದಕ್ಕೆ ಮಾಡಿಕೊಂಡ ಅರ್ಜಿಯ ಮೇಲೆ, ರಾಜ್ಯ ಮಂಡಲಿಯು, 25ನೇ ಪ್ರಕರಣ, 26ನೇ ಪ್ರಕರಣ ಅಥವಾ 27ನೇ ಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವ ಯಾವುದೇ ಸಂದರ್ಭದ ದಾಖಲೆಗಳನ್ನು, ಯಾವುದೇ ಅಂಥ ಆದೇಶದ ಕಾನೂನು ಸಮ್ಮತತೆ

ಅಥವಾ ಔಚಿತ್ಯದ ಬಗ್ಗೆ ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ತರಿಸಿಕೊಳ್ಳಬಹುದು ಮತ್ತು ಅದಕ್ಕೆ ಸಂಬಂಧಿಸಿದಂತೆ ಅದು ಯೋಗ್ಯವೆಂದು ಯೋಚಿಸಬಹುದಾದಂಥ ಆದೇಶವನ್ನು ಮಾಡಬಹುದು :

ಪರಂತು, ರಾಜ್ಯ ಸರ್ಕಾರವು, ಈ ಉಪಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಈ ವಿಷಯವಾಗಿ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ರಾಜ್ಯ ಮಂಡಳಿಗೆ ಮತ್ತು ಅಂಥ ಆದೇಶದಿಂದ ಬಾಧಿತನಾಗಬಹುದಾದ ವ್ಯಕ್ತಿಗೆ ಕೊಟ್ಟ ಹೊರತು, ಮಾಡತಕ್ಕದಲ್ಲ.

(2) ರಾಜ್ಯ ಸರ್ಕಾರವು, 25ನೇ ಪ್ರಕರಣ, 26ನೇ ಪ್ರಕರಣ ಅಥವಾ 27ನೇ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು, ಆ ಆದೇಶದ ವಿರುದ್ಧ ಅಪೀಲು ಪ್ರಾಧಿಕಾರಕ್ಕೆ ಅಪೀಲಿಗೆ ಅವಕಾಶ ಇರುವಲ್ಲಿ, ಆದರೆ ಅದನ್ನು ಹೂಡಿಲ್ಲದಿದ್ದಲ್ಲಿ ಅಥವಾ ಅಪೀಲನ್ನು ಹೂಡಲಾಗಿದ್ದು, ಅಂಥ ಅಪೀಲು, ಅಪೀಲು ಪ್ರಾಧಿಕಾರದ ಮುಂದೆ ಇತ್ಯರ್ಥದಲ್ಲಿರುವಲ್ಲಿ, ಪರಿಷ್ಕರಿಸತಕ್ಕದಲ್ಲ.

**30. ಕೆಲವು ಕಾಮಗಾರಿಗಳನ್ನು ನಿರ್ವಹಿಸಲು ರಾಜ್ಯ ಮಂಡಲಿಯ ಅಧಿಕಾರ:**—(1) ಈ ಅಧಿನಿಯಮದ ಮೇರೆಗೆ, ಯಾವನೇ ವ್ಯಕ್ತಿಗೆ, ತೊರೆ ಅಥವಾ ಬಾವಿಯೊಳಕ್ಕೆ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹವನ್ನು ಹರಿಸುವುದಕ್ಕಾಗಿ ಯಾವುದೇ ಹೊಸ ಅಥವಾ ಬದಲಾಯಿಸಿದ ಹೊರದಾರಿಯನ್ನು ಉಪಯೋಗಿಸುವುದಕ್ಕಾಗಿ ಅಥವಾ ತೊರೆ ಅಥವಾ ಬಾವಿಯೊಳಕ್ಕೆ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಯಾವುದೇ ಹೊಸ ಹರಿಸುವಿಕೆಯನ್ನು ಮಾಡುವುದಕ್ಕಾಗಿ ಅಥವಾ ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ತೊರೆ ಅಥವಾ ಬಾವಿಯೊಳಕ್ಕೆ ಯಾವುದೇ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹಗಳನ್ನು ಹರಿಸುತ್ತಿದ್ದ ಯಾವನೇ ವ್ಯಕ್ತಿಯ ಮೇಲೆ ಯಾವುವೇ ಷರತ್ತುಗಳನ್ನು ವಿಧಿಸಿರುವಲ್ಲಿ ಮತ್ತು ಅಂಥ ಷರತ್ತುಗಳು ಅದಕ್ಕೆ ಸಂಬಂಧಿಸಿದ ಯಾವುದೇ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಅಂಥ ವ್ಯಕ್ತಿಯನ್ನು ಅಗತ್ಯಗೊಳಿಸಿದ್ದು ಮತ್ತು ಈ ಬಗ್ಗೆ ಹಾಗೆ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಅಂಥ ಕಾಮಗಾರಿಯನ್ನು ಅವನು ಕಾರ್ಯಗತಗೊಳಿಸದಿರುವಲ್ಲಿ, ರಾಜ್ಯ ಮಂಡಳಿಯು, ಸಂಬಂಧಪಟ್ಟ ವ್ಯಕ್ತಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಕಾಲದೊಳಗೆ (ಮೂವತ್ತು ದಿವಸಗಳಿಗೆ ಕಡಿಮೆಯಿರದ) ಅದರಲ್ಲಿ ನಿರ್ದಿಷ್ಟಪಡಿಸಿರುವ ಕಾಮಗಾರಿಯನ್ನು ಕಾರ್ಯಗತಗೊಳಿಸುವಂತೆ ಅವನನ್ನು ಅಗತ್ಯಪಡಿಸಿ ನೋಟೀಸನ್ನು ಜಾರಿಗೊಳಿಸಬಹುದು.

(2) (1) ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಿರುವ ನೋಟೀಸಿನಲ್ಲಿ ಅಗತ್ಯಪಡಿಸಿರುವ ಕಾಮಗಾರಿಯನ್ನು ಕಾರ್ಯಗತಗೊಳಿಸಲು ಸಂಬಂಧಪಟ್ಟ ವ್ಯಕ್ತಿಯು ವಿಫಲನಾದರೆ, ಆಗ ಸದರಿ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ಕಾಲವು ಮುಗಿದ ತರುವಾಯ, ರಾಜ್ಯ ಮಂಡಳಿಯು, ಅಂಥ ಕೆಲಸವನ್ನು ತಾನೇ ಕಾರ್ಯಗತಗೊಳಿಸಬಹುದು ಅಥವಾ ಕಾರ್ಯಗತಗೊಳಿಸುವಂತೆ ಮಾಡಬಹುದು.

(3) ಹಿಂದೆ ಹೇಳಿದ ಕಾಮಗಾರಿಯನ್ನು ಕಾರ್ಯಗತಗೊಳಿಸಲು ರಾಜ್ಯ ಮಂಡಲಿಯು ಮಾಡಿದ ಎಲ್ಲ ವೆಚ್ಚಗಳನ್ನು ರಾಜ್ಯ ಸರ್ಕಾರವು ಆದೇಶದ ಮೂಲಕ, ಖರ್ಚುಗಳಿಗಾಗಿ ತಗಾದೆ ಮಾಡಿದ ದಿನಾಂಕದಿಂದ ಅದನ್ನು ಸಂದಾಯ ಮಾಡುವವರೆಗೆ, ನಿಗದಿಗೊಳಿಸಬಹುದಾದಂಥ ದರದಲ್ಲಿ ಬಡ್ಡಿ ಸಹಿತವಾಗಿ, ಭೂಕಂದಾಯದ ಅಥವಾ ಸರ್ಕಾರಿ ತಗಾದೆಯ ಬಾಕಿಗಳಂತೆ ಸಂಬಂಧಪಟ್ಟ ವ್ಯಕ್ತಿಯಿಂದ ಆ ಮಂಡಲಿಯು ವಸೂಲ್ಮಾಡಬಹುದು.

**31. ಕೆಲವು ಸಂದರ್ಭಗಳಲ್ಲಿ ರಾಜ್ಯ ಮಂಡಲಿ ಮತ್ತು ಇತರ ಏಜೆನ್ಸಿಗಳಿಗೆ ಮಾಹಿತಿಯನ್ನು ಒದಗಿಸುವುದು:**—(1) ಯಾವುದೇ ಕೈಗಾರಿಕೆ ಅಥವಾ ವ್ಯಾಪಾರವನ್ನು ನಡೆಸುತ್ತಿರುವ ಯಾವುದೇ ಸ್ಥಳದಲ್ಲಿ, ಆಕಸ್ಮಿಕ ಅಥವಾ ಇತರ ಮುಂಗಾಣದ ಕೃತ್ಯ ಅಥವಾ ಘಟನೆಯಿಂದಾಗಿ, ತೊರೆ ಅಥವಾ ಬಾವಿಯೊಳಕ್ಕೆ ಯಾವುದೇ ವಿಷಪೂರಿತ, ಹಾನಿಕರ ಅಥವಾ ಮಲಿನಗೊಳಿಸುವ ವಸ್ತುವನ್ನು ಹರಿಸಲಾಗುತ್ತಿದ್ದರೆ ಅಥವಾ ಹರಿಸುವ ಸಂಭವವಿದ್ದರೆ ಮತ್ತು ಅಂಥ ಹರಿಸುವಿಕೆಯ ಪರಿಣಾಮವಾಗಿ ಅಂಥ ತೊರೆ ಅಥವಾ ಬಾವಿಯ ನೀರು ಮಲಿನಗೊಳ್ಳುತ್ತಿದ್ದರೆ, ಅಥವಾ ಮಲಿನಗೊಳ್ಳುವ ಸಂಭವವಿದ್ದರೆ, ಆಗ, ಅಂಥ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಯು, ರಾಜ್ಯ ಮಂಡಲಿ ಮತ್ತು ನಿಯಮಿಸಬಹುದಾದಂಥ ಇತರ ಪ್ರಾಧಿಕಾರಗಳು ಅಥವಾ ಏಜೆನ್ಸಿಗಳಿಗೆ ಅಂಥ ಆಕಸ್ಮಿಕ, ಕಾರ್ಯ ಅಥವಾ ಘಟನೆಯ ಘಟಿಸುವಿಕೆಯನ್ನು ತತ್‌ಕ್ಷಣ ತಿಳಿಸತಕ್ಕದು.

(2) ಯಾವುದೇ ಸ್ಥಳೀಯ ಪ್ರಾಧಿಕಾರವು, ಯಾವುದೇ ಗ್ರಾಮಸಾರ ಚರಂಡಿ ವ್ಯವಸ್ಥೆ ಅಥವಾ ಗ್ರಾಮಸಾರ ಕಾಮಗಾರಿಗಳನ್ನು ನಡೆಸುವಲ್ಲಿ (1)ನೇ ಉಪ-ಪ್ರಕರಣದ ಉಪಬಂಧಗಳನ್ನು, ಅಂಥ ಸ್ಥಳೀಯ ಪ್ರಾಧಿಕಾರಕ್ಕೆ, ಯಾವುದೇ ಕೈಗಾರಿಕೆ ಅಥವಾ ವ್ಯಾಪಾರ ನಡೆಸುತ್ತಿರುವ ಸ್ಥಳದ ಪ್ರಭಾರದಲ್ಲಿರುವ ವ್ಯಕ್ತಿಯ ಸಂಬಂಧದಲ್ಲಿ ಅವುಗಳನ್ನು ಅನ್ವಯಿಸುವಂತೆಯೇ ಅನ್ವಯಿಸತಕ್ಕದು.

**32. ತೊರೆ ಅಥವಾ ಬಾವಿಯ ಮಲಿನತೆಯ ಸಂದರ್ಭಗಳಲ್ಲಿನ ತುರ್ತು ಕ್ರಮಗಳು:**—(1) ಯಾವುದೇ ತೊರೆ ಅಥವಾ ಬಾವಿಯಲ್ಲಿ ಯಾವುದೇ ವಿಷಪೂರಿತ, ಹಾನಿಕಾರಕ ಅಥವಾ ಮಲಿನಗೊಳಿಸುವ ವಸ್ತು ಇರುವುದೆಂದು ಅಥವಾ ಯಾವುದೇ ಆಕಸ್ಮಿಕ ಅಥವಾ ಇತರ ಮುಂಗಾಣದ ಕೃತ್ಯ ಅಥವಾ ಘಟನೆಯಿಂದಾಗಿ ಆ ತೊರೆ ಅಥವಾ ಬಾವಿಯೊಳಕ್ಕೆ ಅದು ಸೇರಿದೆ ಎಂದು ರಾಜ್ಯ ಮಂಡಳಿಗೆ ಕಂಡು ಬಂದಲ್ಲಿ ಮತ್ತು ತ್ವರಿತ ಕ್ರಮವನ್ನು ಕೈಗೊಳ್ಳುವುದು ಆವಶ್ಯ ಅಥವಾ ವಿಹಿತವೆಂದು ಆ ಮಂಡಲಿಯು ಅಭಿಪ್ರಾಯಪಟ್ಟರೆ, ಅದು, ಬರಹದಲ್ಲಿ ದಾಖಲ್ಮಾಡಬೇಕಾದ ಕಾರಣಗಳಿಗಾಗಿ ಈ ಕೆಳಕಂಡ ಎಲ್ಲ ಅಥವಾ ಯಾವುದೇ ಉದ್ದೇಶಗಳಿಗಾಗಿ ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಕಾರ್ಯಾಚರಣೆಗಳನ್ನು ಕಾರ್ಯಗತಗೊಳಿಸಬಹುದು, ಅಂದರೆ,—

(ಕ) ಆ ವಸ್ತುವನ್ನು ತೊರೆ ಅಥವಾ ಬಾವಿಯಿಂದ ತೆಗೆದುಹಾಕುವುದು ಮತ್ತು ಮಂಡಲಿಯು ಯುಕ್ತವೆಂದು ಪರ್ಯಾಲೋಚಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡುವುದು;

(ಖ) ತೊರೆ ಅಥವಾ ಬಾವಿಯಲ್ಲಿ ಯಾವುದೇ ಮಲಿನ ವಸ್ತುವಿನ ಇರುವಿಕೆಯಿಂದುಂಟಾಗಿರುವ ಮಾಲಿನ್ಯವನ್ನು ಪರಿಹರಿಸುವುದು ಅಥವಾ ಕಡಿಮೆ ಮಾಡುವುದು;

(ಗ) ತೊರೆ ಅಥವಾ ಬಾವಿಯೊಳಕ್ಕೆ ಯಾವುದೇ ವಿಷಪೂರಿತ, ಹಾನಿಕಾರಕ ಅಥವಾ ಮಲಿನ ವಸ್ತುವನ್ನು ಹರಿಸುವುದರಿಂದ ಅಥವಾ ತೊರೆ ಅಥವಾ ಬಾವಿಯನ್ನು ಅನೈರ್ಮಲ್ಯಕರವಾಗಿ ಬಳಸುವುದರಿಂದ ಸಂಬಂಧಪಟ್ಟ ವ್ಯಕ್ತಿಯನ್ನು ನಿರ್ಬಂಧಪಡಿಸುವ ಅಥವಾ ನಿಷೇಧಿಸುವ ಆದೇಶಗಳನ್ನು ಕೂಡಲೇ ಹೊರಡಿಸುವುದು.

(2) (1)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವು, ಕಾರ್ಯಾಚರಣೆಗಳ ಮುಂಕ್ರಮವಾಗಿ ಅಥವಾ ಅದಕ್ಕೆ ಮೊದಲು ತೆಗೆದು ಹಾಕಿರುವಂಥ ತಾತ್ಕಾಲಿಕ ಸ್ವರೂಪದ ಕಾಮಗಾರಿಗಳನ್ನು ಹೊರತುಪಡಿಸಿ ಯಾವುದೇ ಇತರ ಕಾಮಗಾರಿಗಳನ್ನು ನಿರ್ಮಿಸುವ ಅಧಿಕಾರವನ್ನು ಒಳಗೊಳ್ಳುವುದಿಲ್ಲ.

**33. ತೊರೆಗಳು ಅಥವಾ ಬಾವಿಗಳಲ್ಲಿನ ನೀರಿನ ಶಂಕಿತ ಮಾಲಿನ್ಯವನ್ನು ನಿರ್ಬಂಧಿಸುವುದಕ್ಕಾಗಿ ನ್ಯಾಯಾಲಯಗಳಿಗೆ ಅರ್ಜಿ ಸಲ್ಲಿಸಲು ಮಂಡಲಿಯ ಅಧಿಕಾರ** :—(1) ಯಾವುದೇ ತೊರೆ ಅಥವಾ ಬಾವಿಯಲ್ಲಿನ ನೀರು, ಅದರಲ್ಲಿನ ಯಾವುದೇ ವಸ್ತುವಿನ ವಿಲೆಯ ಅಥವಾ ಅದರಲ್ಲಿನ ಯಾವುದೇ ವಸ್ತುವಿನ ಯಾವುದೇ ಸಂಭವನೀಯ ವಿಲೆಯ ಕಾರಣದಿಂದ ಅಥವಾ ಅನ್ಯಥಾ ಮಲಿನಗೊಳ್ಳುವ ಸಂಭವವಿದೆಯೆಂದು ಮಂಡಲಿಗೆ ಶಂಕೆಯುಂಟಾಗಿರುವಲ್ಲಿ, ಆ ಮಂಡಲಿಯು, ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮದರ್ಜೆ ಮ್ಯಾಜಿಸ್ಟ್ರೇಟ್ ದರ್ಜೆಗೆ ಕಡಿಮೆಯಲ್ಲದ ನ್ಯಾಯಾಲಯಕ್ಕೆ, ಅಂಥ ಮಾಲಿನ್ಯವನ್ನು ಉಂಟು ಮಾಡುವ ಸಂಭವವಿರುವ ವ್ಯಕ್ತಿಯು ಹಾಗೆ ಮಾಡುವುದನ್ನು ನಿರ್ಬಂಧಿಸುವುದಕ್ಕಾಗಿ ಅರ್ಜಿಯನ್ನು ಸಲ್ಲಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ನಂತರ, ನ್ಯಾಯಾಲಯವು, ಅದು ಯೋಗ್ಯವೆಂದು ಭಾವಿಸುವಂಥ ಆದೇಶವನ್ನು ಮಾಡಬಹುದು.

(3) (2)ನೇ ಉಪಪ್ರಕರಣದ ಮೇರೆಗೆ, ನ್ಯಾಯಾಲಯವು, ಯಾವುದೇ ತೊರೆ ಅಥವಾ ಬಾವಿಯಲ್ಲಿನ ನೀರನ್ನು ಯಾವನೇ ವ್ಯಕ್ತಿಯು ಮಲಿನಗೊಳಿಸುವುದನ್ನು ನಿರ್ಬಂಧಿಸುವ ಆದೇಶವನ್ನು ಮಾಡುವಲ್ಲಿ, ಆ ಆದೇಶದಲ್ಲಿ, ಅದು,—

(i) ತೊರೆ ಅಥವಾ ಬಾವಿಯಲ್ಲಿನ ನೀರಿನ ಮಾಲಿನ್ಯವನ್ನುಂಟು ಮಾಡುವ ಸಂಭವವಿರುವ ಅಥವಾ ಉಂಟು ಮಾಡಿರುವ ವ್ಯಕ್ತಿಗೆ ಮಾಲಿನ್ಯವನ್ನುಂಟುಮಾಡುವ ಸಂಭವವಿರುವಂಥ ಕ್ರಮವನ್ನು ತೆಗೆದುಕೊಳ್ಳದಂತೆ ಅಥವಾ ಸಂದರ್ಭಾನುಸಾರ, ಅಂಥ ವಸ್ತುವನ್ನು ಅಂಥ ತೊರೆ ಅಥವಾ ಬಾವಿಯಿಂದ ತೆಗೆದುಹಾಕಲು ನಿರ್ದೇಶಿಸಬಹುದು, ಮತ್ತು

(ii) (i)ನೇ ಖಂಡದ ಮೇರೆಗಿನ ನಿರ್ದೇಶನವನ್ನು (ಅಂಥ ತೊರೆ ಅಥವಾ ಬಾವಿಯಿಂದ ಯಾವುದೇ ವಸ್ತುವನ್ನು ತೆಗೆದುಹಾಕುವುದಕ್ಕಾಗಿನ ನಿರ್ದೇಶನವಾಗಿರುವ) ಅಂಥ ನಿರ್ದೇಶನವನ್ನು ಯಾವ ವ್ಯಕ್ತಿಗೆ ಕೊಡಲಾಗಿದೆಯೋ, ಆ ವ್ಯಕ್ತಿಯು ಪಾಲಿಸದಿದ್ದಲ್ಲಿ, ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಆ ವಸ್ತುವನ್ನು ತೆಗೆದು ಹಾಕಲು ಮತ್ತು ವಿಲೆಮಾಡುವ ಕ್ರಮ ಕೈಕೊಳ್ಳಲು ಮಂಡಲಿಯನ್ನು ಅಧಿಕೃತಗೊಳಿಸಬಹುದು.

(4) (3)ನೇ ಉಪಪ್ರಕರಣದ (ii)ನೇ ಖಂಡದ ಮೇರೆಗಿನ ಅಧಿಕೃತಗೊಳಿಸುವಿಕೆಯನ್ನು ಅನುಸರಿಸಿ ಯಾವುದೇ ವಸ್ತುವನ್ನು ತೆಗೆದುಹಾಕುವಲ್ಲಿ ಅಥವಾ ಅಂಥ ಯಾವುದೇ ವಸ್ತುವನ್ನು ವಿಲೆ ಮಾಡುವಲ್ಲಿ, ಮಂಡಲಿಯು ವಹಿಸಿದ ಎಲ್ಲ ವೆಚ್ಚಗಳನ್ನು, ಅಂಥ ವಿಲೇವಾರಿಯಿಂದ ಮಂಡಲಿಯು ಪಡೆದ ಯಾವುದೇ ಹಣದಿಂದ ಭರಿಸಬಹುದು ಮತ್ತು ಬಾಕಿ ಯಿರುವ ಯಾವುದೇ ಶಿಲ್ಕು ಭೂ ಕಂದಾಯ ಅಥವಾ ಸರ್ಕಾರಿ ತಗಾದೆಯ ಬಾಕಿಗಳಂತೆ ಸಂಬಂಧಪಟ್ಟ ವ್ಯಕ್ತಿಯಿಂದ ವಸೂಲೀ ಯೋಗ್ಯವಾಗತಕ್ಕದ್ದು.

## ಅಧ್ಯಾಯ—VI

### ನಿಧಿಗಳು, ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ

**34. ಕೇಂದ್ರ ಸರ್ಕಾರದಿಂದ ಮಂತಿಗೆಗಳು**:—ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಯುಕ್ತ ವಿನಿಯೋಗದ ತರುವಾಯ, ಪ್ರತಿ ಹಣಕಾಸು ವರ್ಷದಲ್ಲಿ ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಲಿಯನ್ನು ಶಕ್ತಗೊಳಿಸಲು, ಅದು ಅವಶ್ಯವೆಂದು ಯೋಚಿಸಬಹುದಾದಂಥ ಮಂತಿಗೆಗಳನ್ನು ಕೇಂದ್ರ ಮಂಡಲಿಗೆ ಕೊಡಬಹುದು.

**35. ರಾಜ್ಯ ಸರ್ಕಾರದಿಂದ ಮಂತಿಗೆಗಳು**:—ರಾಜ್ಯ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ರಾಜ್ಯ ವಿಧಾನ ಮಂಡಲವು ಮಾಡಿದ ಯುಕ್ತ ವಿನಿಯೋಗದ ತರುವಾಯ, ಪ್ರತಿ ಹಣಕಾಸು ವರ್ಷದಲ್ಲಿ, ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ನಿರ್ವಹಿಸಲು ಮಂಡಲಿಯನ್ನು ಶಕ್ತಗೊಳಿಸಲು, ಅದು ಅವಶ್ಯವೆಂದು ಯೋಚಿಸಬಹುದಾದಂಥ ಮಂತಿಗೆಗಳನ್ನು ರಾಜ್ಯ ಮಂಡಲಿಗೆ ಕೊಡಬಹುದು.

**36. ಕೇಂದ್ರ ಮಂಡಲಿಯ ನಿಧಿ**:—(1) ಕೇಂದ್ರ ಮಂಡಲಿಯು, ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದು ಮತ್ತು ಕೇಂದ್ರ ಸರ್ಕಾರವು, ಕಾಲಕಾಲಕ್ಕೆ ಅದಕ್ಕೆ ಸಂದಾಯ ಮಾಡಬಹುದಾದಂಥ ಎಲ್ಲ ಮೊತ್ತಗಳನ್ನು ಮತ್ತು ಆ ಮಂಡಲಿಯ ಇತರ ಎಲ್ಲ ಸ್ವೀಕೃತಿಗಳನ್ನು (ದಾನಗಳು, ಅನುದಾನಗಳು, ದೇಣಿಗೆಗಳು, ಉಪಕಾರ ಧನಗಳು, ಫೀಜು—ಇವುಗಳ ರೂಪದಲ್ಲಿ ಅಥವಾ ಅನ್ಯಥಾ ಬರುವ) ಮಂಡಲಿಯ ನಿಧಿಗೆ ಜಮೆ ಮಾಡತಕ್ಕದು ಮತ್ತು ಮಂಡಲಿಯ ಎಲ್ಲ ಸಂದಾಯಗಳನ್ನು ಅದರಿಂದ ಮಾಡತಕ್ಕದು.

(2) ಕೇಂದ್ರ ಮಂಡಲಿಯು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ವಾಯು ಮಾಲಿನ್ಯದ ನಿವಾರಣೆ, ನಿಯಂತ್ರಣ ಅಥವಾ ಉಪಶಮನಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು, ಕೇಂದ್ರ ಮಂಡಲಿಯು, ಅಂಥ ಕಾನೂನಿನ ಮೇರೆಗಿನ ಯಾವುದೇ ಪ್ರಕಾರ್ಯವನ್ನು ನೆರವೇರಿಸಲು ಉಪಬಂಧಿಸಿರುವಲ್ಲಿ ಮತ್ತು ಅಂಥ ಕಾನೂನಿನ ಮೇರೆಗಿನ ಅದರ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿಯೂ

ಅದು ಯೋಗ್ಯವೆಂದು ಯೋಚಿಸುವಂಥ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು ಮಂಡಲಿಯು ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**37. ರಾಜ್ಯ ಮಂಡಲಿಯ ನಿಧಿ:**—(1) ರಾಜ್ಯ ಮಂಡಲಿಯು, ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ಸಂದಾಯ ಮಾಡಬಹುದಾದಂಥ ಎಲ್ಲ ಮೊತ್ತಗಳನ್ನು ಮತ್ತು ಆ ಮಂಡಲಿಯ ಎಲ್ಲ ಇತರ ಸ್ವೀಕೃತಿಗಳನ್ನು (ದಾನಗಳು, ಅನುದಾನಗಳು, ದೇಣಿಗೆಗಳು, ಉಪಕಾರ ಧನಗಳು, ಫೀಜು ಇವುಗಳ ರೂಪದಲ್ಲಿ ಬರಲಿ ಅಥವಾ ಅನ್ಯಥಾ) ಮಂಡಲಿಯ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಮಂಡಲಿಯ ಎಲ್ಲ ಸಂದಾಯಗಳನ್ನು ಅದರಿಂದ ಮಾಡತಕ್ಕದ್ದು.

(2) ರಾಜ್ಯ ಮಂಡಲಿಯು, ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಅದು ಯೋಗ್ಯವೆಂದು ಯೋಚಿಸುವಂಥ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು, ಮಂಡಲಿಯ ನಿಧಿಯಿಂದ ಸಂದಾಯ ಮಾಡಬೇಕಾದ ವೆಚ್ಚವೆಂದು ಪರಿಗಣಿಸತಕ್ಕದ್ದು.

**38. ಬಜೆಟ್:**—ಕೇಂದ್ರ ಮಂಡಲಿ, ಅಥವಾ ಸಂದರ್ಭಾನುಸಾರ, ರಾಜ್ಯಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಮುಂಬರುವ ಆ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಅಂದಾಜು ಸ್ವೀಕೃತಿ ಮತ್ತು ವೆಚ್ಚವನ್ನು ತೋರಿಸುವ ಬಜೆಟನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

**39. ವಾರ್ಷಿಕ ವರದಿ:**—(1) ಕೇಂದ್ರ ಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಹಿಂದಿನ ಹಣಕಾಸು ವರ್ಷದಲ್ಲಿ ಅದರ ಚಟುವಟಿಕೆಗಳ ನಿಜವಾದ ಮತ್ತು ಪೂರ್ಣವಾದ ವರದಿಯನ್ನು ತೋರಿಸುವ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು, ಅಂಥ ಪ್ರತಿಯೊಂದು ವರದಿಯನ್ನು, ಅದನ್ನು ಸ್ವೀಕರಿಸಿದ ದಿನಾಂಕದಿಂದ ಒಂಬತ್ತು ತಿಂಗಳೊಳಗೆ ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸುವಂತೆ ಮಾಡತಕ್ಕದ್ದು.

(2) ರಾಜ್ಯ ಮಂಡಲಿಯು, ಪ್ರತಿ ಹಣಕಾಸು ವರ್ಷದಲ್ಲಿ, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ಕಾಲದಲ್ಲಿ, ಹಿಂದಿನ ಹಣಕಾಸು ವರ್ಷದಲ್ಲಿನ ಅದರ ಚಟುವಟಿಕೆಗಳ ನಿಜವಾದ ಮತ್ತು ಪೂರ್ಣವಾದ ವರದಿಯನ್ನು ತೋರಿಸುವ ವಾರ್ಷಿಕ ವರದಿಯನ್ನು, ತಯಾರಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು, ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು, ಅಂಥ ಪ್ರತಿಯೊಂದು ವರದಿಯನ್ನು ಅದನ್ನು ಸ್ವೀಕರಿಸಿದ ದಿನಾಂಕದಿಂದ ಆರು ತಿಂಗಳುಗಳೊಳಗೆ ರಾಜ್ಯ ವಿಧಾನ ಮಂಡಲದಲ್ಲಿ ಮಂಡಿಸುವಂತೆ ಮಾಡತಕ್ಕದ್ದು.

**40. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ:**—(1) ಪ್ರತಿಯೊಂದು ಮಂಡಲಿಯು, ಸರಿಯಾದ ಲೆಕ್ಕ ಪತ್ರಗಳು ಮತ್ತು ಇತರ ಸುಸಂಗತ ದಾಖಲೆಗಳನ್ನು ಇಡತಕ್ಕದ್ದು ಮತ್ತು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರವನ್ನು ತಯಾರಿಸತಕ್ಕದ್ದು.

(2) ಮಂಡಲಿಯ ಲೆಕ್ಕಪತ್ರಗಳನ್ನು, ಕಂಪನಿಗಳ ಅಧಿನಿಯಮ, 1956ರ (1956ರ 1) 226ನೇ ಪ್ರಕರಣದ ಮೇರೆಗೆ ಕಂಪನಿಗಳ ಲೆಕ್ಕ ಪರಿಶೋಧಕನಾಗಿ ಕಾರ್ಯ ನಿರ್ವಹಿಸಲು ಕ್ರಮಬದ್ಧವಾಗಿ ಅರ್ಹನಾಗಿರುವ ಲೆಕ್ಕಪರಿಶೋಧಕನು ಲೆಕ್ಕ ಪರಿಶೋಧನೆ ಮಾಡತಕ್ಕದ್ದು.

(3) ಸದರಿ ಲೆಕ್ಕಪರಿಶೋಧಕನನ್ನು, ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ, ರಾಜ್ಯ ಸರ್ಕಾರವು ಭಾರತದ ಕಂಟ್ರೋಲರ್ ಮತ್ತು ಆಡಿಟರ್ ಜನರಲ್ಲನ ಸಲಹೆಯ ಮೇರೆಗೆ ನೇಮಕ ಮಾಡತಕ್ಕದ್ದು.

(4) ಈ ಅಧಿನಿಯಮದ ಮೇರೆಗೆ ಮಂಡಲಿಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡಲು ನೇಮಕಗೊಂಡಿರುವ ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಅದರ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ತಗಾದೆ ಮಾಡಲು ಮತ್ತು ಮಂಡಲಿಯ ಯಾವುದೇ ಕಚೇರಿಯನ್ನು ಪರಿಶೀಲಿಸಲು ಹಕ್ಕನ್ನು ಹೊಂದಿರತಕ್ಕದ್ದು.

(5) ಅಂಥ ಪ್ರತಿಯೊಬ್ಬ ಲೆಕ್ಕಪರಿಶೋಧಕನು, ಲೆಕ್ಕಪತ್ರಗಳ ಪರಿಶೋಧಿತ ಪ್ರತಿಯ ಜತೆಯಲ್ಲಿ ಅವನ ವರದಿಯ ಪ್ರತಿಯನ್ನು ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(6) ಕೇಂದ್ರ ಸರ್ಕಾರವು, (5)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪರಿಶೋಧನೆ ವರದಿಯನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೆ ಅವನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

(7) ರಾಜ್ಯ ಸರ್ಕಾರವು, (5)ನೇ ಉಪ-ಪ್ರಕರಣದ ಮೇರೆಗೆ ಲೆಕ್ಕಪರಿಶೋಧನೆಯ ವರದಿಯನ್ನು ಸ್ವೀಕರಿಸಿದ ತರುವಾಯ, ಆದಷ್ಟು ಬೇಗನೆ ಅದನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ—VII

### ದಂಡಗಳು ಮತ್ತು ಪ್ರಕ್ರಿಯೆ

**41.** 20ನೇ ಪ್ರಕರಣದ (2)ನೇ ಉಪ-ಪ್ರಕರಣ ಅಥವಾ (3)ನೇ ಉಪ-ಪ್ರಕರಣದ ಮೇರೆಗಿನ ನಿರ್ದೇಶನಗಳನ್ನು ಅಥವಾ 32ನೇ ಪ್ರಕರಣದ (1)ನೇ ಉಪಪ್ರಕರಣದ (ಗ) ಖಂಡದ ಮೇರೆಗೆ ಹೊರಡಿಸಿರುವ ಆದೇಶಗಳನ್ನು ಪಾಲಿಸಲು ತಪ್ಪುವುದು:-(1) 20ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಥವಾ 3ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ನಿರ್ದೇಶನವನ್ನು ಆ ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಪಾಲಿಸಲು ತಪ್ಪುವ ಅಥವಾ 32ನೇ ಪ್ರಕರಣದ (1)ನೇ ಉಪ-ಪ್ರಕರಣದ (ಗ) ಖಂಡದ ಮೇರೆಗೆ ಹೊರಡಿಸಿರುವ ಯಾವುದೇ ಆದೇಶಗಳನ್ನು ಪಾಲಿಸಲು ತಪ್ಪುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಆ ತಪ್ಪುವಿಕೆಯು ಮುಂದುವರೆದ ಸಂದರ್ಭದಲ್ಲಿ, ಅಂಥ ಮೊದಲನೇ ತಪ್ಪುವಿಕೆಗಾಗಿ, ಅಪರಾಧ ನಿರ್ಣಯವಾದ ತರುವಾಯ ಅಂಥ ತಪ್ಪುವಿಕೆಯು ಮುಂದುವರಿಯುವಂಥ ಅವಧಿಯಲ್ಲಿ ಪ್ರತಿ ದಿವಸಕ್ಕೆ ಒಂದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

(2) 33ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ನ್ಯಾಯಾಲಯವು ಹೊರಡಿಸಿರುವ ಯಾವುದೇ ನಿರ್ದೇಶನವನ್ನು ಪಾಲಿಸಲು ತಪ್ಪುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಮೇಲೆ, ಮೂರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ಮತ್ತು ಆ ತಪ್ಪುವಿಕೆಯು ಮುಂದುವರೆದ ಸಂದರ್ಭದಲ್ಲಿ, ಅಂಥ ಮೊದಲನೇ ತಪ್ಪುವಿಕೆಗಾಗಿ ಅಪರಾಧ ನಿರ್ಣಯವಾದ ತರುವಾಯ ಅಂಥ ತಪ್ಪುವಿಕೆಯು ಮುಂದುವರಿಯುವಂಥ ಅವಧಿಯಲ್ಲಿ ಪ್ರತಿ ದಿವಸಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಹೆಚ್ಚಿನ ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

**42. ಕೆಲವು ಕಾರ್ಯಗಳಿಗಾಗಿ ದಂಡ:**— (1) (ಕ) ಮಂಡಲಿಯ ಅಧಿಕಾರದ್ವಾರಾ ಮೂಲಕ ಅಥವಾ ಮೇರೆಗೆ, ನೆಲದಲ್ಲಿ ನೆಲೆಗೊಳಿಸಿದ ಯಾವುದೇ ಸ್ತಂಭ, ಕಂಬ ಅಥವಾ ಗೂಟವನ್ನು ಅಥವಾ ಹಾಕಿದ, ಕೆತ್ತಿದ ಅಥವಾ ಇಟ್ಟ ಯಾವುದೇ ನೋಟೀಸು ಅಥವಾ ಇತರ ವಸ್ತುವನ್ನು ಅಥವಾ ನಾಶಪಡಿಸುವ, ಕೆಡವಿ ಹಾಕುವ, ತೆಗೆದು ಹಾಕುವ, ಕ್ಷತಿಗೊಳಿಸುವ ಅಥವಾ ವಿರೂಪಗೊಳಿಸುವ, ಅಥವಾ

(ಖ) ಮಂಡಲಿಯ ಆದೇಶಗಳ ಅಥವಾ ನಿರ್ದೇಶನಗಳ ಮೇರೆಗೆ ಕೆಲಸ ಮಾಡುವ ಯಾವನೇ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ಅವನ ಅಧಿಕಾರಗಳನ್ನು ಚಲಾಯಿಸುವುದಕ್ಕೆ ಮತ್ತು ಕರ್ತವ್ಯಗಳನ್ನು ನೆರವೇರಿಸುವುದಕ್ಕೆ ಅಡ್ಡಿಯನ್ನುಂಟು ಮಾಡುವ, ಅಥವಾ

(ಗ) ಮಂಡಲಿಗೆ ಸೇರಿದ ಯಾವುದೇ ಕಾಮಗಾರಿಗಳನ್ನು ಅಥವಾ ಸ್ವತ್ತನ್ನು ನಷ್ಟಗೊಳಿಸುವ, ಅಥವಾ

(ಘ) ಈ ಅಧಿನಿಯಮದ ಉದ್ದೇಶಕ್ಕಾಗಿ ಮಂಡಲಿಯ ಯಾವನೇ ಅಧಿಕಾರಿ ಅಥವಾ ಇತರ ನಿಯೋಜಿತನಿಗೆ ಅಗತ್ಯವಿರುವ ಯಾವುದೇ ಮಾಹಿತಿಯನ್ನು ಅವನಿಗೆ ಒದಗಿಸಲು ತಪ್ಪುವ, ಅಥವಾ

(ಙ) 31ನೇ ಪ್ರಕರಣದ ಮೇರೆಗೆ, ಯಾವುದೇ ಆಕಸ್ಮಿಕ ಅಥವಾ ಇತರ ಮುಂಗಾಣದ ಕೃತ್ಯ ಅಥವಾ ಘಟನೆಯು ಸಂಭವಿಸಿರುವುದನ್ನು ಮಂಡಲಿಗೆ ಮತ್ತು ಆ ಪ್ರಕರಣವು ಅಗತ್ಯಪಡಿಸಿದ ಇತರ ಪ್ರಾಧಿಕಾರಗಳಿಗೆ ಅಥವಾ ಏಜೆನ್ಸಿಗಳಿಗೆ ತಿಳಿಸಲು ತಪ್ಪುವ, ಅಥವಾ

(ಚ) ತಾನು ಈ ಅಧಿನಿಯಮದ ಮೇರೆಗೆ ಕೊಡಬೇಕಾದ ಯಾವುದೇ ಮಾಹಿತಿಯನ್ನು ಕೊಡುವಲ್ಲಿ, ತಿಳಿದೂ ತಿಳಿದೂ ಅಥವಾ ಬುದ್ಧಿ ಪೂರ್ವಕವಾಗಿ, ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವ ಹೇಳಿಕೆಯನ್ನು ಕೊಡುವ, ಅಥವಾ

(ಛ) 25ನೇ ಪ್ರಕರಣದ ಅಥವಾ 26ನೇ ಪ್ರಕರಣದ ಮೇರೆಗೆ ಯಾವುದೇ ಸಮ್ಮತಿಯನ್ನು ಪಡೆಯುವ ಉದ್ದೇಶಕ್ಕಾಗಿ ತಿಳಿದೂ ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ, ಯಾವುದೇ ಮುಖ್ಯ ವಿವರದಲ್ಲಿ ಸುಳ್ಳಾಗಿರುವ ಹೇಳಿಕೆಯನ್ನು ಕೊಡುವ

—ಯಾರೇ ಆಗಲಿ ಮೂರು ತಿಂಗಳುಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

(2) 25ನೇ ಪ್ರಕರಣದ ಅಥವಾ 26ನೇ ಪ್ರಕರಣದ ಉಪಬಂಧಗಳ ಅನುಸರಣೆಯಲ್ಲಿ ಸಮ್ಮತಿಯನ್ನು ಕೊಡುವುದಕ್ಕಾಗಿ, ಮಾಪಕ ಅಥವಾ ಗೇಜು ಅಥವಾ ಇತರ ಅಳತೆ ಅಥವಾ ಇತರ ಮೇಲ್ವಿಚಾರಣೆ ಸಾಧನದ ಉಪಯೋಗವು ಅಗತ್ಯವಾಗಿರುವಲ್ಲಿ ಮತ್ತು ಅಂಥ ಸಾಧನವನ್ನು ಆ ಉಪಬಂಧಗಳ ಉದ್ದೇಶಗಳಿಗಾಗಿ ಉಪಯೋಗಿಸುವಲ್ಲಿ, ಆ ಸಾಧನವು ಸರಿಯಾಗಿ ಮೇಲ್ವಿಚಾರಿಸುವುದನ್ನು ಅಥವಾ ಅಳತೆ ಮಾಡುವುದನ್ನು ಪ್ರತಿಬಂಧಿಸುವ ಹಾಗೆ ಅದನ್ನು ತಿಳಿದೂ ತಿಳಿದೂ ಅಥವಾ ಬುದ್ಧಿಪೂರ್ವಕವಾಗಿ ಬದಲಾಯಿಸುವ ಅಥವಾ ಅದರಲ್ಲಿ ಹಸ್ತಕ್ಷೇಪ ಮಾಡುವ ಯಾವನೇ ವ್ಯಕ್ತಿಯು ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದು.

**43. 24ನೇ ಪ್ರಕರಣದ ಉಪಬಂಧಗಳ ಉಲ್ಲಂಘನೆಗಾಗಿ ದಂಡ** :— 24ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಆರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದು.

**44. 25ನೇ ಪ್ರಕರಣ ಅಥವಾ 26ನೇ ಪ್ರಕರಣದ ಉಲ್ಲಂಘನೆಗಾಗಿ ದಂಡ :—** 25ನೇ ಪ್ರಕರಣ ಅಥವಾ 26ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಆರು ತಿಂಗಳುಗಳಿಗಿಂತ ಕಡಿಮೆಯಿಲ್ಲದ ಆದರೆ ಆರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**45. ಹಿಂದಿನ ಅಪರಾಧ ನಿರ್ಣಯದ ತರುವಾಯ ಹೆಚ್ಚಿಸಲಾದ ದಂಡ :—** 24ನೇ ಪ್ರಕರಣದ, 25ನೇ ಪ್ರಕರಣ ಅಥವಾ 26ನೇ ಪ್ರಕರಣದ ಮೇರೆಗಿನ ಯಾವುದೇ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾದ ಯಾವನೇ ವ್ಯಕ್ತಿಯು, ಪುನಃ ಅದೇ ಉಪಬಂಧದ ಉಲ್ಲಂಘನೆಯನ್ನೊಳಗೊಂಡಿರುವ ಅಪರಾಧದ ತಪ್ಪಿತಸ್ಥನೆಂದು ಕಂಡು ಬಂದರೆ, ಅವನು, ಎರಡನೆಯ ಮತ್ತು ತರುವಾಯದ ಪ್ರತಿಯೊಂದು ಅಪರಾಧ ನಿರ್ಣಯದಕ್ಕಾಗಿ, ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಆದರೆ ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು:

ಪರಂತು, ಈ ಪ್ರಕರಣದ ಉದ್ದೇಶಕ್ಕಾಗಿ, ದಂಡಿಸಲಾಗುತ್ತಿರುವಂಥ ಅಪರಾಧವನ್ನು ಮಾಡುವುದಕ್ಕಿಂತ ಎರಡು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಮುಂಚೆ ಮಾಡಲಾಗಿರುವ ಯಾವುದೇ ಅಪರಾಧ ನಿರ್ಣಯವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**46. ಅಪರಾಧಿಗಳ ಹೆಸರುಗಳ ಪ್ರಕಟಣೆ:—** ಈ ಅಧಿನಿಯಮದ ಮೇರೆಗಿನ ಅಪರಾಧದ ಬಗ್ಗೆ ಅಪರಾಧ ನಿರ್ಣೀತನಾದ ಯಾವನೇ ವ್ಯಕ್ತಿಯು, ತರುವಾಯ ಅಂಥದೇ ಅಪರಾಧವನ್ನು ಮಾಡಿದರೆ, ಯಾವ ನ್ಯಾಯಾಲಯದಲ್ಲಿ ಎರಡನೆಯ ಅಥವಾ ತರುವಾಯದ ಅಪರಾಧ ನಿರ್ಣಯವನ್ನು ಮಾಡಲಾಗುವುದೋ, ಆ ನ್ಯಾಯಾಲಯವು ಅಪರಾಧಿಯ ಹೆಸರು ಮತ್ತು ವಾಸದ ಸ್ಥಳ, ಅಪರಾಧ ಮತ್ತು ವಿಧಿಸಿದ ಜುಲ್ಮಾನೆಯನ್ನು ಅಪರಾಧಿಯ ಖರ್ಚಿನಲ್ಲಿ ನ್ಯಾಯಾಲಯವು ನಿರ್ದೇಶಿಸುವಂಥ ವೃತ್ತ ಪತ್ರಿಕೆಗಳಲ್ಲಿ ಅಥವಾ ಅಂಥ ಬೇರೆ ರೀತಿಯಲ್ಲಿ ಪ್ರಕಟಿಸುವುದು ಕಾನೂನು ಬದ್ಧವಾಗಿರತಕ್ಕದ್ದು ಮತ್ತು ಇಂಥ ಪ್ರಕಟಣೆಯ ವೆಚ್ಚಗಳನ್ನು ಅಪರಾಧ ನಿರ್ಣಯಕ್ಕೆ ಸಂಬಂಧಪಟ್ಟ ಖರ್ಚಿನ ಭಾಗವೆಂದು ಭಾವಿಸತಕ್ಕದ್ದು ಮತ್ತು ಅದು ಜುಲ್ಮಾನೆಯ ರೀತಿಯಲ್ಲಿಯೇ ವಸೂಲೀಯವಾಗತಕ್ಕದ್ದು.

**47. ಕಂಪನಿಗಳಿಂದ ಅಪರಾಧಗಳು:—**(1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವರು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಯಾವನೇ ಅಂಥ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವನೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

ವಿವರಣೆ:— ಈ ಪ್ರಕರಣದ ಉದ್ದೇಶಗಳಿಗಾಗಿ—

(ಕ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಖ) ಫರ್ಮಿಗೆ ಸಂಬಂಧಿಸಿ "ನಿರ್ದೇಶಕ" ಎಂದರೆ, ಫರ್ಮಿನಲ್ಲಿನ ಪಾಲುದಾರ.

**48. ಸರ್ಕಾರಿ ಇಲಾಖೆಗಳಿಂದ ಅಪರಾಧಗಳು;—** ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಸರ್ಕಾರದ ಯಾವುದೇ ಇಲಾಖೆಯು ಮಾಡಿರುವಲ್ಲಿ, ಇಲಾಖಾ ಮುಖ್ಯಾಧಿಕಾರಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥ ಎಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿ ಅಡಕಗೊಂಡಿರುವುದು ಯಾವುದೂ, ಅಂಥ ಇಲಾಖಾ ಮುಖ್ಯಾಧಿಕಾರಿಯು ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

**49. ಅಪರಾಧಗಳ ಸಂಜ್ಞಾನ: —**(1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ಸಂಜ್ಞಾನವನ್ನು ರಾಜ್ಯ ಮಂಡಲಿಯು ಮಾಡಿದ ಫಿರ್ಯಾದಿನ ಮೇಲಲ್ಲದೆ ಅಥವಾ ಬರಹದಲ್ಲಿನ ಅದರ ಪೂರ್ವ ಮಂಜೂರಾತಿಯಿಂದಲ್ಲದೇ, ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟ್‌ನ ದರ್ಜೆಗಿಂತ ಕಡಿಮೆ ಇಲ್ಲದ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಅಧಿವಿಚಾರಣೆ ಮಾಡತಕ್ಕದ್ದಲ್ಲ.

(2) ದಂಡ ಪ್ರಕ್ರಿಯಾ ಸಂಹಿತೆ, 1973ರ 29ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಅಪರಾಧಿ ಎಂದು ನಿರ್ಣೀತನಾದ ಯಾವನೇ ವ್ಯಕ್ತಿಗೆ ಎರಡು ವರ್ಷಗಳಿಗೆ ಮೀರಿದ ಅವಧಿಯ ಕಾರಾವಾಸದ ಅಥವಾ ಎರಡು ಸಾವಿರ ರೂಪಾಯಿಗಳಿಗೆ ಮೀರುವ ಜುಲ್ಮಾನೆಯ ಶಿಕ್ಷೆಯನ್ನು ವಿಧಿಸುವುದ

ಪ್ರಥಮ ದರ್ಜೆಯ ಯಾವನೇ ನ್ಯಾಯಿಕ ಮ್ಯಾಜಿಸ್ಟ್ರೇಟನಿಗೆ ಅಥವಾ ಯಾವನೇ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನಿಗೆ ಕಾನೂನಂ ಬದ್ಧವಾಗಿರತಕ್ಕದು.

50. ಮಂಡಳಿಯ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು ಲೋಕ ನೌಕರರಾಗಿರತಕ್ಕದು:—ಮಂಡಲಿಯ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರು, ಈ ಅಧಿನಿಯಮದ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಯಾವುದೇ ಉಪಬಂಧದ ಅನುಸರಣೆಯಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುವುದಾಗಿ ತಾತ್ಪರ್ಯ ವಾಗುವಾಗ, ಅವರನ್ನು ಭಾರತ ದಂಡ ಸಂಹಿತೆಯ 21 ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕ ನೌಕರರೆಂಬುದಾಗಿ ಭಾವಿಸತಕ್ಕದು.

## ಅಧ್ಯಾಯ—VIII

### ಸಂಕೀರ್ಣ

51. ಕೇಂದ್ರ ಜಲ ಪ್ರಯೋಗ ಶಾಲೆ:—(1) ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ಕೇಂದ್ರ ಜಲ ಪ್ರಯೋಗ ಶಾಲೆಯನ್ನು ಸ್ಥಾಪಿಸಬಹುದು ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ಕೇಂದ್ರ ಪ್ರಯೋಗ ಶಾಲೆಗೆ ವಹಿಸಿ ಕೊಟ್ಟ ಪ್ರಕಾರ್ಯಗಳನ್ನು ಕಾರ್ಯಗತ ಗೊಳಿಸಲು, ಯಾವುದೇ ಪ್ರಯೋಗ ಶಾಲೆಯನ್ನು ಅಥವಾ ಸಂಸ್ಥೆಯನ್ನು ಕೇಂದ್ರ ಜಲ ಪ್ರಯೋಗ ಶಾಲೆಯೆಂದು ನಿರ್ದಿಷ್ಟ ಪಡಿಸಬಹುದು.

(2) ಕೇಂದ್ರ ಸರ್ಕಾರವು, ಕೇಂದ್ರ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ—

(ಕ) ಕೇಂದ್ರ ಜಲ ಪ್ರಯೋಗ ಶಾಲೆಯ ಪ್ರಕಾರ್ಯಗಳನ್ನು;

(ಖ) ಜಲದ ಅಥವಾ ಗ್ರಾಮಸಾರದ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳನ್ನು ಸದರಿ ಪ್ರಯೋಗ ಶಾಲೆಗೆ ವಿಶ್ಲೇಷಣೆಗಾಗಿ ಅಥವಾ ಪರೀಕ್ಷೆಗಳಿಗಾಗಿ ಒಪ್ಪಿಸುವುದಕ್ಕಾಗಿನ ಪ್ರಕ್ರಿಯೆ, ಅದರ ಮೇಲಿನ ಪ್ರಯೋಗಾಲಯದ ವರದಿಯ ನಮೂನೆ ಮತ್ತು ಅಂಥ ವರದಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು;

(ಗ) ಆ ಪ್ರಯೋಗ ಶಾಲೆಯು ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಅದಕ್ಕೆ ಸಮರ್ಥವಾಗುವುದಕ್ಕೆ ಅವಶ್ಯ ಅಥವಾ ವಿಹಿತವಾಗಬಹುದಾದಂಥ ಇತರ ವಿಷಯಗಳು

—ಇವುಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

52. ರಾಜ್ಯ ಜಲ ಪ್ರಯೋಗ ಶಾಲೆ:—(1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ,—

(ಕ) ರಾಜ್ಯ ಜಲ ಪ್ರಯೋಗ ಶಾಲೆಯನ್ನು ಸ್ಥಾಪಿಸಬಹುದು ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ರಾಜ್ಯ ಜಲ ಪ್ರಯೋಗ ಶಾಲೆಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ಕಾರ್ಯಗತ ಗೊಳಿಸಲು, ಯಾವುದೇ ಪ್ರಯೋಗ ಶಾಲೆಯನ್ನು ಅಥವಾ ಸಂಸ್ಥೆಯನ್ನು ರಾಜ್ಯ ಜಲ ಪ್ರಯೋಗಶಾಲೆಯೆಂದು ನಿರ್ದಿಷ್ಟಪಡಿಸ ಬಹುದು.

(2) ರಾಜ್ಯ ಸರ್ಕಾರವು ರಾಜ್ಯ ಮಂಡಲಿಯೊಂದಿಗೆ ಸಮಾಲೋಚಿಸಿದ ತರುವಾಯ—

(ಕ) ರಾಜ್ಯ ಜಲ ಪ್ರಯೋಗಶಾಲೆಯ ಪ್ರಕಾರ್ಯಗಳನ್ನು ;

(ಖ) ಜಲದ ಅಥವಾ ಗ್ರಾಮಸಾರದ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳನ್ನು ಸದರಿ ಪ್ರಯೋಗ ಶಾಲೆಗೆ ವಿಶ್ಲೇಷಣೆಗಾಗಿ ಅಥವಾ ಪರೀಕ್ಷೆಗಳಿಗಾಗಿ ಒಪ್ಪಿಸುವುದಕ್ಕಾಗಿ ಪ್ರಕ್ರಿಯೆ, ಅದರ ಮೇಲಿನ ಪ್ರಯೋಗಾಲಯ ವರದಿಯ ನಮೂನೆ ಮತ್ತು ಅಂಥ ವರದಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು ;

(ಗ) ಆ ಪ್ರಯೋಗಶಾಲೆಯು ತನ್ನ ಪ್ರಕಾರ್ಯಗಳನ್ನು ಕಾರ್ಯಗತಗೊಳಿಸಲು ಅದಕ್ಕೆ ಸಮರ್ಥವಾಗುವುದಕ್ಕೆ ಅವಶ್ಯ ಅಥವಾ ವಿಹಿತವಾಗಬಹುದಾದಂಥ ಇತರ ವಿಷಯಗಳು

—ಇವುಗಳನ್ನು ನಿಯಮಿಸಿ ನಿಯಮಗಳನ್ನು ರಚಿಸಬಹುದು.

53. ವಿಶ್ಲೇಷಕರು:—(1)ಕೇಂದ್ರ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಮತ್ತು ನಿಯಮಿಸಲಾದ ಅರ್ಹತೆಗಳನ್ನು ಹೊಂದಿರುವಂಥ ವ್ಯಕ್ತಿಗಳನ್ನು, 51ನೇ ಪ್ರಕರಣದ(1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿದ ನೀರಿನ ಅಥವಾ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳ ವಿಶ್ಲೇಷಣೆಯ ಉದ್ದೇಶಕ್ಕಾಗಿ ಸರ್ಕಾರಿ ವಿಶ್ಲೇಷಕರಾಗಿ ನೇಮಕಮಾಡಬಹುದು.

(2) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಮತ್ತು ನಿಯಮಿಸಲಾದ ಅರ್ಹತೆಗಳನ್ನು ಹೊಂದಿರುವಂಥ ವ್ಯಕ್ತಿಗಳನ್ನು, 52ನೇ ಪ್ರಕರಣದ(1)ನೇ ಉಪ-ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ನಿರ್ದಿಷ್ಟಪಡಿಸಿದ ಯಾವುದೇ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸಿದ

ನೀರಿನ ಅಥವಾ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳ ವಿಶ್ಲೇಷಣೆಯ ಉದ್ದೇಶಕ್ಕಾಗಿ ಸರ್ಕಾರಿ ವಿಶ್ಲೇಷಕರಾಗಿ ನೇಮಕಮಾಡಬಹುದು.

(3) 12ನೇ ಪ್ರಕರಣದ (3)ನೇ ಉಪಪ್ರಕರಣ ಉಪಬಂಧಗಳಿಗೆ ಬಾಧಕವಾಗದಂತೆ, ಕೇಂದ್ರ ಮಂಡಲಿ ಅಥವಾ ಸಂದರ್ಭಾನುಸಾರ ರಾಜ್ಯ ಮಂಡಲಿಯು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಮತ್ತು ಸಂದರ್ಭಾನುಸಾರ, ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ಮತ್ತು ನಿಯಮಿಸಿದ ವಿದ್ಯಾರ್ಹತೆಗಳನ್ನು ಹೊಂದಿರುವಂಥ ವ್ಯಕ್ತಿಗಳನ್ನು, 16ನೇ ಪ್ರಕರಣದ ಮೇರೆಗೆ ಅಥವಾ ಸಂದರ್ಭಾನುಸಾರ, 17ನೇ ಪ್ರಕರಣದ ಮೇರೆಗೆ ಸ್ಥಾಪಿಸಿದ ಅಥವಾ ಮಾನ್ಯತೆ ಪಡೆದ ಯಾವುದೇ ಪ್ರಯೋಗಶಾಲೆಗೆ ವಿಶ್ಲೇಷಣೆಗಾಗಿ ಕಳುಹಿಸುವ ನೀರಿನ ಅಥವಾ ಗ್ರಾಮಸಾರ ಅಥವಾ ಕಾರ್ಖಾನೆ ಕಶ್ಮಲ ಪ್ರವಾಹದ ಮಾದರಿಗಳ ವಿಶ್ಲೇಷಣೆಯ ಉದ್ದೇಶಕ್ಕಾಗಿ ಮಂಡಲಿಯ ವಿಶ್ಲೇಷಕರಾಗಿ ನೇಮಕ ಮಾಡಬಹುದು.

**54. ವಿಶ್ಲೇಷಕರ ವರದಿಗಳು:**—ಸರ್ಕಾರಿ ವಿಶ್ಲೇಷಕ ಅಥವಾ ಸಂದರ್ಭಾನುಸಾರ, ಮಂಡಲಿ ವಿಶ್ಲೇಷಕನು ರುಜು ಮಾಡಿದ ವರದಿಯೆಂದು ತಾತ್ಪರ್ಯವಾಗುವ ಯಾವುದೇ ದಸ್ತಾವೇಜನ್ನು, ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಯಲ್ಲಿ ಅದರಲ್ಲಿ ಹೇಳಿರುವ ಸಂಗತಿಗಳ ಸಾಕ್ಷ್ಯವಾಗಿ ಉಪಯೋಗಿಸಬಹುದು.

**55. ಸ್ಥಳೀಯ ಪ್ರಾಧಿಕಾರಗಳು ಸಹಾಯ ಕೊಡತಕ್ಕದು:**—ಎಲ್ಲ ಸ್ಥಳೀಯ ಪ್ರಾಧಿಕಾರಗಳು, ಮಂಡಲಿಗೆ ಅದರ ಪ್ರಕಾರ್ಯಗಳ ನಿರ್ವಹಣೆಗಾಗಿ ಮಂಡಲಿಗೆ ಅಗತ್ಯವಾಗಬಹುದಾದಂಥ ಸಹಾಯ ಮತ್ತು ನೆರವನ್ನು ಕೊಡತಕ್ಕದು ಮತ್ತು ಅಂಥ ಮಾಹಿತಿಯನ್ನು ಒದಗಿಸತಕ್ಕದು ಮತ್ತು ಮಂಡಲಿಯು ಅದರ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅವಶ್ಯವಾಗಿರಬಹುದಾದಂಥ ದಾಖಲೆಗಳು, ನಕ್ಷೆಗಳು, ನಕಾಶೆಗಳು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲನೆ ಮತ್ತು ಪರೀಕ್ಷೆಗಾಗಿ ಮಂಡಲಿಗೆ ಲಭ್ಯವಾಗುವಂತೆ ಮಾಡತಕ್ಕದು.

**56. ರಾಜ್ಯ ಮಂಡಲಿಗಾಗಿ ಭೂಮಿಯ ಕಡ್ಡಾಯ ಅರ್ಜನೆ:**—ರಾಜ್ಯ ಮಂಡಲಿಯು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ದಕ್ಷತೆಯಿಂದ ನೆರವೇರಿಸುವುದಕ್ಕಾಗಿ ಅದಕ್ಕೆ ಅಗತ್ಯವಿರುವ ಯಾವುದೇ ಭೂಮಿಯನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುವ ಭೂಮಿ ಎಂಬುದಾಗಿ ಭಾವಿಸತಕ್ಕದು ಮತ್ತು ಅಂಥ ಭೂಮಿಯನ್ನು ರಾಜ್ಯ ಮಂಡಲಿಗಾಗಿ ಭೂ ಅರ್ಜನೆ ಅಧಿನಿಯಮ, 1894 (1894ರ 1) ಉಪಬಂಧಗಳ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಸಂವಾದಿ ಕಾನೂನಿನ ಮೇರೆಗೆ ಅರ್ಜಿಸತಕ್ಕದು.

**57. ವಿವರ ಪಟ್ಟಿಕೆಗಳು ಮತ್ತು ವರದಿಗಳು:**—ಕೇಂದ್ರ ಮಂಡಲಿಯು, ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಮಂಡಲಿಯು ರಾಜ್ಯ ಸರ್ಕಾರಕ್ಕೆ ಮತ್ತು ಕೇಂದ್ರ ಮಂಡಲಿಗೆ, ಆ ಸರ್ಕಾರ ಅಥವಾ ಸಂದರ್ಭಾನುಸಾರ ಕೇಂದ್ರ ಮಂಡಲಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂತೆ ಅದರ ನಿಧಿ ಅಥವಾ ಚಟುವಟಿಕೆಗಳಿಗೆ ಸಂಬಂಧಪಟ್ಟಂಥ ವರದಿಗಳು, ವಿವರ ಪಟ್ಟಿಕೆಗಳು, ಅಂಕಿ ಅಂಶಗಳು, ಲೆಕ್ಕಪತ್ರಗಳು ಮತ್ತು ಇತರ ಮಾಹಿತಿಯನ್ನು ಒದಗಿಸತಕ್ಕದು.

**58. ಅಧಿಕಾರ ವ್ಯಾಪ್ತಿಯ ಪ್ರತಿಷೇಧ:**—ಯಾವುದೇ ಸಿವಿಲ್ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ರಚಿಸಿದ ಅಪೀಲು ಪ್ರಾಧಿಕಾರವನ್ನು ಯಾವ ವಿಷಯಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ನಿರ್ಧರಿಸಲು ಶಕ್ತಗೊಳಿಸಲಾಗಿದೆಯೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ದಾವೆ ಅಥವಾ ವ್ಯವಹರಣೆಯನ್ನು ಪುರಸ್ಕರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದಲ್ಲ ಮತ್ತು ಯಾವುದೇ ನ್ಯಾಯಾಲಯವು ಅಥವಾ ಇತರ ಪ್ರಾಧಿಕಾರವು, ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದಾನ ಮಾಡಿದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ತೆಗೆದುಕೊಂಡಿರುವ ಅಥವಾ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ಬಂಧಕಾಜ್ಞೆಯನ್ನು ಕೊಡತಕ್ಕದಲ್ಲ.

**59. ಸದ್ಭಾವನೆಯಿಂದ ತೆಗೆದುಕೊಂಡ ಕ್ರಮದ ಸಂರಕ್ಷಣೆ:**—ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂಥ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರ ಅಥವಾ ಸರ್ಕಾರದ ಯಾವನೇ ಅಧಿಕಾರಿ ಅಥವಾ ಮಂಡಲಿಯ ಯಾವನೇ ಸದಸ್ಯ ಅಥವಾ ಅಧಿಕಾರಿಯ ವಿರುದ್ಧ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದಲ್ಲ.

**60. ಅಧ್ಯಾರೋಹೀ ಪರಿಣಾಮ:**—ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೇ ಇತರ ಅಧಿನಿಯಮಿತಿಯಲ್ಲಿ, ಅದಕ್ಕೆ ಅಸಂಗತವಾದುದು ಏನೇ ಅಡಕವಾಗಿದ್ದಾಗ್ಯೂ, ಪರಿಣಾಮಕಾರಿಯಾಗಿರತಕ್ಕದ್ದು,

**61. ಕೇಂದ್ರ ಮಂಡಲಿ ಮತ್ತು ಜಂಟಿ ಮಂಡಲಿಗಳನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ:**—(1) ಕೇಂದ್ರ ಸರ್ಕಾರವು ಯಾವುದೇ ಕಾಲದಲ್ಲಿ,—

(ಕ) ಕೇಂದ್ರ ಮಂಡಲಿ ಅಥವಾ ಯಾವುದೇ ಜಂಟಿ ಮಂಡಲಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಸತತವಾಗಿ ತಪ್ಪು ಮಾಡಿದೆ ಎಂದು; ಅಥವಾ

(ಖ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡಲು ಅವಶ್ಯವೆನಿಸುವಂಥ ಸಂದರ್ಭಗಳು ಇರುವವೆಂದು

—ಅಭಿಪ್ರಾಯ ಪಟ್ಟರೆ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ಜಂಟಿ ಮಂಡಲಿಯನ್ನು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ, ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ರದ್ದುಗೊಳಿಸಬಹುದು:

ಪರಂತು, (ಕ) ಖಂಡದಲ್ಲಿ ನಮೂದಿಸಿದ ಕಾರಣಗಳಿಗಾಗಿ, ಈ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮೊದಲು, ಕೇಂದ್ರ ಸರ್ಕಾರವು, ಸಂದರ್ಭಾನುಸಾರ ಕೇಂದ್ರ ಮಂಡಲಿ ಅಥವಾ ಅಂಥ ಜಂಟಿ ಮಂಡಲಿಗೆ, ಏಕೆ ಅದನ್ನು ರದ್ದುಪಡಿಸಬಾರದು ಎಂಬ ಬಗ್ಗೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡತಕ್ಕದು ಮತ್ತು ಸಂದರ್ಭಾನುಸಾರ ಕೇಂದ್ರ ಮಂಡಲಿ ಅಥವಾ ಅಂಥ ಜಂಟಿ ಮಂಡಲಿಯ ವಿವರಣೆ ಮತ್ತು ಆಕ್ಷೇಪಣೆಗಳು, ಯಾವುದಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದು.

(2) ಕೇಂದ್ರ ಮಂಡಲಿ ಅಥವಾ ಯಾವುದೇ ಜಂಟಿ ಮಂಡಲಿಯನ್ನು ರದ್ದುಪಡಿಸುವ, (1)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯನ್ನು ಪ್ರಕಟಿಸಿದ ಮೇಲೆ,—

(ಕ) ಎಲ್ಲ ಸದಸ್ಯರು, ರದ್ದಿಯಾತಿಯ ದಿನಾಂಕದಿಂದ ಅವರ ಅಂಥ ಪದಗಳನ್ನು ಖಾಲಿ ಮಾಡತಕ್ಕದು ;

(ಖ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಕೇಂದ್ರ ಮಂಡಲಿ ಅಥವಾ ಅಂಥ ಜಂಟಿ ಮಂಡಲಿಯು ಚಲಾಯಿಸಬಹುದಾದ, ನೆರವೇರಿಸಬಹುದಾದ ಅಥವಾ ನಿರ್ವಹಿಸಬಹುದಾದಂಥ ಎಲ್ಲ ಅಧಿಕಾರಗಳು, ಪ್ರಕಾರ್ಯಗಳು ಮತ್ತು ಕರ್ತವ್ಯಗಳನ್ನು, (3)ನೇ ಉಪಪ್ರಕರಣದ ಮೇರೆಗೆ, ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ಜಂಟಿ ಮಂಡಲಿಯನ್ನು ಪುನಃ ರಚಿಸುವವರೆಗೆ, ಕೇಂದ್ರ ಸರ್ಕಾರವು ಹಾಗೆ ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದು, ನೆರವೇರಿಸತಕ್ಕದು ಅಥವಾ ನಿರ್ವಹಿಸತಕ್ಕದು;

(ಗ) ಕೇಂದ್ರ ಮಂಡಲಿ ಅಥವಾ ಅಂಥ ಜಂಟಿ ಮಂಡಲಿಯ ಒಡೆತನವನ್ನು ಪಡೆದಿರುವ ಅಥವಾ ನಿಯಂತ್ರಣವನ್ನು ಹೊಂದಿರುವ ಎಲ್ಲ ಸ್ವತ್ತು, (3)ನೇ ಉಪಪ್ರಕರಣದ ಮೇರೆಗೆ ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ಜಂಟಿ ಮಂಡಲಿಯನ್ನು ಪುನಃ ರಚಿಸುವವರೆಗೆ ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕದು.

(3) (1)ನೇ ಉಪ-ಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿರುವ ರದ್ದಿಯಾತಿಯ ಅವಧಿಯು ಮುಕ್ತಾಯವಾದ ಮೇಲೆ, ಕೇಂದ್ರ ಸರ್ಕಾರವು,—

(ಕ) ಅದು ಅವಶ್ಯವೆಂದು ಪರ್ಯಾಲೋಚಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದ ಇನ್ನು ಹೆಚ್ಚಿನ ಅವಧಿಯವರೆಗೆ ರದ್ದಿಯಾತಿಯ ಅವಧಿಯನ್ನು ವಿಸ್ತರಿಸಬಹುದು ; ಅಥವಾ

(ಖ) ಸಂದರ್ಭಾನುಸಾರ, ಕೇಂದ್ರ ಮಂಡಲಿ ಅಥವಾ ಜಂಟಿ ಮಂಡಲಿಯನ್ನು, ಸಂದರ್ಭಾನುಸಾರ ಹೊಸ ನಾಮನಿರ್ದೇಶನ ಅಥವಾ ನೇಮಕಾತಿಯ ಮೂಲಕ ಪುನಃ ರಚಿಸಬಹುದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಕ) ಖಂಡದ ಮೇರೆಗೆ, ಅವನ ಪದವನ್ನು ತೆರವು ಮಾಡಿದ ಯಾವನೇ ವ್ಯಕ್ತಿಯನ್ನು ನಾಮನಿರ್ದೇಶನ ಅಥವಾ ನೇಮಕಾತಿಗಾಗಿ ಅನರ್ಹಗೊಳಿಸಿರುವುದಾಗಿ ಭಾವಿಸತಕ್ಕದಲ್ಲ:

ಪರಂತು, ಕೇಂದ್ರ ಸರ್ಕಾರವು, (1)ನೇ ಉಪ-ಪ್ರಕರಣದ ಮೇರೆಗೆ ಮೂಲತಃ ನಿರ್ದಿಷ್ಟಪಡಿಸಿದ ಅಥವಾ ಈ ಉಪಪ್ರಕರಣದ ಮೇರೆಗೆ ಹಾಗೆ ವಿಸ್ತರಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ, ಈ ಉಪಪ್ರಕರಣದ (ಖ) ಖಂಡದ ಮೇರೆಗೆ ಯಾವುದೇ ಕಾಲದಲ್ಲಿ ಕ್ರಮವನ್ನು ಕೈಗೊಳ್ಳಬಹುದು.

**62.** ರಾಜ್ಯ ಮಂಡಲಿಯನ್ನು ರದ್ದುಪಡಿಸಲು ರಾಜ್ಯ ಸರ್ಕಾರದ ಅಧಿಕಾರ:— (1) ರಾಜ್ಯ ಸರ್ಕಾರವು, ಯಾವುದೇ ಕಾಲದಲ್ಲಿ,—

(ಕ) ರಾಜ್ಯ ಮಂಡಲಿಯು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳ ನೆರವೇರಿಕೆಯಲ್ಲಿ ಸತತವಾಗಿ ತಪ್ಪು ಮಾಡಿದೆ ಎಂದು; ಅಥವಾ

(ಖ) ಸಾರ್ವಜನಿಕ ಹಿತಾಸಕ್ತಿಯಲ್ಲಿ ಹಾಗೆ ಮಾಡುವುದು ಅವಶ್ಯವೆನಿಸುವಂಥ ಸಂದರ್ಭಗಳು ಇರುವವೆಂದು ಅಭಿಪ್ರಾಯ ಪಟ್ಟರೆ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಒಂದು ವರ್ಷಕ್ಕೆ ಮೀರದ ಅವಧಿಯವರೆಗೆ ರಾಜ್ಯ ಮಂಡಲಿಯನ್ನು ರದ್ದುಪಡಿಸಬಹುದು:

ಪರಂತು, (ಕ) ಖಂಡದಲ್ಲಿ ನಮೂದಿಸಿರುವ ಕಾರಣಗಳಿಗಾಗಿ ಈ ಉಪ ಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ರಾಜ್ಯಸರ್ಕಾರವು, ರಾಜ್ಯ ಮಂಡಲಿಗೆ, ಏಕೆ ಅದನ್ನು ರದ್ದುಪಡಿಸಬಾರದು ಎಂಬ ಬಗ್ಗೆ ಕಾರಣ ತೋರಿಸಲು ಯುಕ್ತ ಅವಕಾಶವನ್ನು ಕೊಡತಕ್ಕದು ಮತ್ತು ರಾಜ್ಯ ಮಂಡಲಿಯ ವಿವರಣೆ ಮತ್ತು ಆಕ್ಷೇಪಣೆಗಳು ಯಾವುವಾದರೂ ಇದ್ದರೆ, ಅವುಗಳನ್ನು ಪರ್ಯಾಲೋಚಿಸತಕ್ಕದು.

(2) ರಾಜ್ಯ ಮಂಡಲಿಯನ್ನು ರದ್ದುಪಡಿಸುವ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು, ಪ್ರಕಟಿಸಿದ ಮೇಲೆ 61ನೇ ಪ್ರಕರಣದ (2)ನೇ ಮತ್ತು (3)ನೇ ಉಪಪ್ರಕರಣದ ಉಪಬಂಧಗಳು ಕೇಂದ್ರ ಸರ್ಕಾರವು, ಕೇಂದ್ರ ಮಂಡಲಿ ಅಥವಾ ಜಂಟಿ ಮಂಡಲಿಯನ್ನು ರದ್ದುಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅವು ಅನ್ವಯವಾಗುವ ಹಾಗೆ ರಾಜ್ಯ ಮಂಡಲಿಯನ್ನು ರದ್ದುಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಅನ್ವಯವಾಗತಕ್ಕದು.

**63.** ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:— (1) ಕೇಂದ್ರ ಸರ್ಕಾರವು, ಕೇಂದ್ರ ಮಂಡಲಿಯನ್ನು ರಚಿಸುವ ಕಾಲದಲ್ಲಿ (2)ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ರಚಿಸಬಹುದು:

ಪರಂತು, ಕೇಂದ್ರ ಮಂಡಲಿಯನ್ನು ರಚಿಸಿರುವಾಗ, ಆ ಮಂಡಲಿಯೊಡನೆ ಸಮಾಲೋಚನೆ ನಡೆಸಿದ ಹೊರತು ಯಾವುದೇ ಅಂಥ ನಿಯಮವನ್ನು ರಚಿಸತಕ್ಕದಲ್ಲ, ಬದಲಾಯಿಸತಕ್ಕದಲ್ಲ, ತಿದ್ದುಪಡಿ ಮಾಡತಕ್ಕದಲ್ಲ ಅಥವಾ ನಿರಸನಗೊಳಿಸತಕ್ಕದಲ್ಲ.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:—

(ಕ) 5ನೇ ಪ್ರಕರಣದ (8)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯ ಸದಸ್ಯರ (ಅಧ್ಯಕ್ಷ ಮತ್ತು ಸದಸ್ಯಕಾರ್ಯದರ್ಶಿಯನ್ನು ಹೊರತುಪಡಿಸಿ) ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಖ) ಈ ಅಧಿನಿಯಮದ ಮೇರೆಗೆ ರಚಿಸಿದ ಕೇಂದ್ರ ಮಂಡಲಿ ಅಥವಾ ಅದರ ಯಾವುದೇ ಸಮಿತಿಯ ಸಭೆಗಳನ್ನು ನಡೆಸತಕ್ಕಂಥ ಮಧ್ಯಂತರಗಳು ಮತ್ತು ಕಾಲ ಮತ್ತು ಸ್ಥಳ ಮತ್ತು 8ನೇ ಪ್ರಕರಣದ ಮೇರೆಗೆ ಅಥವಾ 9ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವ್ಯವಹಾರವನ್ನು ನಡೆಸುವುದಕ್ಕಾಗಿ ಅವಶ್ಯವಾದ ಕೋರಂನ್ನು ಒಳಗೊಂಡು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಗ) 9ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯ ಸದಸ್ಯರಲ್ಲದ ಆ ಮಂಡಲಿಯ ಸಮಿತಿಯ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಭತ್ಯೆಗಳು;

(ಘ) ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯೊಂದಿಗೆ ವ್ಯಕ್ತಿಗಳನ್ನು ಸಹವರ್ತಿಸಿಕೊಳ್ಳಬಹುದೋ ಆ ರೀತಿ ಮತ್ತು ಉದ್ದೇಶಗಳು ಮತ್ತು ಅಂಥ ವ್ಯಕ್ತಿಗಳಿಗೆ ಸಂದಾಯವಾಗಬೇಕಾದ ಫೀಜು ಮತ್ತು ಭತ್ಯೆಗಳು;

(ಙ) 5ನೇ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ ಮತ್ತು 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯ-ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಚ) 12ನೇ ಪ್ರಕರಣದ (4)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಗೆ ಸಮಾಲೋಚನಾ ಇಂಜಿನಿಯರನಾಗಿ ವ್ಯಕ್ತಿಯನ್ನು ಯಾವ ಷರತ್ತುಗಳಿಗೊಳಪಟ್ಟು ನೇಮಕ ಮಾಡಬಹುದೋ ಆ ಷರತ್ತುಗಳು;

(ಛ) ಕೇಂದ್ರ ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯಕಾರ್ಯದರ್ಶಿಯು ಚಲಾಯಿಸಬೇಕಾದ ಮತ್ತು ನೆರವೇರಿಸಬೇಕಾದ ಅಧಿಕಾರಗಳು ಮತ್ತು ಕರ್ತವ್ಯಗಳು;

(ಜ) . . . .

(ಝ) . . . .

(ಞ) 22ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯ ವಿಶ್ಲೇಷಕನ ವರದಿಯ ನಮೂನೆ;

(ಟ) 22ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಕನ ವರದಿಯ ನಮೂನೆ;

(ಠ) 38 ಮತ್ತು 39ನೇ ಪ್ರಕರಣಗಳ ಮೇರೆಗೆ ಕೇಂದ್ರ ಮಂಡಲಿಯ ಬಜೆಟ್ ಮತ್ತು ವಾರ್ಷಿಕ ವರದಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ಕಾಲದೊಳಗೆ ತಯಾರಿಸಬಹುದೋ ಮತ್ತು ಕೇಂದ್ರ ಸರ್ಕಾರಕ್ಕೆ ಕಳಿಸಬಹುದೋ ಆ ನಮೂನೆ ಮತ್ತು ಕಾಲ;

(ಡ) 40ನೇ ಪ್ರಕರಣದ ಮೇರೆಗೆ ಕೇಂದ್ರ ಮಂಡಲಿಯು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರಬಹುದಾದಂಥ ನಮೂನೆ;

(ಢ) ಸಂಘರಾಜ್ಯ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಕೇಂದ್ರ ಮಂಡಲಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳನ್ನು ಒಳಗೊಂಡು, ಅದಕ್ಕೆ ಸಂಬಂಧಪಟ್ಟ ಯಾವುದೇ ಇತರ ವಿಷಯಗಳು;

(ಣ) ನಿಯಮಿಸಬೇಕಾದ, ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ, ಇಡತಕ್ಕದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದಲ್ಲಿ ಬರುವ ಅಧಿವೇಶನದ ಮುಕ್ತಾಯಕ್ಕೆ ಮುಂಚೆ,ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ನಿಯಮವು ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**64.** ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:— (1) ರಾಜ್ಯ ಸರ್ಕಾರವು, ರಾಜ್ಯ ಮಂಡಲಿಯನ್ನು ರಚಿಸುವ ಕಾಲದಲ್ಲೇ, 63ನೇ ಪ್ರಕರಣದ ವ್ಯಾಪ್ತಿಯೊಳಗೆ ಬಾರದೆ ಇರುವ ವಿಷಯಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು:

ಪರಂತು, ರಾಜ್ಯ ಮಂಡಲಿಯನ್ನು ರಚಿಸಿರುವಾಗ, ಯಾವುದೇ ಅಂಥ ನಿಯಮವನ್ನು, ಆ ಮಂಡಲಿಯೊಂದಿಗೆ ಸಮಾಲೋಚನೆ ಮಾಡದೇ ರಚಿಸತಕ್ಕದ್ದಲ್ಲ, ಬದಲಾಯಿಸತಕ್ಕದ್ದಲ್ಲ, ತಿದ್ದುಪಡಿ ಮಾಡತಕ್ಕದ್ದಲ್ಲ ಅಥವಾ ನಿರಸನಗೊಳಿಸತಕ್ಕದ್ದಲ್ಲ.

(2)ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:—

(ಕ) 5ನೇ ಪ್ರಕರಣದ (8) ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಸದಸ್ಯರ (ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿಯನ್ನು ಹೊರತುಪಡಿಸಿ) ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ;

(ಖ) ಈ ಅಧಿನಿಯಮದ ಮೇರೆಗೆ ರಚಿಸಿದ ರಾಜ್ಯ ಮಂಡಲಿ ಅಥವಾ ಆ ಮಂಡಲಿಯ ಯಾವುದೇ ಸಮಿತಿಯ ಸಭೆಗಳ ಕಾಲ ಮತ್ತು ಸ್ಥಳ ಮತ್ತು 8ನೇ ಪ್ರಕರಣದ ಮೇರೆಗೆ ಮತ್ತು 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ವ್ಯವಹಾರವನ್ನು ನಡೆಸುವುದಕ್ಕಾಗಿ ಅವಶ್ಯವಾದ ಕೋರಂನ್ನು ಒಳಗೊಂಡು, ಅಂಥ ಸಭೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ;

(ಗ) 9ನೇ ಪ್ರಕರಣದ (3) ನೇ ಉಪ-ಪ್ರಕರಣದ ಮೇರೆಗೆ ಆ ಮಂಡಲಿಯು ಸದಸ್ಯರಲ್ಲದ ರಾಜ್ಯಮಂಡಲಿಯು ಸಮಿತಿಯು ಅಂಥ ಸದಸ್ಯರಿಗೆ ಸಂದಾಯ ಮಾಡಬೇಕಾದ ಫೀಜು ಮತ್ತು ಭತ್ಯೆಗಳು;

(ಘ) 10ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯೊಂದಿಗೆ ವ್ಯಕ್ತಿಗಳನ್ನು ಯಾವ ರೀತಿಯಲ್ಲಿ ಮತ್ತು ಯಾವ ಉದ್ದೇಶಗಳಿಗಾಗಿ ಸಹವರ್ತಿಸಬಹುದೋ ಆ ರೀತಿ ಮತ್ತು ಉದ್ದೇಶಗಳು, ಮತ್ತು ಅಂಥ ವ್ಯಕ್ತಿಗಳಿಗೆ ಸಂದಾಯವಾಗಬೇಕಾದ ಫೀಜು ಮತ್ತು ಭತ್ಯೆಗಳು;

(ಙ) 5ನೇ ಪ್ರಕರಣದ (9)ನೇ ಉಪಪ್ರಕರಣದ ಮೇರೆಗೆ ಮತ್ತು 12ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಚ) ಯಾವ ಷರತ್ತುಗಳಿಗೊಳಪಟ್ಟು 12ನೇ ಪ್ರಕರಣದ (4) ನೇ ಉಪ-ಪ್ರಕರಣದ ಮೇರೆಗೆ ವ್ಯಕ್ತಿಯನ್ನು ರಾಜ್ಯ ಮಂಡಲಿಗೆ ಸಮಾಲೋಚನಾ ಇಂಜನಿಯರನೆಂದು ನೇಮಕ ಮಾಡಬಹುದೋ ಆ ಷರತ್ತುಗಳು;

(ಛ) ರಾಜ್ಯ ಮಂಡಲಿಯ ಅಧ್ಯಕ್ಷ ಮತ್ತು ಸದಸ್ಯ ಕಾರ್ಯದರ್ಶಿಯು ಚಲಾಯಿಸಬೇಕಾದ ಮತ್ತು ನಿರ್ವಹಿಸಬೇಕಾದ ಅಧಿಕಾರಗಳು ಮತ್ತು ಕರ್ತವ್ಯಗಳು;

(ಜ) 21ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸಿನ ನಮೂನೆ;

(ಝ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ವಿಶ್ಲೇಷಕನ ವರದಿಯ ನಮೂನೆ;

(ಞ) 22ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಸರ್ಕಾರಿ ವಿಶ್ಲೇಷಕನ ವರದಿಯ ನಮೂನೆ;

(ಟ) 25ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಮಂಡಲಿಯ ಸಮ್ಮತಿಗಾಗಿನ ಅರ್ಜಿಯ ನಮೂನೆ ಮತ್ತು ಅದು ಒಳಗೊಳ್ಳಬಹುದಾದ ವಿವರಗಳು;

(ಠ) ರಾಜ್ಯ ಮಂಡಲಿಯ ಸಮ್ಮತಿಯನ್ನು ಪಡೆಯುವುದಕ್ಕಾಗಿನ ಅರ್ಜಿಗೆ ಸಂಬಂಧಿಸಿದಂತೆ 25ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಮಾಡಬಹುದಾದಂಥ ವಿಚಾರಣೆಯ ರೀತಿ ಮತ್ತು ಅಂಥ ಸಮ್ಮತಿಯನ್ನು ಕೊಡುವುದಕ್ಕಾಗಿ ಅಥವಾ ನಿರಾಕರಿಸುವುದಕ್ಕಾಗಿ ಪರಿಗಣನೆಗೆ ತೆಗೆದುಕೊಳ್ಳಬಹುದಾದ ವಿಷಯಗಳು;

(ಡ) ಅಪೀಲುಗಳನ್ನು ದಾಖಲು ಮಾಡಬೇಕಾದಂಥ, ನಮೂನೆ ಮತ್ತು ರೀತಿ ಮತ್ತು ಅಂಥ ಅಪೀಲುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಫೀಜು ಮತ್ತು 28ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೇರೆಗೆ ಅಪೀಲುಗಳನ್ನು ವಿಲೆಮಾಡುವಲ್ಲಿ ಅಪೀಲು ಪ್ರಾಧಿಕಾರವು ಅನುಸರಿಸಬೇಕಾದ ಪ್ರಕ್ರಿಯೆ;

(ಢ) 38 ಮತ್ತು 39ನೇ ಪ್ರಕರಣಗಳ ಮೇರೆಗೆ ರಾಜ್ಯ ಮಂಡಲಿಯ ಬಜೆಟ್ ಮತ್ತು ವಾರ್ಷಿಕ ವರದಿಗಳನ್ನು ಯಾವ ನಮೂನೆಯಲ್ಲಿ ತಯಾರಿಸಬಹುದೋ ಮತ್ತು ಯಾವ ಕಾಲದೊಳಗೆ ರಾಜ್ಯಸರ್ಕಾರಕ್ಕೆ ಅದನ್ನು ಕಳಿಸಬಹುದೋ ಆ ನಮೂನೆ ಮತ್ತು ಕಾಲ;

(ಣ) 40ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ರಾಜ್ಯ ಮಂಡಲಿಯು ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರಬೇಕಾದಂಥ ನಮೂನೆ;

(ತ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

ಮೇಲ್ಕಂಡ ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಅಧಿನಿಯಮ, 1974ರ (1974ರ 6)ರ ಕನ್ನಡ ಭಾಷಾಂತರವನ್ನು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973ರ 2ನೇ ಪ್ರಕರಣದ(ಕ) ಖಂಡದ ಮೇರೆಗೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲು ರಾಷ್ಟ್ರಪತಿಯವರು ಅಧಿಕೃತಗೊಳಿಸಿದ್ದಾರೆ.

ಕಾರ್ಯದರ್ಶಿ
ಭಾರತ ಸರ್ಕಾರ.

ನವದೆಹಲಿ
ದಿನಾಂಕ :

The above translation in Kannada of the Water Prevention and Control of Pollution Act, 1974 (6 of 1974) has been authorised by the President to be published in the Official Gazette under clause (a) of Section 2 of the Authoritative Texts (Central Laws) Act, 1973.

V. S. Ramadevi,
Secretary to the Govt. of India.

New Delhi
Date :

WD P 7800